Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE
ಸಂಪುಟ 16 | ಸಂಚಿಕೆ 41 | ಅಕ್ಟೋಬರ್ 3–9, 2022 | ಪುಟ 16 | ರೂ.10/-
Volume: 16 Issue: 41 October 3-9, 2022 Pages: 16 Price: 10/-
https://janashakthi.wordpress.com e-mail : js_weekly@yahoo.com






ಪಿಎಫ್‌ಐ ನಿಷೇಧವೊಂದೇ ಪರಿಹಾರವೇ?



ದಸರಾ ಹಬ್ಬದ 'ಬನ್ನಿ' ಬಂಗಾರದ ಬಾಳಿನ ಸೌಹಾರ್ದ ಸಂದೇಶ



ಕಾಂಗ್ರೆಸ್‌ನ 'ಭಾರತ್ ಜೋಡೋ' ಯಾತ್ರೆಯೂ ಕೋಮುವಾದದ ವಿರುದ್ಧದ ಹೋರಾಟವೂ



ಲಾಲ್ ಸಲಾಂ

ಕಾಮ್ರೇಡ್ ಕೋಡಿಯೇರಿ ಬಾಲಕೃಷ್ಣನ್

ಪಿಎಫ್ಐ ಮೇಲೆ ನಿಷೇಧದ ಕುರಿತು ಸಿಪಿಐ(ಎಂ) ಪೊಲಿಟ್‌ಬ್ಯುರೊ

ನಿಷೇಧಗಳು ಪರಿಣಾಮಕಾರಿಯಾಗಿಲ್ಲ-ವಿಭಜನಕಾರೀ ರಾಜಕೀಯವನ್ನು ಬಯಲಿಗೆಳೆಯಬೇಕು

ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್ಐ) ಉಗ್ರಗಾಮಿ ದೃಷ್ಟಿಕೋನಗಳನ್ನು ಹೊಂದಿರುವ ಸಂಘಟನೆಯಾಗಿದ್ದು, ತಾನು ವಿರೋಧಿಗಳೆಂದು ಬಗೆಯುವವರ ವಿರುದ್ಧ ಹಿಂಸಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ. ಸಿಪಿಐ(ಎಂ) ಈ ಉಗ್ರಗಾಮಿ ದೃಷ್ಟಿಕೋನಗಳನ್ನು ಬಲವಾಗಿ ವಿರೋಧಿಸುತ್ತ ಬಂದಿದೆ ಮತ್ತು ಪಿಎಫ್ಐನ ಹಿಂಸಾತ್ಮಕ ಚಟುವಟಿಕೆಗಳನ್ನು ಯಾವಾಗಲೂ ಖಂಡಿಸಿದೆ. ಆದಾಗ್ಯೂ, ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯಿದೆ(ಯುಎಪಿಎ) ಅಡಿಯಲ್ಲಿ ಪಿಎಫ್ಐ ಅನ್ನು ಕಾನೂನುಬಾಹಿರ ಸಂಘವೆಂದು ಸಾರಿರುವ ಅಧಿಸೂಚನೆಯು ಈ ಸಮಸ್ಯೆಯನ್ನು ನಿಭಾಯಿಸುವ ಮಾರ್ಗವಲ್ಲ. ಆರ್‌ಎಸ್‌ಎಸ್ ಮತ್ತು ಮಾವೋವಾದಿಗಳಂತಹ ಸಂಘಟನೆಗಳ ಮೇಲಿನ ನಿಷೇಧಗಳು ಪರಿಣಾಮಕಾರಿಯಾಗಿಲ್ಲ ಎಂಬುದು ಹಿಂದಿನ ಅನುಭವದಿಂದ ಸಾಬೀತಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಪಿಎಫ್ಐ ಕಾನೂನುಬಾಹಿರ ಅಥವಾ ಹಿಂಸಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಅದರ ವಿರುದ್ಧ ಅಸ್ತಿತ್ವದಲ್ಲಿರುವ ಕಾನೂನುಗಳ ಅಡಿಯಲ್ಲಿ ದೃಢವಾದ ಆಡಳಿತಾತ್ಮಕ ಕ್ರಮಗಳನ್ನು ವಹಿಸಬೇಕು, ಅದರ ಸಂಕುಚಿತ ಪಂಥವಾದಿ ಮತ್ತು ವಿಭಜಕ ಸಿದ್ಧಾಂತವನ್ನು ಜನರ ನಡುವೆ ಬಯಲಿಗೆಳೆಯಬೇಕು ಮತ್ತು ಅದರ ವಿರುದ್ಧ ರಾಜಕೀಯವಾಗಿ ಹೋರಾಡಬೇಕು ಎಂದು ಅದು ಹೇಳಿದೆ.

ಕೋಮು ಧ್ರುವೀಕರಣವನ್ನು ಸೃಷ್ಟಿಸುವ ಉದ್ದೇಶದಿಂದ ಪಿಎಫ್ಐ ಮತ್ತು ಆರ್‌ಎಸ್‌ಎಸ್ ಕೇರಳ ಮತ್ತು ಕರಾವಳಿ ಕರ್ನಾಟಕದಲ್ಲಿ ಹತ್ಯೆಗಳು ಮತ್ತು ಪ್ರತೀಕಾರದ ಹತ್ಯೆಗಳಲ್ಲಿ ತೊಡಗಿ ವಾತಾವರಣವನ್ನು ಕೆಡಿಸುತ್ತಿವೆ. 'ಸನಾತನ ಸಂಸ್ಥಾ' ಮತ್ತು 'ಹಿಂದೂ ಜನಜಾಗೃತಿ ಸಮಿತಿ'ಯಂತಹ ಉಗ್ರಗಾಮಿ ಸಂಘಟನೆಗಳೂ ಇವೆ, ಇವುಗಳಿಗೆ ಸೇರಿದವರು ಪ್ರಖ್ಯಾತ ಜಾತ್ಯತೀತ ಲೇಖಕರು ಮತ್ತು ವ್ಯಕ್ತಿಗಳ ಹತ್ಯೆಗಳ ಆರೋಪಿಗಳಾಗಿದ್ದಾರೆ ಎಂದು ನೆನಪಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಈ ಎಲ್ಲಾ ಶಕ್ತಿಗಳನ್ನು, ಅವು ಯಾವುದೇ ಉಗ್ರಗಾಮಿ ಬಹುಸಂಖ್ಯಾತ ಗುಂಪುಗಳನ್ನು ಅಥವಾ ಅಲ್ಪಸಂಖ್ಯಾತ ಗುಂಪುಗಳನ್ನು ಪ್ರತಿನಿಧಿಸುತ್ತಿರಲಿ, ನಾಡಿನ ಎಂದಿನ ಕಾನೂನುಗಳನ್ನು ಬಳಸಿಕೊಂಡು ಮತ್ತು ದೃಢವಾದ ಆಡಳಿತಾತ್ಮಕ ಕ್ರಮದ ಮೂಲಕ ಎದುರಿಸಬೇಕು ಎಂದಿದೆ.

ಅಂತಹ ಶಕ್ತಿಗಳನ್ನು ಎದುರಿಸುತ್ತ ಗಣರಾಜ್ಯದ ಜಾತ್ಯತೀತ-ಪ್ರಜಾಪ್ರಭುತ್ವದ ಸ್ವರೂಪವನ್ನು ಕಾಯ್ದುಕೊಳ್ಳುವುದು ಅಧಿಕಾರವನ್ನು ಚಲಾಯಿಸುವ ಮತ್ತು ಸಂವಿಧಾನವನ್ನು ಎತ್ತಿಹಿಡಿಯುವ ಪ್ರತಿಜ್ಞೆ ಮಾಡಿದವರ ಪ್ರಧಾನ ಕರ್ತವ್ಯವಾಗಿರಬೇಕು ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಕೇರಳದ ಆರೋಗ್ಯ ಕ್ಷೇತ್ರಕ್ಕೆ ಮತ್ತೊಮ್ಮೆ ರಾಷ್ಟ್ರ ಪ್ರಶಸ್ತಿ

ಹೊಸ ಎತ್ತರಕ್ಕೆ ಕೇರಳದ ಸಾರ್ವಜನಿಕ ಆರೋಗ್ಯ ವ್ಯವಸ್ಥೆ-ಪಿಣರಾಯಿ ವಿಜಯನ್



ಕೇಂದ್ರ ಸರ್ಕಾರದ ಆರೋಗ್ಯ ಮಂಥನ್ 4.0 ರಲ್ಲಿ ಭಾರತದಲ್ಲಿ ಅತಿ ಹೆಚ್ಚು ಉಚಿತ ಚಿಕಿತ್ಸೆಗಳನ್ನು ಒದಗಿಸಿದ ರಾಜ್ಯಕ್ಕೆ ನೀಡುವ ಪ್ರಶಸ್ತಿಯನ್ನು ಕೇರಳ ಗೆದ್ದಿದೆ. ರಾಜ್ಯದ 'ಕಾರುಣ್ಯ ಆರೋಗ್ಯ ಸುರಕ್ಷಾ ಪಧಥಿ' (ಕೆಎಎಸ್‌ಪಿ) ಯೋಜನೆಯ ಅತ್ಯುತ್ತಮ ಅನುಷ್ಠಾನದಿಂದಾಗಿ ಈ ಪ್ರಶಸ್ತಿಯನ್ನು ಅದು ಪಡೆದುಕೊಂಡಿದೆ. ದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯರಿಂದ ಕೇರಳದ ಎಲ್‌ಡಿಎಫ್ ಸರಕಾರದ ಆರೋಗ್ಯ ಸಚಿವೆ ವೀಣಾ ಜಾರ್ಜ್ ಪ್ರಶಸ್ತಿ ಸ್ವೀಕರಿಸಿದರು.

ಆಯುಷ್ಮಾನ್ ಭಾರತ-ಪ್ರಧಾನ ಮಂತ್ರಿ ಆರೋಗ್ಯ ಯೋಜನಾ(ಪಿಎಂಜೆಎವೈ)ಕ್ಕೆ ನಾಲ್ಕು ವರ್ಷ ತುಂಬುತ್ತಿರುವ ಸಂದರ್ಭದಲ್ಲಿ ಈ ಪ್ರಶಸ್ತಿಯನ್ನು ಕೇರಳ ಪಡೆದಿದೆ.

ಆಯುಷ್ಮಾನ್ ಭಾರತ ಯೋಜನೆಯ ಭಾಗವಾಗಿ ರಾಜ್ಯದ ಕೆಎಎಸ್‌ಪಿ ಅಡಿಯಲ್ಲಿ ಇಡೀ ದೇಶದಲ್ಲಿ ಒದಗಿಸಿರುವ ಉಚಿತ ವೈದ್ಯಕೀಯ ಚಿಕಿತ್ಸೆಗಳಲ್ಲಿ 15%ದಷ್ಟನ್ನು ಕೇರಳದಲ್ಲೇ ಒದಗಿಸಲಾಗಿದೆ ಸರ್ಕಾರಿ ವೈದ್ಯಕೀಯ ಕಾಲೇಜುಗಳಾದ ಕೊಝಿಕೋಡ್ ಮತ್ತು ಕೊಟ್ಟಾಯಂ ಈ ಉಚಿತ ವೈದ್ಯಕೀಯ ಚಿಕಿತ್ಸೆಯ ಯೋಜನೆಯ ಅನುಷ್ಠಾನದಲ್ಲಿ ಮುಂಚೂಣಿಯಲ್ಲಿವೆ. ಒಂದು ಗಂಟೆಯಲ್ಲಿ 180 ರೋಗಿಗಳಿಗೆ (ಒಂದು ನಿಮಿಷದಲ್ಲಿ 3 ರೋಗಿಗಳು) ಚಿಕಿತ್ಸೆ ಒದಗಿಸಲು ಸಾಧ್ಯವಾದುದರಿಂದ ಕೇರಳ ಈ ನಿಟ್ಟಿನಲ್ಲಿ ದೇಶದಲ್ಲಿ ಮೊದಲ ಸ್ಥಾನದಲ್ಲಿದೆ. ರಾಜ್ಯವು ಈ ಕೆಎಎಸ್‌ಪಿ ಯೋಜನೆಯ ಮೂಲಕ 1636.07 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ 43.4 ಲಕ್ಷ ಉಚಿತ ಚಿಕಿತ್ಸೆಗಳು ಲಭ್ಯವಾಗುವಂತೆ ಮಾಡಿದೆ. ಪ್ರಸ್ತುತ, ಈ ಯೋಜನೆಯ ಸೇವೆಯು ಕೇರಳದ 200 ಸರ್ಕಾರಿ ಆಸ್ಪತ್ರೆಗಳು ಮತ್ತು 544 ಖಾಸಗಿ ಆಸ್ಪತ್ರೆಗಳಲ್ಲಿ ಲಭ್ಯವಿದೆ, ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ, ರಾಜ್ಯ ಆರೋಗ್ಯ ಇಲಾಖೆಯ ಅಡಿಯಲ್ಲಿ ರಾಜ್ಯ ಆರೋಗ್ಯ ಸಂಸ್ಥೆ(ಎಸ್‌ಹೆಚ್‌ಎ) ಯನ್ನು ರಚಿಸಿ ಖಾಸಗಿ ಆಸ್ಪತ್ರೆಗಳನ್ನು ಸಹ ಒಳಗೊಳ್ಳುವ ಮೂಲಕ ಚಿಕಿತ್ಸೆಯನ್ನು ಸಂಯೋಜಿಸಲು ಸಾಧ್ಯವಾಗಿದೆ ಎಂದು ಈ ಸಂದರ್ಭದಲ್ಲಿ ಕೇರಳ ಆರೋಗ್ಯ ಮಂತ್ರಿಗಳು ನೀಡಿದ ಹೇಳಿಕೆ ತಿಳಿಸಿದೆ.

ಈ ಪ್ರಶಸ್ತಿಯೊಂದಿಗೆ ಕೇರಳದ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಹೊಸ ಎತ್ತರಕ್ಕೆ ಏರಿದೆ ರಾಜ್ಯ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ.

"ಬಿಜೆಪಿ ಅಧ್ಯಕ್ಷರು ಆರೆಸ್ಸೆಸ್‌ಗೆ ಸಲಹೆ ನೀಡುವುದೊಳ್ಳೆಯದು"

ಉಗ್ರರ ಹಿಂಸಾಚಾರವನ್ನು ಕೇರಳ ತಿರಸ್ಕರಿಸುತ್ತದೆ-ಸಿಪಿಐ(ಎಂ) ಪೊಲಿಟ್ ಬ್ಯುರೊ

ಕೇರಳ ಭಯೋತ್ಪಾದನೆಯ ಬಿಸಿ ತಾಣವಾಗುತ್ತಿದೆ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಹೇಳಿದ್ದಾರೆ. ಇದಕ್ಕೆ ಪ್ರತಿಕ್ರಯಿಸುತ್ತ, ಕೇರಳದಲ್ಲಿ ರಾಜಕೀಯ ಹಿಂಸಾಚಾರವನ್ನು ಬೆಳೆಸಿಕೊಂಡು ಹೋಗುತ್ತಿರುವುದು ಆರ್‌ಎಸ್‌ಎಸ್ ಮತ್ತು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್ಐ) ನಡೆಸುತ್ತಿರುವ ಹತ್ಯೆಗಳು ಮತ್ತು ಪ್ರತೀಕಾರದ ಹತ್ಯೆಗಳಿಂದ ಎಂಬ ಸತ್ಯವನ್ನು ಈ ಸುಳ್ಳು ಆರೋಪ ಮುಚ್ಚಿಹಾಕಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಈ ವರ್ಷವೇ, ಅಲಪ್ಪುಳ ಮತ್ತು ಪಾಲಕ್ಕಾಡ್ ಜಿಲ್ಲೆಗಳಲ್ಲಿ ಈ ಎರಡು ಸಂಘಟನೆಗಳ ಕಾರ್ಯಕರ್ತರ ಹತ್ಯೆಗಳು ಮತ್ತು ಪ್ರತೀಕಾರದ ಹತ್ಯೆಗಳಿಂದ ನಾಲ್ಕು ಸಾವುಗಳು ಸಂಭವಿಸಿವೆ ಎಂದು ಅದು ನೆನಪಿಸಿದೆ.

ಇದು ರಾಜ್ಯದಲ್ಲಿ ಕೋಮು ಶಾಂತಿಯನ್ನು ಹಾಳು ಮಾಡುವ ಮತ್ತು ಕೋಮು ಧ್ರುವೀಕರಣವನ್ನು ಸೃಷ್ಟಿಸುವ ಉದ್ದೇಶಪೂರ್ವಕ ಪ್ರಯತ್ನವಾಗಿದೆ. ಬಿಜೆಪಿ ಅಧ್ಯಕ್ಷರು ಇಂತಹ ಪ್ರಚೋದನಕಾರಿ ಚಟುವಟಿಕೆಗಳಲ್ಲಿ ತೊಡಗದಂತೆ ಆರ್‌ಎಸ್‌ಎಸ್‌ಗೆ ಸಲಹೆ ನೀಡುವುದು ಒಳ್ಳೆಯದು. ಎಲ್‌ಡಿಎಫ್ ಸರ್ಕಾರ ಎಲ್ಲಾ ಉಗ್ರಗಾಮಿ ಸಂಘಟನೆಗಳ ಹಿಂಸಾತ್ಮಕ ಚಟುವಟಿಕೆಗಳ ವಿರುದ್ಧ ದೃಢ ಕ್ರಮ ಕೈಗೊಳ್ಳುತ್ತಿದೆ.

ಕೇರಳದ ಜನರು ಕೋಮು ಸೌಹಾರ್ದತೆ ಮತ್ತು ಶಾಂತಿಗೆ ಬದ್ಧತೆಗೆ ಮೇಲ್ಪಂಕ್ತಿಯಾಗಿ ಹೆಸರುವಾಸಿಯಾಗಿದ್ದಾರೆ, ಅವರು ಯಾವುದೇ ಉಗ್ರಗಾಮಿ ಹಿಂಸಾಚಾರವನ್ನು ಸಹಿಸುವುದಿಲ್ಲ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ನಡ್ಡಾ ತಮ್ಮದೇ ಕೇಂದ್ರ ಸರಕಾರದ ಅಂಕಿ-ಅಂಶಗಳನ್ನು ನೋಡಲಿ- ಬೃಂದಾ ಕಾರಟ್

ಜೆಪಿ ನಡ್ಡಾ ನೀಡಿರುವ ಹೇಳಿಕೆ ಸಂಪೂರ್ಣ ಅವಾಸ್ತವಿಕ ಮತ್ತು ತಪ್ಪು ದಾರಿಗೆಳೆಯುವಂತದ್ದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ವರ್ಣಿಸಿದ್ದಾರೆ. ಅವರ ಪಕ್ಷದ ನಿಯಂತ್ರಣದಲ್ಲಿರುವ ಕೇಂದ್ರ ಸರ್ಕಾರವೇ ನೀಡಿರುವ ಅಂಕಿಅಂಶಗಳನ್ನು ಪರಿಶೀಲಿಸಿದರೆ ಅವರಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಶಾಂತಿ, ಕೋಮು ಸೌಹಾರ್ದತೆ, ಜನರ ಒಗ್ಗಟ್ಟು, ಸರ್ಕಾರದ ಕೆಲಸ ಹೀಗೆ ಎಲ್ಲ ಸಾಮಾಜಿಕ ಸೂಚಕಗಳಲ್ಲಿ ಕೇರಳ ಮೊದಲ ಸ್ಥಾನದಲ್ಲಿದೆ. ದೇಶದಲ್ಲಿ ಧಾರ್ಮಿಕ ದ್ವೇಷ ಮತ್ತು ಕೋಮುವಾದವನ್ನು ಬೆಳೆಸುತ್ತಿರುವವರು ಬಿಜೆಪಿ ಮತ್ತು ಆರ್‌ಎಸ್‌ಎಸ್. ಬಿಜೆಪಿಯೇತರ ಸರ್ಕಾರಗಳು ಆಡಳಿತ ನಡೆಸುತ್ತಿರುವ ಎಲ್ಲ ರಾಜ್ಯಗಳಲ್ಲಿ ಅವರು ಸಮಸ್ಯೆ ಸೃಷ್ಟಿಸುತ್ತಿದ್ದಾರೆ ಎಂದು ಬೃಂದಾ ಕ್ಯಾರಟ್ ಹೇಳಿದ್ದಾರೆ.

ಬಿಜೆಪಿ ಅಧ್ಯಕ್ಷರ ಸುಳ್ಳುಗಳು ಕೇರಳದ ಜನರಿಗೆ ತಿಳಿದಿದೆ-ಕೇರಳ ಕಾರ್ಯದರ್ಶಿಮಂಡಳಿ

ಕೇರಳದ ಎಡ ಪ್ರಜಾಸತ್ತಾತ್ಮಕ ರಂಗದ ಸರ್ಕಾರದ ವಿರುದ್ಧ ಜೆಪಿ ನಡ್ಡಾ ಅವರ ಸುಳ್ಳು ಪ್ರಚಾರವನ್ನು ಕೇರಳದ ಜನರು ಧಿಕ್ಕರಿಸುತ್ತಾರೆ ಎಂದು ಸಿಪಿಐ(ಎಂ) ಕೇರಳ ರಾಜ್ಯ ಕಾರ್ಯದರ್ಶಿ ಮಂಡಳಿ ಹೇಳಿದೆ. ಎಲ್‌ಡಿಎಫ್ ಸರ್ಕಾರದ ಆಡಳಿತದಲ್ಲಿ ಕೇರಳ ಒಂದೇ ಒಂದು ಕೋಮುಗಲಭೆ ಇಲ್ಲದ ರಾಜ್ಯವಾಗಿದೆ. ರಾಜ್ಯದಲ್ಲಿ ವಿವಿಧ ರೀತಿಯ ಸಂಘರ್ಷಗಳನ್ನು ಎಬ್ಬಿಸಲು ಸಂಘಪರಿವಾರ ಪ್ರಯತ್ನಿಸಿದಾಗ, ಎಲ್‌ಡಿಎಫ್ ಸರ್ಕಾರವು ಅವುಗಳನ್ನು ಮೊಳಕೆಯಲ್ಲೇ ಚಿವುಟಿ ಹಾಕಿತು. ವಾಟ್ಸಾಪ್ ಹರತಾಳ ವಿರೋಧಿಸಿ ರಾಜ್ಯದಲ್ಲಿ ಮಾದರಿ ಕೆಲಸ ಮಾಡಲಾಗಿದೆ ಎಂದು ಅದು ಹೇಳಿದೆ.

ಭಾರತದಲ್ಲಿ ಅತಿ ಹೆಚ್ಚು ಧಾರ್ಮಿಕ ಸೌಹಾರ್ದತೆ ಹೊಂದಿರುವ ರಾಜ್ಯದ ಬಗ್ಗೆ ಅದು ಭಯೋತ್ಪಾದಕರ ಸ್ವರ್ಗವಾಗಿದೆ ಎಂಬ ಅಪಪ್ರಚಾರ ನಡೆಸಲಾಗುತ್ತಿದೆ. ದೇಶದಲ್ಲಿ ಗಲಭೆಗಳನ್ನು ಸೃಷ್ಟಿಸಲು ಪ್ರಜ್ಞಾಪೂರ್ವಕ ಯೋಜನೆಗಳನ್ನು ರೂಪಿಸುವಲ್ಲಿ ಆರ್‌ಎಸ್‌ಎಸ್ ಮುಂಚೂಣಿಯಲ್ಲಿದೆ ಎಂಬುದು ಹಗಲಿನಷ್ಟೇ ಸ್ಪಷ್ಟವಾಗಿದೆ. ಕಳೆದ 5 ವರ್ಷಗಳಲ್ಲಿ 17 ಸಿಪಿಐ(ಎಂ) ಕಾರ್ಯಕರ್ತರನ್ನು ಆರ್‌ಎಸ್‌ಎಸ್ ಹಂತಕರು ಕೊಂದಿದ್ದಾರೆ ಎಂಬ ಸತ್ಯ ಕೇರಳದ ಜನರಿಗೆ ತಿಳಿದಿದೆ, ಅವರ ಮುಂದೆ ಇಂತಹ ಸುಳ್ಳುಗಳನ್ನು ನೆಟ್ಟರೆ, ಅವಕ್ಕೆ ಉಳಿಗಾಲವಿಲ್ಲ ಎಂದು ಬಿಜೆಪಿಯ ಅಖಿಲ ಭಾರತ ಅಧ್ಯಕ್ಷರು ಅರ್ಥಮಾಡಿಕೊಳ್ಳಬೇಕು ಎಂದು ಕಾರ್ಯದರ್ಶಿ ಮಂಡಳಿ ಹೇಳಿದೆ.

ವೈವಾಹಿಕ ಸ್ಥಾನಮಾನವೇನೇ ಇರಲಿ, ಎಲ್ಲಾ ಮಹಿಳೆಯರಿಗೆ ಗರ್ಭಪಾತದ ಹಕ್ಕಿದೆ-ಸುಪ್ರೀಂ ಕೋರ್ಟ್ ತೀರ್ಪು

ವೈವಾಹಿಕ ಅತ್ಯಾಚಾರದ ಐ.ಪಿ.ಸಿ,. ಯ ವಿನಾಯಿತಿಯ ಸಿಂಧುತ್ವದ ಪ್ರಶ್ನೆಯ ಮೇಲೆ ಪರಿಣಾಮ ಬೀರಬಹುದಾದ ತೀರ್ಪು

ಮಹಿಳೆಯರ ಮೇಲೆ ಅತ್ಯಾಚಾರ ಎಂಬುದನ್ನು ವೈದ್ಯಕೀಯ ಗರ್ಭಪಾತ ಕಾಯಿದೆ, 1971 (ಎಂಟಿಪಿ)ರ ಅಡಿಯಲ್ಲಿ ವೈವಾಹಿಕ ಅತ್ಯಾಚಾರವನ್ನು ಒಳಗೊಂಡಂತೆ ಅರ್ಥೈಸಿಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಸಪ್ಟಂಬರ್ 29ರಂದು ನೀಡಿರುವ ತೀರ್ಪಿನಲ್ಲಿ ಹೇಳಿದೆ. ಈ ಕಾಯಿದೆ ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳನ್ನು ಕುರಿತಂತೆ ಯಾವುದೇ ಇತರ ವ್ಯಾಖ್ಯಾನ ಕೊಟ್ಟರೆ ಅದು ಮಹಿಳೆಗೆ ಮಾನಸಿಕ ಮತ್ತು ದೈಹಿಕ ಹಾನಿಯನ್ನುಂಟು ಮಾಡುವ ಪಾಲುದಾರರೊಂದಿಗೆ ಮಗುವಿಗೆ ಜನ್ಮ ನೀಡಲು ಮತ್ತು ಬೆಳೆಸಲು ಒತ್ತಾಯಿಸಿದಂತಾಗುತ್ತದೆ ಎಂದು ಅದು ಹೇಳಿದೆ.

ಈ ಮೂಲಕ ವೈದ್ಯಕೀಯ ಗರ್ಭಪಾತ ಕಾಯಿದೆಯ ಅಡಿಯಲ್ಲಿ ಅವಿವಾಹಿತ ಮಹಿಳೆಯರಿಗೂ ಗರ್ಭಪಾತದ ಹಕ್ಕನ್ನು ಸುಪ್ರಿಂ ಕೋರ್ಟ್ ಎತ್ತಿಹಿಡಿದಿದೆ. ಇದು ಮಹಿಳೆಯರ ಹಕ್ಕುಗಳನ್ನು ಮುಂದೊಯ್ಯುವ ಒಂದು ಅತ್ಯಂತ ಮಹತ್ವದ ತೀರ್ಪು ಎಂದು ಸಿಪಿಐ(ಎಂ) ತನ್ನ ಫೇಸ್‌ಬುಕ್ ಟಿಪ್ಪಣಿಯಲ್ಲಿ ಹೇಳುತ್ತ ಇದನ್ನು ಸ್ವಾಗತಿಸಿದೆ. ಈ ತೀರ್ಪಿನಲ್ಲಿ ಮೂರು ಅಂಶಗಳಿವೆ ಎಂದು ಅದು ಹೇಳಿದೆ:

1. ಈ ತೀರ್ಪು ಪುನರುತ್ಪತ್ತಿಯ ವಿಷಯದಲ್ಲಿ ಮಹಿಳೆಗೆ ಸ್ವಾಯತ್ತತೆ ಇದೆ ಎಂಬುದನ್ನು ಮಾನ್ಯ ಮಾಡಿದೆ.
2. ಇದು ವೈವಾಹಿಕ ಅತ್ಯಾಚಾರ ಎಂಬುದೊಂದು ವಾಸ್ತವ ಎಂದೂ ಗುರುತಿಸಿದೆ; ಸರಕಾರ ಈ ಪರಿಕಲ್ಪನೆಯನ್ನೇ ನಿರಾಕರಿಸುತ್ತಿದೆ ಎಂಬುದನ್ನು ಗಮನಿಸಬೇಕು.
3. ಪರಸ್ಪರ ಸಮ್ಮತಿಯಿರುವ ವಯಸ್ಕರ ನಡುವೆ ವಿವಾಹದ ಹೊರಗಾಗಲೀ ಅಥವ ಮೊದಲಾಗಲೀ ಲೈಂಗಿಕ ಸಂಬಂಧಗಳನ್ನು ಮತ್ತು ಅದರಿಂದ ಹೊಮ್ಮುವ ಕಾನೂನು ಹಕ್ಕುಗಳನ್ನು ಇದು ಮಾನ್ಯ ಮಾಡುತ್ತದೆ.

ತನ್ನ 24 ವಾರಗಳ ಗರ್ಭಪಾತಕ್ಕೆ ಅನುಮತಿಯನ್ನು ದೆಹಲಿ ಹೈಕೋರ್ಟ್ ನಿರಾಕರಿಸಿದ್ದನ್ನು ಪ್ರಶ್ನಿಸಿ ಒಬ್ಬ ಅವಿವಾಹಿತ ಮಹಿಳೆ ಸಲ್ಲಿಸಿದ ಅರ್ಜಿಯ ಮೇಲೆ ನ್ಯಾಯ ಮೂರ್ತಿ ಡಿ ವೈ ಚಂದ್ರಚೂಡ್ ನೇತೃತ್ವದ ಮೂವರು ನ್ಯಾಯಾಧೀಶರ ಪೀಠವು ಈ ತೀರ್ಪು ನೀಡಿದೆ.

ಭಾರತೀಯ ದಂಡ ಸಂಹಿತೆಯಲ್ಲಿ ವೈವಾಹಿಕ ಅತ್ಯಾಚಾರಕ್ಕೆ ನೀಡಿರುವ ವಿನಾಯಿತಿಗೆ ಸಾಂವಿಧಾನಿಕ ಸಿಂಧುತ್ವ ಇದೆಯೇ ಎಂಬ ಪ್ರಶ್ನೆ ಸುಪ್ರೀಂ ಕೋರ್ಟ್‌ನ ಇನ್ನೊಂದು ಪೀಠದ ಮುಂದೆ ವಿಚಾರಣಾಧೀನವಾಗಿದೆ ಎಂಬುದನ್ನು ಇಲ್ಲಿ ಗಮನಿಸಬಹುದು.

ಸಂಪಾದಕೀಯ

ಪಿ.ಎಫ್.ಐ. ನಿಷೇಧವೊಂದೇ ಪರಿಹಾರವೇ?

ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಮತ್ತು ಸೋಷಿಯಲ್ ಡೆಮೋಕ್ರಾಟಿಕ್ ಪಾರ್ಟಿ ಆಫ್ ಇಂಡಿಯಾ ಗಳ ಕಛೇರಿಗಳ ಮೇಲೆ ಎನ್.ಐ.ಎ. ತಂಡಗಳ ಧಾಳಿ ಮತ್ತು ಕಾರ್ಯಕರ್ತರ ಬಂಧನಗಳ ಬಳಿಕ ಭಾರತ ಸರಕಾರ ಪಿ.ಎಫ್.ಐ. ಸಂಘಟನೆಯನ್ನು ನಿಷೇಧಿಸಿದೆ. 'ದೇಶದ ಸುರಕ್ಷತೆ, ಶಾಂತಿ, ಸೌಹಾರ್ದತೆಗೆ ಧಕ್ಕೆ ತರುವ ಶಕ್ತಿಗಳು ಇವಾಗಿದ್ದು ಸರಕಾರದ ನಿರ್ಧಾರ ಸೂಕ್ತವಾಗಿದೆ. ಇದರಿಂದ ಶಾಂತಿ, ಸಾಮರಸ್ಯವನ್ನು ಕಾಪಾಡಿದಂತಾಗಿದೆ' ಎಂದು ಮುಖ್ಯಮಂತ್ರಿ ಬೊಮ್ಮಾಯಿ, ಗೃಹ ಸಚಿವ ಆರಗ ಜ್ಞಾನೇಂದ್ರ ರವರನ್ನು ಒಳಗೊಂಡು ಅನೇಕ ಬಿಜೆಪಿ ನಾಯಕರು, ಸಚಿವರು ಸ್ವಾಗತಿಸಿದ್ದಾರೆ. ಈ ದಾಳಿಗಳು ನಡೆಯುವ ಮೊದಲೇ ಬಿಜೆಪಿ ನಾಯಕರು ಪಿಎಫ್ಐ ಮತ್ತು ಎಸ್‌ಡಿಪಿಐ ಗಳನ್ನು ನಿಷೇಧಿಸಬೇಕೆಂಬ ಬೇಡಿಕೆಯನ್ನು ಮಂಡಿಸುತ್ತಿದ್ದರು. ಈ ಕ್ರಮದ ಮೂಲಕ ಬಿಜೆಪಿ ತನ್ನ ಮತೀಯ ಧೃವೀಕರಣದ ತಂತ್ರದ ರಾಜಕೀಯ ಲಾಭ ಹೊಡೆಯಲು ಯತ್ನಿಸುತ್ತಿದೆ.

ನಿಷೇಧದ ಈ ಕ್ರಮ ಸಾರ್ವಜನಿಕರಲ್ಲಿ ಕೆಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ ಮತ್ತು ಈ ಸಂಘಟನೆಗಳ ಕಾರ್ಯವಿಧಾನದ ಬಗ್ಗೆ ಹೆಚ್ಚಿನ ಸ್ಪಷ್ಟನೆಯನ್ನು ಮತ್ತು ಈ ಸಂಘಟನೆಗಳ ಸ್ವರೂಪ ಮತ್ತು ವಹಿಸುತ್ತಿರುವ ಪಾತ್ರವನ್ನು ವಿಮರ್ಶೆ ಮಾಡಿಕೊಳ್ಳಲು ಒತ್ತಾಸೆ ಸೃಷ್ಟಿಸಿದೆ.

ಪಿಎಫ್ಐ ಸಂಘಟನೆ ಮುಸ್ಲಿಂ ಮೂಲಭೂತವಾದಿ ಎನ್ನುವುದರಲ್ಲಿ ಅನುಮಾನವಿಲ್ಲ ಮತ್ತು ತನ್ನ ಉದ್ದೇಶದ ಈಡೇರಿಕೆಗೆ ಅದು ವಹಿಸುತ್ತಿದ್ದ ಉಗ್ರಗಾಮಿ ಭಯೋತ್ಪಾದಕ ಮಾರ್ಗಗಳು ಪ್ರಶ್ನಾರ್ಹವಾಗಿವೆ. ಮೇಲಾಗಿ ಇದು ಸಾರ್ವಜನಿಕ ಮತ್ತು ಸಾಮಾಜಿಕ ಸಂಘಟನೆ ಎಂದು ಹೇಳಿಕೊಂಡರೂ ಇದರ ಒಟ್ಟು ಚಟುವಟಿಕೆಗಳು ಭೂಗತ ಸ್ವರೂಪದಲ್ಲಿದ್ದು ಪಾರದರ್ಶಕವಾಗಿ ಇಲ್ಲ ಎನ್ನುವುದು ಸ್ಪಷ್ಟ. ಕರ್ನಾಟಕ ರಾಜ್ಯದಲ್ಲಿಯೂ ಮತ್ತು ಕೇರಳ ಒಳಗೊಂಡು ಇತರೆ ಕಡೆಗಳಲ್ಲಿಯೂ ನಡೆದ ಹಿಂಸಾತ್ಮಕ ದಾಳಿಗಳಲ್ಲಿ ಈ ಸಂಘಟನೆಯ ಕೈವಾಡ ಇರುವುದು ಕೇಳಿ ಬರುತ್ತದೆ. ನಿಜ ಅಂತಹ ಘಟನೆಗಳು ಮತ್ತು ಅದಕ್ಕೆ ವ್ಯಕ್ತಗೊಳ್ಳುವ ಪ್ರತಿಕ್ರಿಯೆಗಳ ಬಳಿಕ ಉಂಟಾಗುವ ಒಟ್ಟಾರೆ ವಾತಾವರಣವನ್ನು ಗಮನಿಸಿದಾಗ ಹತ್ಯೆ ಮತ್ತು ಪ್ರತಿ ಹತ್ಯೆಗಳನ್ನು ನಡೆಸಿದ ಶಕ್ತಿಗಳು ಬೇರೆ ಬೇರೆ ಎಂದು ಕಂಡರೂ ಅಂತಿಮವಾಗಿ ಪರಸ್ಪರ ಲಾಭ ಮಾಡುವುದು ಮತೀಯತೆಯ ಆಧಾರದಲ್ಲಿ. ಹೀಗೆ ಅಂತಹ ಸ್ಥಿತಿಯಲ್ಲಿ ಕೋಮುವಾದೀ ನೆಲೆಯಲ್ಲಿ ಜನತೆಯನ್ನು ವಿಭಜಿಸಿ ಧೃವೀಕರಿಸುವ ಪರಿಣಾಮಗಳು ಎದ್ದು ಕಾಣುತ್ತಿದ್ದವು. ಹೀಗಾಗಿಯೇ ಕರಾವಳಿ ಮತ್ತು ಇತರೆ ಭಾಗಗಳಲ್ಲಿ ಸಂಘ ಪರಿವಾರ ಮತ್ತು ಪಿಎಫ್ಐ ನಡುವಿನಲ್ಲಿ ಒಂದು ಸಂಯೋಜಿತ ಕಾರ್ಯಾಚರಣೆಗಳು, ತಿಳುವಳಿಕೆ ಇರುವುದರ ಬಗ್ಗೆ ಅನೇಕ ಅನುಮಾನಗಳು ಸಾರ್ವಜನಿಕವಾಗಿ ವ್ಯಕ್ತಗೊಂಡಿದ್ದವು ಮತ್ತು ಕಾಲಾನುಕ್ರಮದಲ್ಲಿ ಹಲ ಸರಣಿ ನಿದರ್ಶನಗಳಿಂದ ನಿಚ್ಚಳಗೊಂಡಿದ್ದವು. ಅಂದರೆ ಈ ಎರಡು ಶಕ್ತಿಗಳು ಸಾಮಾಜಿಕ ಶಾಂತಿ, ಜನತೆಯ ಸಾಮರಸ್ಯ ಮತ್ತು ಸೌಹಾರ್ದತೆಗೆ ತೀವ್ರತರ ಭಂಗ ಉಂಟು ಮಾಡುತ್ತಿದ್ದ ಅಪಾಯವನ್ನು ನಮ್ಮ ಸಮಾಜ ಎದುರಿಸುತ್ತಾ ಬಂದಿದೆ. ಈಗಲೂ ಪಿಎಫ್ಐ ನ ನಿಷೇಧದಿಂದಾಗಿ ಅಂತಹ ವಾತಾವರಣ ಪೂರ್ಣವಾಗಿ ಇಲ್ಲವಾಗಿದೆ ಎಂದು ಯಾವ ಕಾರಣಕ್ಕೂ ಹೇಳಲು ಸಾಧ್ಯವೇ ಇಲ್ಲ. ಅಂದರೆ ಸಂಘ ಪರಿವಾರದ ನಾಯಕರು ಹೇಳುವಂತೆ ಪಿ.ಎಫ್.ಐ. ನಿಷೇಧದಿಂದ ಶಾಂತಿ ಸೌಹಾರ್ದತೆ ನೆಲೆಗೊಂಡು ಬಿಡುತ್ತವೆ ಎನ್ನುವುದು ಸಹ ತೀರಾ ಮೇಲ್ಪದರಿನ ಹೇಳಿಕೆಯಾಗಿ ಉಳಿಯುತ್ತದೆ. ಯಾಕೆಂದರೆ ಇಂತಹ ಶಕ್ತಿಗಳು ಬೆಳೆಯಲು ಮತ್ತು ಪ್ರೋತ್ಸಾಹ ಹೊಂದಲು ಕಾರಣವಾದ ಒಟ್ಟು ವಾತಾವರಣವು ಬದಲಾಗದೆ ಅಂತಹ ಕುಕೃತ್ಯಗಳನ್ನು ತಡೆಯುವುದು ಕಷ್ಟದಾಯಕ. ದೇಶದಲ್ಲಿ ಹಿಂದುತ್ವವಾದಿ ಫ್ಯಾಸಿಸ್ಟ್ ಸಿದ್ಧಾಂತವನ್ನು ಆಧರಿಸಿ ಅಲ್ಪಸಂಖ್ಯಾತರ ಮೇಲೆ ನಿರಂತರ ದಾಳಿಗಳು, ತಾರತಮ್ಯ ಮತ್ತು ದಬ್ಬಾಳಿಕೆಗಳು ನಡೆಯುತ್ತಾ ಹೋಗುವುದು ಪಿಎಫ್ಐ ನಂತಹ ಮೂಲಭೂತವಾಗಿ ಶಕ್ತಿಗಳು ಜನತೆಯ ಅತೃಪ್ತಿಯನ್ನು ದುರುಪಯೋಗ ಮಾಡಿ ಬೆಳೆಯಲು ಫಲವತ್ತಾದ ಭೂಮಿಕೆಯನ್ನು ಒದಗಿಸುತ್ತದೆ ಎನ್ನುವ ವಾಸ್ತವದತ್ತ ಎಲ್ಲರೂ ಗಮನ ಹರಿಸಬೇಕು. ಈ ಪರಿಸ್ಥಿತಿ ಬದಲಾಗದೇ ಶಾಂತಿ, ಸಾಮರಸ್ಯ ನೆಲೆಗೊಳ್ಳಲು ಸಾಧ್ಯವಿಲ್ಲ. ಆದುದರಿಂದಲೇ ಹಿಂದುತ್ವದ ಕೋಮುವಾದಿ ಶಕ್ತಿಗಳು ಮತ್ತು ಮುಸ್ಲಿಂ ಮೂಲಭೂತವಾದಿ ಮತ್ತಿತರೆ ಅಂತಹ ಯಾವುದೇ ಶಕ್ತಿಗಳು ಸನ್ನಿವೇಶವನ್ನು ದುರ್ಬಳಕೆ ಮಾಡಿಕೊಳ್ಳುವ ಇಡೀ ಪರಿಸ್ಥಿತಿ ಬದಲಾಗದೆ ಹೋದಲ್ಲಿ ಶಾಂತಿ, ಸಾಮರಸ್ಯ ಕದಡುವ ಬೆದರಿಕೆಗಳು ನಿವಾರಣೆಯಾಗುವುದಿಲ್ಲ. ದೇಶಕ್ಕೆ ಭದ್ರತೆ ಒದಗುವುದಿಲ್ಲ. ಇಂತಹ ಮೂಲಭೂತ ಅಂಶಗಳನ್ನು ಪರಿಗಣಿಸದ ಯಾವುದೇ ಕ್ರಮಗಳು, ಅಬ್ಬರದ ಹೇಳಿಕೆಗಳು ಕೇವಲ ತೋರಿಕೆಯ ತಂತ್ರ ಎನ್ನುವುದರಲ್ಲಿಯೂ ಅನುಮಾನವಿಲ್ಲ. ಅಂದರೆ ಒಂದು ಕಡೆಯಲ್ಲಿ ಇಂತಹ ಶಕ್ತಿಗಳು ನಡೆಸುವ ಕುಕೃತ್ಯಗಳ ಸ್ವರೂಪ, ಪ್ರಮಾಣವನ್ನು ಲಕ್ಷಿಸಿ ಅವುಗಳ ಮೇಲೆ ಕಠಿಣ ಕಾನೂನಾತ್ಮಕ ಮತ್ತು ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳುವಾಗಲೇ ಮೂಲಭೂತವಾಗಿ ಆ ಶಕ್ತಿಗಳು ಜನತೆಯ ಆತಂಕದ ಸ್ಥಿತಿಯನ್ನು ದುರುಪಯೋಗ ಮಾಡಿಕೊಳ್ಳಲಾರದೆ ಹೋಗುವಂತಹ ವಾತಾವರಣವನ್ನು ಸೃಷ್ಟಿಸುವ ರಾಜಕೀಯ ಕ್ರಮಗಳು ಅತಿ ಮುಖ್ಯವಾಗಿವೆ. ಇದರತ್ತ ಗಮನವನ್ನು ಕೊಡದೆ ಹೋಗುವ ಕ್ರಮಗಳು ಮತ್ತು ಅಬ್ಬರದ ಮಾತುಗಳು ಕೇವಲ ರಾಜಕೀಯ ಸ್ಟಂಟ್‌ಗಳಾಗಿ ಇರುತ್ತವೆ.

ಇನ್ನೊಂದೆಡೆಯಲ್ಲಿ ಪಿ.ಎಫ್.ಐ ನಂತಹ ಗುರಿಗಳನ್ನು ಹೊಂದಿ ಅಂತಹುದೇ ಮತ್ತು ಅತಿ ದೊಡ್ಡ ರೀತಿಯಲ್ಲಿಯೂ ಬೆದರಿಕೆ ಒಡ್ಡುವಂತಹ ಕೃತ್ಯಗಳನ್ನು ನಡೆಸುತ್ತಿರುವ ಕಾನೂನು, ಸಂವಿಧಾನಕ್ಕೆ ಸವಾಲು ಹಾಕಿರುವ ಹಿಂದುತ್ವವಾದಿ ಶಕ್ತಿಗಳ ಮೇಲೆ ಯಾವುದೇ ಕ್ರಮಗಳನ್ನು ವಹಿಸದೆ ಒಂದರ್ಥದಲ್ಲಿ ಮುಕ್ತಾವಕಾಶಗಳನ್ನು ಕಲ್ಪಿಸಿರುವ ಸರಕಾರದ ಕ್ರಮಗಳನ್ನೂ ಪ್ರಶ್ನಿಸಲಾಗುತ್ತಿದೆ. ಕರ್ನಾಟಕದಲ್ಲಿಯೇ ಡಾ. ಎಂ.ಎಂ.ಕಲಬುರ್ಗಿ, ಗೌರಿ ಲಂಕೇಶ್ ಹಾಗೇ ಗೋವಿಂದ ಪನ್ಸಾರೆ, ಯಂತಹ ಪ್ರಮುಖ ಪ್ರಗತಿಪರ ಚಿಂತಕರ, ಸಾಮಾಜಿಕ ಕಾರ್ಯಕರ್ತರ ಹತ್ಯೆಯ ಪ್ರಕರಣಗಳಲ್ಲಿ ಇಲ್ಲಿಯವರೆಗೂ ನಿರ್ಣಾಯಕ ನ್ಯಾಯ ದೊರೆತಿಲ್ಲ. ಮತ್ತು ಹತ್ಯೆಯಲ್ಲಿ ಭಾಗಿಯಾದ ಸನಾತನ ಸಂಸ್ಥೆ, ಹಿಂದೂ ಜಾಗೃತಿ ಸಮಿತಿ, ಹಾಗೂ ಇಂತಹುದೇ ಶಾಂತಿ ಕದಡುವ ಕೃತ್ಯಗಳಲ್ಲಿ ಅಭಿನವ ತರುಣ ಭಾರತ ದಂತಹ ಸಂಘಟನೆಗಳ ಮೇಲೆ ನಿರ್ಬಂಧದ ಕಾನೂನು ಕ್ರಮಗಳೇ ಇಲ್ಲ. ವಿಚಾರವಾದಿಗಳ ಹತ್ಯೆಯನ್ನೇ ಗುರಿಯಾಗಿಸಿ ತರಬೇತಿ ಹೊಂದಿರುವ ಕಾರ್ಯಕರ್ತರ ಆ ಸಂಸ್ಥೆಗಳು ಈಗಲೂ ಮುಕ್ತವಾಗಿ ಕಾರ್ಯಾಚರಣೆ ನಡೆಸುತ್ತಿವೆ ಎಂದರೆ ಕೇಂದ್ರ ಹಾಗೂ ರಾಜ್ಯ ಸರಕಾರಗಳ ನಿಜ ಉದ್ದೇಶ ಏನು ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. 'ಹಿಂದು ನಾಯಕರ ಕೊಲೆಗೆ ಯೋಜನೆ ರೂಪಿಸಲಾಗಿದೆ, ಅದಕ್ಕೆ ಪ್ರತಿಯಾಗಿ ಮುಸ್ಲಿಂರನ್ನು ಕೊಲೆ

ಪುಟ 4 ಕ್ಕೆ

ದಲಿತ ಬಾಲಕ ದೇವರ ಗುಜ್ಜಕೋಲು ಮುಟ್ಟಿದ್ದಕ್ಕೆ ಉಲ್ಲೇರಹಳ್ಳಿಯಲ್ಲಿ ಅರವತ್ತು ಸಾವಿರ ದಂಡ:

ಅಮಾನವೀಯ ಕ್ರಮಕ್ಕೆ ತೀವ್ರ ಪ್ರತಿಭಟನೆ

ಮಾಲೂರು ತಾಲ್ಲೂಕಿನ ಉಲ್ಲೇರಹಳ್ಳಿ ಗ್ರಾಮದಲ್ಲಿ ದೇವರ ಉತ್ಸವದ ಸಂದರ್ಭದಲ್ಲಿ ಕೆಳಗೆ ಬಿದ್ದ ಗುಜ್ಜು ಕೋಲನ್ನು ಮುಟ್ಟಿದ್ದಕ್ಕೆ 60 ಸಾವಿರ ರೂ. ದಂಡ ವಿಧಿಸಿ, ದಂಡವನ್ನು ಪಾವತಿ ಮಾಡದಿದ್ದರೆ ಗ್ರಾಮವನ್ನು ತೊರೆದು ಹೋಗುವಂತೆ ದಲಿತ ಕುಟುಂಬಕ್ಕೆ ಬೆದರಿಕೆ ಹಾಕಲಾಗಿದೆ.

ಮಾಲೂರು ತಾಲ್ಲೂಕಿನ ಟೇಕಲ್ ಹೋಬಳಿ ಕೆ.ಜಿ.ಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಉಲ್ಲೇರಹಳ್ಳಿ ಗ್ರಾಮದಲ್ಲಿ ದಿನಾಂಕ : 8–9–2022 ರಂದು ಗ್ರಾಮದ ದೇವತೆಯಾದ ಬೂತಮ್ಮನ ಉತ್ಸವವು ಗ್ರಾಮದಲ್ಲಿ ನಡೆಸಲಾಗಿತ್ತು. ದೇವರ ಪಲ್ಲಕ್ಕಿಯನ್ನು ಬುಜದ ಮೇಲೆ ಎತ್ತಿಕೊಂಡು ಹೋಗುವ ಮಧ್ಯೆ ಪಲ್ಲಕ್ಕಿಯನ್ನು ಸ್ವಲ್ಪ ಸಮಯ ಅಲ್ಲಲ್ಲೆ ನಿಲ್ಲಿಸುತ್ತಾರೆ. ಈ ಸಂದರ್ಭದಲ್ಲಿ ಗುಜ್ಜಕೋಲಿನ ಮೇಲೆ ಪಲ್ಲಕ್ಕಿಯನ್ನು ಇಟ್ಟು ನಂತರ ಮುಂದೆ ಸಾಗುವುದು ವಾಡಿಕೆ. ಉತ್ಸವದ ದಿನ ಗ್ರಾಮದ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿಯನ್ನು ಎತ್ತಿಕೊಂಡು ಹೋಗುತ್ತಿದ್ದಾಗ ಪಲ್ಲಕ್ಕಿ ಹೊತ್ತಿದ್ದ ವ್ಯಕ್ತಿಯ ಕೈಯಿಂದ ಕೆಳಗೆ ಬಿದ್ದಿದ್ದ ಗಮನಿಸಿದ ಉಲ್ಲೇರಹಳ್ಳಿ ಗ್ರಾಮದ ದಲಿತ ಬಾಲಕ ಚೇತನ್ ಗುಜ್ಜಕೋಲನ್ನು ಎತ್ತಿ ಆ ವ್ಯಕ್ತಿಗೆ ನೀಡುವನು. ಇದರಿಂದ ತೀವ್ರ ಆಕ್ರೋಶಗೊಂಡ ಪಲ್ಲಕ್ಕಿ ಹೊತ್ತಿದ್ದವರು ಬಾಲಕನಿಗೆ ಹೊಡೆದು, ಬೆದರಿಕೆ ಹಾಕಿ ಕಳುಹಿಸುವರು.

ವರದಿ: ವಿಜಯಕೃಷ್ಣ

ಮಾರನೆಯ ದಿನ ಊರಿನಲ್ಲಿ ಪಂಚಾಯಿತಿ ಸೇರಿದ ಗ್ರಾಮಸ್ಥರು ದಲಿತ ಬಾಲಕ ಗುಜ್ಜಕೋಲನ್ನು ಮುಟ್ಟಿದ್ದರಿಂದ ಮೈಲಿಗೆ ಆಗಿದ್ದು, ಈ ಮೈಲಿಗೆ ಹೋಗಲು ದೇವಸ್ಥಾನಕ್ಕೆ ಬಣ್ಣ ಬಳಿಯಬೇಕು, ಪಲ್ಲಕ್ಕಿಯನ್ನು ಹೊಸದಾಗಿ ಮಾಡಿಸಬೇಕು ಮತ್ತು ವಿಶೇಷ ಪೂಜೆ ಮಾಡಿಸಬೇಕಾಗಿದೆ. ಇದಕ್ಕೆ ತಗಲುವ 60 ಸಾವಿರ ರೂ. ವೆಚ್ಚವನ್ನು ದಲಿತ ಬಾಲಕ ಚೇತನ್ ಕುಟುಂಬ ನೀಡಬೇಕೆಂದು ಬಾಲಕನ ತಾಯಿ ಶೋಭರಿಗೆ ಗ್ರಾಮಸ್ಥರು ತೀರ್ಮಾನ ಹೇಳುವರು. ಇದರಿಂದ ತೀವ್ರ ಆಘಾತಕ್ಕೆ ಒಳಗಾದ ಶೋಭರವರು 'ನನ್ನ ಗಂಡ ರಮೇಶ್‌ರವರಿಗೆ ಅಪಘಾತವಾಗಿ ಕೆಲಸ ಮಾಡದಂತಹ ಪರಿಸ್ಥಿತಿಯಲ್ಲಿ ಇದ್ದಾರೆ. ತಾನು ಕೂಲಿ ಮಾಡಿಕೊಂಡು ಜೀವನ ಮಾಡುತ್ತಿದ್ದು, ನನಗೆ 60 ಸಾವಿರ ನೀಡಲು ಶಕ್ತಿ ಇಲ್ಲ'ವೆಂದು ಅಂಗಲಾಚಿದರೂ ಗ್ರಾಮಸ್ಥರು ಒಪ್ಪುವುದಿಲ್ಲ.

ನಾಲ್ಕೈದು ದಿನಗಳ ಕಾಲ ಶೋಭರವರು 60 ಸಾವಿರ ರೂ. ಹೊಂದಿಸಲು ಸಾಕಷ್ಟು ಪ್ರಯತ್ನ ಪಟ್ಟರೂ ಹೊಂದಿಸಲು ಸಾಧ್ಯವಾಗುವುದಿಲ್ಲ. ನಂತರ ಗ್ರಾಮಸ್ಥರು 60 ಸಾವಿರ ರೂ. ದಂಡ ಪಾವತಿ ಮಾಡದಿದ್ದರೆ ಗ್ರಾಮವನ್ನು ತೊರೆದು ಹೋಗುವಂತೆ ಬೆದರಿಕೆ ಹಾಕುವವರು. ಶೋಭರವರು ನನಗೆ ಪರಿ ಪರಿಯಾಗಿ ವಿನಂತಿಸಿಕೊಂಡು 60 ಸಾವಿರ ಕಟ್ಟಲು ನನಗೆ ಶಕ್ತಿ ಇಲ್ಲ. 5000 ರೂ.ಗಳನ್ನು ಪಾವತಿ ಮಾಡುತ್ತೇನೆ ಎಂದು ಹೇಳಿದರೂ ಗ್ರಾಮಸ್ಥರು ಸುತಾರಾಂ ಒಪ್ಪುವುದಿಲ್ಲ. ಕೂಡಲೇ ಗ್ರಾಮವನ್ನು ಬಿಟ್ಟು ಹೋಗುವಂತೆ ಬೆದರಿಕೆ ಹಾಕುವವರು ಮತ್ತು ಶೋಭರವರ ಜೊತೆ ಯಾರು ಮಾತನಾಡಬಾರದು ಎಂದು ಸಾಮಾಜಿಕ ಬಹಿಷ್ಕಾರ ಹಾಕುವವರು.

ಈ ವಿಷಯ ಸಾಮಾಜಿಕ ಮಾಧ್ಯಮಗಳ ಮೂಲಕ ಗ್ರಾಮದ ಹೊರಗಿನವರಿಗೆ ತಿಳಿದು ದೊಡ್ಡ ಸುದ್ದಿಯಾಯಿತು. ದಲಿತ ಸಂಘಟನೆಗಳ ನೆರವಿನಿಂದ ನೊಂದ ಶೋಭರವರು ನೀಡಿದ ದೂರನ್ನು ಕೂಡಲೇ ದಾಖಲಿಸಿಕೊಂಡು ಆರೋಪಿಗಳನ್ನು ಎರಡು ಮೂರು ದಿನಗಳ ನಂತರ ಬಂಧಿಸಿದರು. ಘಟನೆಯ ವಿಷಯ ತಿಳಿದ ಕೂಡಲೇ ಕೋಲಾರದಲ್ಲಿ ದಲಿತ, ರೈತ, ಎಡ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಆರೋಪಿಗಳನ್ನು ಬಂಧಿಸಬೇಕು, ನೊಂದ ಕುಟುಂಬಕ್ಕೆ ಪರಿಹಾರ ನೀಡಬೇಕೆಂದು ಒತ್ತಾಯಿಸಲಾಯಿತು.

ನಂತರ ಘಟನೆ ನಡೆದ ಸ್ಥಳಕ್ಕೆ ಜಿಲ್ಲಾಧಿಕಾರಿಗಳು, ಜಿಲ್ಲಾ ರಕ್ಷಣಾಧಿಕಾರಿಗಳು, ಸಂಸದರು, ಶಾಸಕರು, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಸೇರಿದಂತೆ ಭೇಟಿ ನೀಡಿ ನೊಂದ ಕುಟುಂಬಕ್ಕೆ ಸಾಂತ್ವನ ಹೇಳಿದರು. ಕುಟುಂಬಕ್ಕೆ ನಿವೇಶನವನ್ನು ನೀಡಿ ಮನೆ ನಿರ್ಮಿಸಿಕೊಡುವುದಾಗಿ ಭರವಸೆ ನೀಡಿದ್ದರು.

ಭೂತಮ್ಮ ದೇವಸ್ಥಾನವನ್ನು ನವೀಕರಣ ಮಾಡುವಾಗ ಊರಲ್ಲಿ ಇದ್ದರೆ ಮೈಲಿಗೆಯಾಗುತ್ತದೆ ಎಂದು ಹೇಳಿ ಶೋಭರವರ ಕುಟುಂಬವನ್ನು ಊರಿನಿಂದ ಒಂದೂವರೆ ಕಿ.ಮಿ. ಹೊರಗೆ ಕಳುಹಿಸಲಾಗಿತ್ತು. ಈ ಘಟನೆ ನಡೆದ ನಂತರ ಶೋಭ ರವರ ಕುಟುಂಬವನ್ನು ಗ್ರಾಮದಿಂದ ಹೊರ ಹಾಕಲು ಪ್ರಯತ್ನಿಸಿದ್ದಾರೆ.

ಇನ್ನು ವಿಶೇಷ ಏನೆಂದರೆ ಭೂತಮ್ಮ ದೇವಸ್ಥಾನವನ್ನು ಕಟ್ಟಿದವರು ದಲಿತರು, ದೇವಸ್ಥಾನ ಆರಂಭವಾದ ನಂತರ ದಲಿತರನ್ನು ಒಳಗೆ ಬಿಡಲು ಮೇಲ್ಜಾತಿಯವರು ಒಪ್ಪುವುದಿಲ್ಲ.

ದಲಿತ ಸಂಘಟನೆಗಳ ಬೃಹತ್ ಪ್ರತಿಭಟನೆ:

ಘಟನೆಯ ಕುರಿತು

ಪುಟ 4 ಕ್ಕೆ





ಬೈಂದೂರು: ಭತ್ತದ ಖರೀದಿ ಕೇಂದ್ರ ಕೂಡಲೇ ಆರಂಭಿಸಲು ಒತ್ತಾಯಿಸಿ ರೈತರ ಪ್ರತಿಭಟನೆ

ಕರಾವಳಿ ಜಿಲ್ಲೆಗಳಲ್ಲಿ ಭತ್ತದ ಫಸಲು ಕಟಾವು ಅಕ್ಟೋಬರ್ ತಿಂಗಳಲ್ಲಿ ಸಂಪೂರ್ಣಗೊಳ್ಳುತ್ತಿರುವುದರಿಂದ ಸರಕಾರ ನಿಗದಿಪಡಿಸಿದ ಭತ್ತದ ಬೆಂಬಲ ಬೆಲೆಗೆ ಅನುಗುಣವಾಗಿ ಈ ಕೂಡಲೆ ಕರಾವಳಿ ಜಿಲ್ಲೆಗಳಲ್ಲಿ ಖರೀದ ಕೇಂದ್ರ ಆರಂಭಿಸಬೇಕು, ತೆಂಗಿನ ಬೆಳೆಗೆ ಬೆಲೆ ಕುಸಿದ ಕಾರಣ ಸರಕಾರ ಕನಿಷ್ಟ ಬೆಂಬಲ ಬೆಲೆ ನಿಗದಿ ಪಡಿಸಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಬೈಂದೂರು ತಾಲೂಕು ಸಂಚಾಲಕ ರಾಜೀವ ಪಡುಕೋಣೆ ರಾಜ್ಯ ಸರಕಾರವನ್ನು ಒತ್ತಾಯಿಸಿದರು. ಅಖಿಲ ಭಾರತ ಕಿಸಾನ್ ಸಭಾ(AIKS)ಗೆ ಸಂಯೋಜಿತ ಕರ್ನಾಟಕ ಪ್ರಾಂತ ರೈತ ಸಂಘ(KPRS)ದ ನೇತೃತ್ವದಲ್ಲಿ ರೈತರು ಇಂದು ಬೈಂದೂರು ತಹಶೀಲ್ದಾರ್ ಕಚೇರಿ ಎದುರು ಆಯೋಜಿಸಿದ ಬೃಹತ್ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು. ಬಳಿಕ ಬೈಂದೂರು ತಹಶೀಲ್ದಾರ್ ಶ್ರೀಕಾಂತ.ಎಸ್.ಹೆಗ್ಡೆ ಇವರ ಮೂಲಕ ಹಕ್ಕೊತ್ತಾಯದ ಮನವಿಯನ್ನು ಕರ್ನಾಟಕ ಸರಕಾರದ ಮುಖ್ಯ ಮಂತ್ರಿಗಳಿಗೆ ಅರ್ಪಿಸಲಾಯಿತು. ಈ ಸಂದರ್ಭದಲ್ಲಿ ಮುಖಂಡರಾದ ಬಾಲಕಷ್ಣ ಶೆಟ್ಟಿ, ಗಣೇಶ ತೊಂಡೆಮಕ್ಕಿ, ರೊನಾಲ್ಡ್ ರಾಜೇಶ್ ಕ್ವಾಡ್ರಸ್, ಶ್ರೀಧರ ಉಪ್ಪುಂದ, ವಿಜಯ ಕೋಯಾನಗರ, ಮಂಜು ಪೂಜಾರಿ ಪಡುವರಿ, ನಾಗರತ್ನನಾಡ, ಶೋಭ, ನಾಗರತ್ನ ಪಡುವರಿ, ರಾಜು ದೇವಾಡಿಗ, ರಮೇಶ ಗುಲ್ವಾಡಿ, ವೆಂಕಟೇಶ ಕೋಣಿ ಅಣ್ಣಪ್ಪ ದೇವಾಡಿಗ, ಮಣಿಕಂಠ ಬೈಂದೂರು ಮೊದಲಾದವರು ಉಪಸ್ಥಿತರಿದ್ದರು.

ವರದಿ: ವೆಂಕಟೇಶ ಕೋಣಿ



ಪಿ.ಎಫ್.ಐ. ನಿಷೇಧವೊಂದೇ ಪರಿಹಾರವೇ..... ಪುಟ 3 ರಿಂದ

ಮಾಡಬೇಕೆಂದು' ಕರೆ ನೀಡಿದ ಹಿಂದುತ್ವವಾದೀ ನಾಯಕರ ಮೇಲೆ ಇಲ್ಲಿಯವರೆಗೂ ಕ್ರಮಗಳಿಲ್ಲ. ಹೀಗಾಗಿ ಆತಂಕಿತ ಮತ್ತು ದಾಳಿಗೊಳಗಾಗುತ್ತಿರುವ ಸಮುದಾಯಗಳಲ್ಲಿ ವಿಶ್ವಾಸವನ್ನು ಹುಟ್ಟು ಹಾಕಬಲ್ಲದೇ? ಶಾಂತಿ ಕದಡುವ ದ್ವೇಷ ಭಾಷಣ ಮಾಡಿದ, ಗಲಭೆ, ಆಶಾಂತಿ ಸೃಷ್ಟಿಸಿದ 34 ಮೊಕದ್ದಮೆಗಳನ್ನು ಸಂಬಂಧಿಸಿದ ಇಲಾಖೆಗಳ ವಿರೋಧದ ನಂತರವೂ ಕರ್ನಾಟಕ ಸರಕಾರ ಹಿಂಪಡೆದದ್ದು ಯಾವ ಸಂದೇಶ ನೀಡುತ್ತದೆ?

ಈ ಹಿಂದೆಯೂ ಆರ್‌ಎಸ್‌ಎಸ್ ಅನ್ನು ಎರಡು ಬಾರಿ, 'ಸಿಮಿ' ಸಂಘಟನೆಯನ್ನು, ಮಾವೋವಾದಿಗಳನ್ನು ನಿಷೇಧಿಸಲಾಗಿತ್ತು. ಆದರೆ ಸರಕಾರ ಹೇಳಿಕೊಂಡ ಆಶಯದಲ್ಲಿ ಅದರ ಪರಿಣಾಮಗಳು ಹೆಚ್ಚೇನೂ ಆಗಲಿಲ್ಲ ಎಂಬುದನ್ನು ಗಮನಿಸಬೇಕು. ಆದ್ದರಿಂದಲೇ ಕೇವಲ ನಿಷೇಧಗಳು ನಿರೀಕ್ಷಿತ ಫಲವನ್ನು ಕೊಡುವುದಿಲ್ಲ. ಬದಲಾಗಿ ಶಾಂತಿ, ಸಾಮರಸ್ಯ ಮತ್ತು ದೇಶದ ಐಕ್ಯತೆ ಸುಭದ್ರತೆಗೆ ಧಕ್ಕೆ ತರುವ ಶಕ್ತಿಗಳ ವಿರುದ್ಧ ರಾಜಕೀಯವಾದ ಮತ್ತು ಆಡಳಿತಾತ್ಮಕವಾದ ಕ್ರಮಗಳನ್ನು ಕೈಗೊಂಡು ಜನತೆಯನ್ನು ಜಾಗೃತಗೊಳಿಸಬೇಕು ಎನ್ನುವ ಅಂಶ ಸೂಕ್ತವಾಗಿದೆ.

ಪಿ.ಎಫ್.ಐ ಮತ್ತು ಎಸ್.ಡಿ.ಪಿ.ಐ. ನಂತಹ ಮೂಲಭೂತವಾದಿ ಸಂಘಟನೆಗಳ ಕುರಿತಾದಂತೆ ಹಲವಾರು ಪ್ರಗತಿಪರರಲ್ಲಿ ತಾತ್ವಿಕವಾದ ಮತ್ತು ಪ್ರಾಯೋಗಿಕವಾದ ಸಂಗತಿಗಳ ಕುರಿತು ಗೊಂದಲಗಳು ಇವೆ. ಮುಸ್ಲಿಂ ಅಥವಾ ಅಲ್ಪಸಂಖ್ಯಾತ ಮೂಲಭೂತವಾದಿ ಶಕ್ತಿಗಳು ಬಹು ಸಂಖ್ಯಾತ ಹಿಂದುತ್ವವಾದಿ ಶಕ್ತಿಗಳ ದಾಳಿಗಳ ಕೃತ್ಯಗಳು ಪ್ರತಿಕ್ರಿಯೆಯಾಗಿ ರೂಪುಗೊಂಡಿವೆ. ಅಂತಹ ಶಕ್ತಿಗಳು ಬಹು ಸಂಖ್ಯಾತರ ಕೋಮುವಾದಿಗಳನ್ನು ಎದುರಿಸಲು ಹೋರಾಡುತ್ತಿರುವುದರಿಂದ ಎರಡು ಶಕ್ತಿಗಳನ್ನು ಸಮಾನವಾಗಿ ಕಾಣುವುದು ಸರಿಯಲ್ಲ ಎನ್ನುವ ಒಂದು ಚಿಂತನೆ ಹಲವಾರು ಪ್ರಗತಿಪರರಲ್ಲಿ ಇದೆ. 'ಮಾವೋವಾದಿ'ಗಳು ತಾತ್ವಿಕವಾಗಿ, ಸಂಘಟನಾತ್ಮಕವಾಗಿಯೂ ಪಿ.ಎಫ್.ಐ. ನಂತಹ ಶಕ್ತಿಗಳನ್ನು ಸಮರ್ಥಿಸುತ್ತಾರೆ. ಹಿಂದುತ್ವದ ಕೋಮುವಾದಿಗಳು, ಮುಸ್ಲಿಂ ಮೂಲಭೂತವಾದಿಗಳು ಇಬ್ಬರ ಮೂಲಭೂತ ದೃಷ್ಟಿ, ಬಹುತೇಕ ಕಾರ್ಯಾಚರಣೆಗಳು ಒಂದೇ ಆಗಿದೆ ಮತ್ತು ಪರಸ್ಪರ ಪೂರಕವಾದ ಶಕ್ತಿಗಳೇ ಆಗಿರುವುದನ್ನು ಅಂತಹವರು ನಿರ್ಲಕ್ಷಿಸುತ್ತಾರೆ. ಯಾವುದೇ ಮತೀಯ ಅಥವಾ ಮೂಲಭೂತವಾದಿ ಶಕ್ತಿಗಳು ನಿಜಕ್ಕೂ ಆಯಾ ಧರ್ಮಗಳ ಜನತೆಯ ಪ್ರತಿನಿಧಿಗಳು ಆಗಿರುವುದಿಲ್ಲ ಹಾಗೂ ಸಂರಕ್ಷಕರೂ ಆಗಿರುವುದಿಲ್ಲ ಎನ್ನುವುದನ್ನು ನಾವು ಅರಿಯಬೇಕು. ಅಂತಿಮದಲ್ಲಿ ಇವು ಆಳುವ ವರ್ಗಗಳ ಹಿತಾಸಕ್ತಿಗಳಿಗೆ ಅನುಗುಣವಾಗಿಯೇ ಕಾರ್ಯಾಚರಣೆ ನಡೆಸುತ್ತವೆ ಮತ್ತು ಅಂತಹ ಉದ್ದೇಶಗಳನ್ನು ಈಡೇರಿಸುತ್ತವೆ ಎನ್ನುವ ಎಚ್ಚರಿಕೆಯೂ ನಮಗಿರಬೇಕು. ಇಲ್ಲದೇ ಹೋದಲ್ಲಿ ಮತನಿರಪೇಕ್ಷಿತ, ಪ್ರಜಾಸತ್ತಾತ್ಮಕ ಗಣರಾಜ್ಯವಾಗಿರುವ ಭಾರತವನ್ನು, ಅದರ ಸಾರ್ವಭೌಮತೆ, ಸುಭದ್ರತೆಯನ್ನು ಉಳಿಸಿಕೊಳ್ಳಲಾಗುವುದಿಲ್ಲ. ಧರ್ಮದಾಧಾರಿತ ದೇಶಗಳೆಂದು ಘೋಷಿಸಿಕೊಂಡ ಯಾವ ರಾಷ್ಟ್ರಗಳೂ ಶಾಂತಿ, ನೆಮ್ಮದಿ, ಸಮಾನತೆಯನ್ನು ಜನತೆಗೆ ನೀಡಿಲ್ಲ ಎಂಬುದರಿಂದ ವಾದರೂ ಪಾಠ ಕಲಿಯಬೇಕು.

ಹಿಂದುತ್ವವಾದಿಗಳ ಕಾರ್ಪೋರೇಟ್ ಕುಳಗಳ ಸೇವೆ-ತೀವ್ರ ಟೀಕೆ

ತೊಕ್ಕೊಟ್ಟು ಸಿಪಿಐ(ಎಂ) ರಾಜಕೀಯ ಸಮಾವೇಶ

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ ದೇಶದ ಜನರಿಗೆ ಕೋಮುವಾದದ ಕೋತಿ ಆಟ ತೋರಿಸಿ ಜನರ ಗಮನವನ್ನು ಹಿಂದುತ್ವದೆಡೆಗೆ ತಿರುಗಿಸಿ ಮರೆಯಲ್ಲಿ ಕಾರ್ಪರೇಟ್ ಕುಳಗಳ ಸೇವೆ ಮಾಡುತ್ತಿದೆ. ತನ್ನ ಒಂದೆರಡು ಸ್ನೇಹಿತರಿಗೆ ದೇಶದ ಸಂಪತ್ತನ್ನು ದಾರೆ ಎರೆದು ಕೊಡುತ್ತಿದೆ. ಕಾರ್ಪರೇಟ್ ಫ್ಯಾಕ್ಟರಿ ಕಡಿಮೆ ಮಾಡಿ ಅಕ್ಕಿಯ ಮೇಲೆ ಜಿಎಸ್‌ಟಿ ಹಾಕಿದೆ. ಜೀವನಾವಶ್ಯಕ ವಸ್ತುಗಳ ಬೆಲೆ ಗಗನಕ್ಕೇರಿದೆ. ನಿರುದ್ಯೋಗ ತಾಂಡವವಾಡುತ್ತಿದೆ. ಭಾವನಾತ್ಮಕ ವಿಷಯಗಳನ್ನು ಮುನ್ನೆಲೆಗೆ ತಂದು ಧರ್ಮದ ಆಧಾರದಲ್ಲಿ ಜನರಲ್ಲಿ ದ್ವೇಷ ಹಬ್ಬಿಸಿ ದೇಶದ ನೆಮ್ಮದಿ ಕೆಡಿಸಿದೆ ಎಂದು ಸಿಪಿಐ(ಎಂ) ರಾಜ್ಯ ಮುಖಂಡರಾದ ಕಾ|ಜಿ.ಎನ್.ನಾಗರಾಜ್ ರವರು ಸಪ್ಟೆಂಬರ್ 25 ರಂದು ಸಿಪಿಐ(ಎಂ) ಉಳ್ಳಾಲ ವಲಯ ಸಮಿತಿಯ ನೇತೃತ್ವದಲ್ಲಿ ತೊಕ್ಕೊಟ್ಟು ಬಸ್ ಸ್ಟೇಂಡ್‌ನಲ್ಲಿ ನಡೆದ ರಾಜಕೀಯ ಪ್ರಚಾರ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ನಂತರ ಮಾತನಾಡಿದ ಸುಕುಮಾರು ತೊಕ್ಕೊಟ್ಟು ಅವರು ಅದಾನಿ, ಅಂಬಾನಿಯವರ ಸಾಲವನ್ನು ಮನ್ನಾ ಮಾಡುವ ನರೇಂದ್ರ ಮೋದಿ ಸರಕಾರ ಸೈನಿಕರಿಗೆ ಪಿಂಚಣಿ ನಿರಾಕರಿಸಿ ಅವರ ಸೇವೆಯನ್ನು 4 ವರ್ಷಕ್ಕೆ ಸೀಮಿತಗೊಳಿಸುವ ಅಗ್ನಿಪಥ್ ಯೋಜನೆ ಜಾರಿಗೊಳಿಸಿದೆ ಎಂದರು.

ಸಭೆಯ ಅಧ್ಯಕ್ಷತೆಯನ್ನು ಸಿಪಿಐ(ಎಂ) ಉಳ್ಳಾಲ ವಲಯ ಕಾರ್ಯದರ್ಶಿ ಯು.ಜಯಂತ ನಾಯ್ಕ್ ವಹಿಸಿದ್ದರು. ಪ್ರಾರಂಭದಲ್ಲಿ ರೋಹಿದಾಸ್ ಭಟ್ನಗರ ಸ್ವಾಗತಿಸಿದರು. ಕೊನೆಯಲ್ಲಿ ವಿಲಾಸಿನಿ ತೊಕ್ಕೊಟ್ಟು ಧನ್ಯವಾದ ಇತ್ತರು. ಪಕ್ಷದ ದ.ಕ. ಜಿಲ್ಲಾ ಕಾರ್ಯದರ್ಶಿ ಕೆ.ಯಾದವ ಶೆಟ್ಟಿ, ಹಿರಿಯ ಕಾರ್ಮಿಕ ನಾಯಕರಾದ ಯು.ಬಿ.ಲೋಕಯ್ಯ, ಕೃಷ್ಣಪ್ಪ ಸಾಲಿಯಾನ್, ಪದ್ಮಾವತಿ ಶೆಟ್ಟಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಭೆಗೆ ಮೊದಲು ಪಕ್ಷದ ಕಚೇರಿಯಿಂದ ತೊಕ್ಕೊಟ್ಟು ಬಸ್ ಸ್ಟೇಂಡ್‌ವರೆಗೆ ಮೆರವಣಿಗೆ ನಡೆಸಿದರು.

ಉಡುಪಿ: ಜಿಲ್ಲೆಯಾದ್ಯಂತ ಖಾಸಗಿ ಬಸ್ ಪ್ರಯಾಣ ದರ ಅಕ್ರಮ ದುಪ್ಪಟ್ಟು ವಸೂಲಿಗೆ ವಿರೋಧ

ಜಿಲ್ಲಾಧಿಕಾರಿಗೆ ಕೃಷಿ ಕೂಲಿ ಕಾರ್ಮಿಕ ಸಂಘದ ದೂರು

ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಪ್ರಕಟಿಸಿದ ಖಾಸಗಿ ಬಸ್ ದರ ಪಟ್ಟಿಗಳಿಗನುಗುಣವಾಗಿ ಪ್ರಯಾಣ ದರ ಪಡೆಯದೆ ದುಪ್ಪಟ್ಟು ಅಕ್ರಮ ಹಣ ವಸೂಲಿಯನ್ನು, ಖಾಸಗಿ ಬಸ್ ಮಾಲಕರ ಮಾಡುತ್ತಿದ್ದಾರೆ. ಜಿಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಆದೇಶಕ್ಕೆ ಕವಡೆ ಕಾಸಿನ ಕಿಮ್ಮತ್ತು ಕೊಡದೆ ಏಕಾಏಕಿ ಅಕ್ರಮ ವಸೂಲಿಗೆ ಪ್ರಯಾಣಿಕರು ವಿರೋಧ ವ್ಯಕ್ತಪಡಿಸಿದ್ದಾರೆ. ಕುಂದಾಪುರದಿಂದ ಉಡುಪಿಗೆ, ರೂಪಾಯಿ 49 ನಿಗದಿಪಡಿಸಿದ ಪ್ರಯಾಣ ದರ ಪಡೆಯದೆ ರೂಪಾಯಿ 64 ವಸೂಲಿ (ತಲಾ ರೂ. 15=00 ಹೆಚ್ಚುವರಿ) ಹಾಗೂ ಕುಂದಾಪುರದಿಂದ ಮಂಗಳೂರಿಗೆ ಪ್ರಯಾಣ ದರ ರೂ.122 ಪಡೆಯದೆ ರೂ.165 ದುಬಾರಿ ದರ ವಸೂಲಿ ಮಾಡುತ್ತಿರುವುದನ್ನು ವಿರೋಧಿಸಿ ಅಖಿಲ ಬಾರತ ಕೃಷಿ ಕೂಲಿ ಕಾರ್ಮಿಕರ ಸಂಘ(ಂಖಂಘಗ)ದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಕೋಣಿ ಜಿಲ್ಲಾಧಿಕಾರಿಗೆ ಲಿಖಿತ ದೂರು ದಾಖಲಿಸಿದ್ದಾರೆ. ಈಗಾಗಲೇ ವಿಪರೀತ ಬೆಲೆ ಏರಿಕೆಯಿಂದ ತತ್ತರಿಸಿರುವ ಬಡ ಕೂಲಿ ಕಾರ್ಮಿಕರು ಬಹುತೇಕ ಖಾಸಗಿ ಸಾರಿಗೆ ಬಸ್ ಪ್ರಯಾಣವನ್ನೆ ಅವಲಂಭಿಸಿರುವುದರಿಂದ, ಸಾರಿಗೆ ಪ್ರಾಧಿಕಾರ ಪ್ರಕಟಿಸಿದ ದರವನ್ನೆ ಪಡೆಯಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದೆ.

ದಲಿತ ಬಾಲಕ ದೇವರ ಗುಜ್ಜಕೋಲು ಮುಟ್ಟಿದ್ದಕ್ಕೆ ಉಲ್ಲೇರಹಳ್ಳಿಯಲ್ಲಿ ಅರವತ್ತು ಸಾವಿರ ದಂಡ..... ಪುಟ 3 ರಿಂದ

ದಿನಾಂಕ:22.9.2022 ರಂದು ದಲಿತ ಸಂಘಟನೆಗಳು ಟೇಕಲ್ ನಿಂದ ಉಲ್ಲೇರಹಳ್ಳಿ ಗ್ರಾಮದಲ್ಲಿ ಪಾದಯಾತ್ರೆ ನಡೆಸಿ ನೊಂದ ಕುಟುಂಬಕ್ಕೆ ಸಾಂತ್ವನ ಹೇಳಿದರು. ಈ ಸಂದರ್ಭದಲ್ಲಿ ಮೂರು ಸಾವಿರಕ್ಕೂ ಅಧಿಕ ಮಂದಿ ಸೇರಿದ್ದ ಈ ಪಾದಯಾತ್ರೆಯಲ್ಲಿ ರಾಜ್ಯ ಮತ್ತು ಜಿಲ್ಲೆಯ ದಲಿತ ಸಂಘಟನೆಗಳು ಮುಖಂಡರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಗಾಂಧಿನಗರ ನಾರಾಯಣಸ್ವಾಮಿ ಮಾತನಾಡಿ 'ಸಾಮಾಜಿಕ ಬಹಿಷ್ಕಾರ ಹಾಕಿದ ಆರೋಪಿಗಳ ಮೇಲೆ ಕೇಸು ದಾಖಲಾಗಿದ್ದರೂ ಶಿಕ್ಷೆಯಾಗುವ ಭರವಸೆ ಇಲ್ಲ. ಜಿಲ್ಲಾಡಳಿತ ಆರೋಪಿಗಳಿಗೆ ಶಿಕ್ಷೆಯಾಗುವಂತೆ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಬೇಕು. ಕುಟುಂಬಕ್ಕೆ ನಿವೇಶನವನ್ನು ನೀಡಿ ಮನೆಯನ್ನು ನಿರ್ಮಿಸಿಕೊಡಬೇಕು, 5 ಎಕರೆ ಜಮೀನು ಮತ್ತು ಖಾಯಂ ಸರ್ಕಾರಿ ಉದ್ಯೋಗವನ್ನು ನೀಡಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ದಲಿತ ಮುಖಂಡರಾದ ವಿಜಯಕುಮಾರ್, ವಕ್ಕಲೇರಿ ರಾಜಪ್ಪ, ಪಂಡಿತ್ ಮುನಿವೆಂಕಟಪ್ಪ, ಪಿಚ್ಚಹಳ್ಳಿ ಶ್ರೀನಿವಾಸ್, ದಲಿತ ಹಕ್ಕುಗಳ ಸಮಿತಿಯ ಮುಖಂಡರಾದ ಪಿ.ವಿ.ರಮಣ್, ಕೆ.ಎಂ.ಸುಶೀಲ, ಸಿಪಿಐ(ಎಂ) ಮಾಲೂರು ತಾಲ್ಲೂಕು ಕಾರ್ಯದರ್ಶಿ ಎನ್.ಅಶೋಕ್ ಮತ್ತಿತರರು ಭಾಗವಹಿಸಿದ್ದರು.

ದಲಿತ ಕುಟುಂಬಕ್ಕೆ ಬಹಿಷ್ಕಾರ, ದಂಡ ಹಾಕಿದ ಘಟನೆಯನ್ನು ಡಿ.ಹೆಚ್.ಎಸ್. ರಾಜ್ಯ ಸಮಿತಿಯು ತೀವ್ರವಾಗಿ ಖಂಡಿಸಿದ್ದು ಪ್ರತಿಭಟನೆಗೆ ಕರೆ ನೀಡಿದೆ.



ಕಾಂಗ್ರೆಸ್‌ನ ಭಾರತ್ ಜೋಡೋ ಯಾತ್ರೆಯೂ ಕೋಮುವಾದದ ವಿರುದ್ಧ ಹೋರಾಟವೂ

ಡಾ.ಕೆ. ಪ್ರಕಾಶ್

‘ಭಾರತ್ ಜೋಡೋ’ ಎನ್ನುವಂತಹ ಒಂದು ಮಹತ್ವದ ಘೋಷಣೆಯನ್ನು ಇರಿಸಿಕೊಂಡು ಪಾದಯಾತ್ರೆ ನಡೆಸುತ್ತಿರುವ ಕಾಂಗ್ರೆಸ್ ಪಕ್ಷ ಇಲ್ಲಿಯವರೆಗೆ ಮಾಡಿದ್ದೇನು? ಮಾಡಬೇಕಾದುದೇನು? ಎಂದು ವಿಮರ್ಶೆ ಮಾಡಿಕೊಳ್ಳುವುದರತ್ತ ಹೊರಳುತ್ತದೆಯೇ? ಇದನ್ನು ಕೇವಲ ಕಾಂಗ್ರೆಸ್ ಮಾತ್ರವಲ್ಲ ಕೋಮುವಾದವನ್ನು ಸೋಲಿಸಬೇಕೆಂಬ ಎಲ್ಲ ಪ್ರಗತಿಪರರೂ ಕೇಳಿಕೊಳ್ಳ ಬೇಕಾದ ಪ್ರಶ್ನೆ.

ಸೆಪ್ಟಂಬರ್ 7 ರಂದು ಕನ್ಯಾಕುಮಾರಿಯಲ್ಲಿ ಆರಂಭವಾದ ಕಾಂಗ್ರೆಸ್‌ನ ಭಾರತ್ ಜೋಡೋ ಪಾದಯಾತ್ರೆಯು 150 ದಿನಗಳ ಕಾಲ ದೇಶದ 12 ರಾಜ್ಯಗಳಲ್ಲಿ ಸುಮಾರು 3570 ಕಿ.ಮೀ. ಕ್ರಮಿಸಲಿದೆ. ಕೇರಳದಲ್ಲಿ 18 ದಿನ, ಕರ್ನಾಟಕದಲ್ಲಿ 21 ದಿನ, ಉತ್ತರಪ್ರದೇಶದಲ್ಲಿ 2 ದಿನ, ಹೀಗೆ ವಿವಿಧ ರಾಜ್ಯಗಳಲ್ಲಿ ಇದು ಸಂಚರಿಸಲಿದೆ. ಇದರ ನೇತೃತ್ವವನ್ನು ಕಾಂಗ್ರೆಸ್ ಮುಖಂಡರಾದ ರಾಹುಲ್ ಗಾಂಧಿಯವರು ವಹಿಸಿದ್ದಾರೆ.

ಭಾರತ್ ಜೋಡೋ ಯಾತ್ರೆಗೆ ಸಂಬಂಧಿಸಿ ಅದರ ಅಧಿಕೃತ ವೆಬ್‌ಸೈಟ್‌ನಲ್ಲಿ ಯಾತ್ರೆಯ ಉದ್ದೇಶದ ಕುರಿತು ಹೀಗೆ ಹೇಳಲಾಗಿದೆ;

“ಈ ಯಾತ್ರೆಯ ಉದ್ದೇಶ ಭಾರತವನ್ನು ಒಂದುಗೂಡಿಸುವುದು; ಒಂದಾಗಿ ಕೂಡುವುದು ಮತ್ತು ನಮ್ಮ ರಾಷ್ಟ್ರವನ್ನು ಬಲಿಷ್ಟಗೊಳಿಸುವುದು. . . ಯಾತ್ರೆಯು ಈಗಾಗಲೇ ಅಪಾರವಾದ ಪ್ರತಿಕ್ರಿಯೆಯನ್ನು ಪಡೆದಿದೆ; ಇಂದು ನಮ್ಮ ರಾಷ್ಟ್ರವನ್ನು ವಿಭಜಿಸುತ್ತಿರುವ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಪ್ರಶ್ನೆಗಳ ವಿರುದ್ಧ ತಮ್ಮ ಧ್ವನಿಯೆತ್ತಲು ಲಕ್ಷಾಂತರ ಜನರು ಕಾಂಗ್ರೆಸ್ ನಾಯಕರೊಂದಿಗೆ ಈ ಚಳುವಳಿಯಲ್ಲಿ ಜೊತೆಗೂಡಿದ್ದಾರೆ. ಅಪಾರ ನಿರುದ್ಯೋಗ ಮತ್ತು ಹಣದುಬ್ಬರ, ದ್ವೇಷ ಮತ್ತು ವಿಭಜನೆಯ ರಾಜಕಾರಣ ಮತ್ತು ರಾಜಕೀಯ ವ್ಯವಸ್ಥೆಯ ಅತಿಯಾದ ಕೇಂದ್ರೀಕರಣದ ವಿಚಾರಗಳನ್ನು ಈ ಯಾತ್ರೆಯು ಚರ್ಚಿಸುತ್ತದೆ. . . ಈ ಯಾತ್ರೆಯು ಭಾರತದ ಐಕ್ಯತೆ, ಅದರ ಸಾಂಸ್ಕೃತಿಕ ವೈವಿಧ್ಯತೆ ಮತ್ತು ಜನತೆಯ ನಂಬಲಸಾಧ್ಯ ಸ್ಥೈರ್ಯದ ಆಚರಣೆಯಾಗಿದೆ. . .”




ಈ ಘೋಷಿತ ಉದ್ದೇಶವು ಉದಾತ್ತವಾಗಿದೆ ಮತ್ತು ಸ್ಪಷ್ಟವಾಗಿದೆ. ಆದರೆ ಸ್ವತಃ ಕಾಂಗ್ರೆಸ್ ಈ ಉದ್ದೇಶಗಳಿಗೆ ಪೂರಕವಾಗಿದೆಯೇ ಎಂಬುದು ಪ್ರಶ್ನೆ. ದ್ವೇಷ ಮತ್ತು ವಿಭಜನೆಯ ರಾಜಕಾರಣವನ್ನು ವಿರೋಧಿಸುವುದು ಯಾತ್ರೆಯ ಉದ್ದೇಶಗಳಲ್ಲಿ ಒಂದು ಎಂದು ಹೇಳಿಕೊಳ್ಳಲಾಗಿದೆ. ಕೇರಳದಲ್ಲಿ ಬಿಜೆಪಿಗೆ ಒಂದು ಸ್ಥಾನವೂ ಬರದ ಹಾಗೆ ಮಾಡುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಸಿಪಿಐ(ಎಂ) ಪಕ್ಷವನ್ನು ಕಾಂಗ್ರೆಸ್‌ನವರು ಹೇಗೆ ಕಾಣುತ್ತಿದ್ದಾರೆ? ಅಯ್ಯಪ್ಪ ಸ್ವಾಮಿ ದೇಗುಲಕ್ಕೆ ಮಹಿಳೆಯರಿಗೂ ಪ್ರವೇಶ ನೀಡಬೇಕೆಂಬ ವಿಚಾರದಲ್ಲಿ ಆರ್‌ಎಸ್‌ಎಸ್ ಶಕ್ತಿಗಳಿಗೆ ಪೈಪೋಟಿ ನೀಡುವ ಹಾಗೆ ಎಲ್‌ಡಿಎಫ್ ಸರ್ಕಾರದ ವಿರುದ್ಧ ಹೋರಾಟಗಳನ್ನು ಸಂಘಟಿಸಿದ್ದು ಕಾಂಗ್ರೆಸ್ ಎಂಬುದನ್ನು ಮರೆಯಲಾದೀತೆ? ಕೇರಳದಲ್ಲಿ ಕಾಂಗ್ರೆಸ್‌ಗೆ ಹಿಂದುತ್ವ ಕೋಮುವಾದವನ್ನು ಮತ್ತು ಅಲ್ಪಸಂಖ್ಯಾತ ಮೂಲಭೂತವಾದವನ್ನು ಎದುರಿಸುವ ಆದ್ಯತೆಯೇನಾದರೂ ಇದೆಯೇ ಎಂಬ ಪ್ರಶ್ನೆಗೆ ಸರಳ ಉತ್ತರವಿಲ್ಲ. ಸಿಪಿಐ(ಎಂ) ಮತ್ತು ಎಡ ಪಕ್ಷಗಳನ್ನು ಎದುರಿಸುವ ಮತ್ತು ಅದಕ್ಕಾಗಿ ಸಂಘಪರಿವಾರದ ಜೊತೆಯಲ್ಲಿ ಕೈಜೋಡಿಸುವ ಪರಂಪರೆ ಕೇರಳದಲ್ಲಿ ಕಾಂಗ್ರೆಸ್‌ನ ಚರಿತ್ರೆಯಾಗಿದೆ (ಕಾಂಗ್ರೆಸ್‌ನ ಸೈದ್ಧಾಂತಿಕ ದೌರ್ಬಲ್ಯಕ್ಕೆ ಕಾಕತಾಳಿಯ ಘಟನೆಯೊಂದು ಕೇರಳದ ಆಲುವದಲ್ಲಿ ನಡೆದಿದೆ. ಪಾದಯಾತ್ರೆಯು ಎರ್ನಾಕುಲಂ ಬಳಿಯ ಆಲುವಕ್ಕೆ ಬಂದ ಸಂದರ್ಭದಲ್ಲಿ ಕಾಂಗ್ರೆಸ್‌ನವರು ಹಾಕಿದ್ದ ಸ್ವಾತಂತ್ರ್ಯ ಹೋರಾಟಗಾರರ ಫೋಟೊಗಳಿರುವ ಬ್ಯಾನರ್‌ನಲ್ಲಿ ಹಿಂದುತ್ವ ಸಿದ್ಧಾಂತಿ ಸಾವರ್ಕರ್ ಅವರ ಫೋಟೋ ಕೂಡಾ ಹಾಕಿದ್ದರು ಎಂಬುದು ಸಾಕಷ್ಟು ಚರ್ಚೆಗೆ ಗ್ರಾಸವಾಗಿತ್ತು).

ಭಾರತ್ ಜೋಡೋ ಯಾತ್ರೆಯ ಸಂಘಟಕರು ಕೇರಳದಲ್ಲಿ ನಡೆಸಿದ ವಾಗ್ದಾಳಿಗಳಿಗೆ ಸಿಪಿಐ(ಎಂ) ಎತ್ತಿದ ಪ್ರಶ್ನೆ, “ಕೇರಳದಲ್ಲಿ 18 ದಿನ, ಉತ್ತರ ಪ್ರದೇಶದಲ್ಲಿ 2 ದಿನ” ಯಾಕೆ? ಜನರ ಐಕ್ಯತೆಯನ್ನು ಕ್ರೋಢೀಕರಿಸುವುದೋ ಅಥವಾ ಓಟುಗಳನ್ನು ಕ್ರೋಢೀಕರಿಸುವುದೋ?

ಈ ಪ್ರಶ್ನೆಗಳಿಗೆ ಕಾಂಗ್ರೆಸ್ ಉತ್ತರಿಸಿದ ಪರಿ ಅಥವಾ ದಾಳಿ ಹೇಗಿತ್ತು?... ಕೇರಳ ಮುಖ್ಯಮಂತ್ರಿ ಪಿನರಾಯಿ ವಿಜಯನ್ ಅವರನ್ನು “ಮುಂಡು ಮೋದಿ” (ಧೋತಿಯನ್ನು ಧರಿಸಿದ ಮೋದಿ) ಎಂದು, ಸಿಪಿಐ(ಎಂ) ಪಕ್ಷವನ್ನು “ಬಿಜೆಪಿಯ ಎ ಟೀಮ್” ಎಂದು ಕಾಂಗ್ರೆಸ್ ವಕ್ತಾರರಾದ ಜೈರಾಂ ರಮೇಶ್ ವಾಗ್ದಾಳಿಗಳನ್ನು ನಡೆಸಿದರು. ಇಂತಹುದೇ ಮಾತುಗಳನ್ನು ಬಹುತೇಕ ಕಾಂಗ್ರೆಸ್ ನಾಯಕರು ಆಡಿದರು. ಭಾರತವನ್ನು, ಅರ್ಥಾತ್, ಜನರನ್ನು ಒಗ್ಗೂಡಿಸುವ ಉದಾತ್ತ ನಡವಳಿಕೆ ಹೀಗೇ ಇರುತ್ತದೆ ಎಂದು ಭಾವಿಸಬೇಕೇ? ಪ್ರತಿನಿತ್ಯ ಹತ್ತಾರು ಕಾಂಗ್ರೆಸಿಗರು ಬಿಜೆಪಿ ಸೇರುತ್ತಿರುವ ಕೇರಳದ ಸಂದರ್ಭದಲ್ಲಿ, ಒಗ್ಗೂಡಿಸಬೇಕಾದುದು ಯಾರನ್ನು ಎಂಬ ಪ್ರಶ್ನೆಗೆ ಉತ್ತರ ಕೊಡುವವರು ಯಾರು?

ಸೆ.30 ರಂದು ರಾಹುಲ್ ಗಾಂಧಿ ನೇತೃತ್ವದ ಯಾತ್ರೆಯು ಗುಂಡ್ಲುಪೇಟೆಯ ಮೂಲಕ ಕರ್ನಾಟಕವನ್ನು ಪ್ರವೇಶಿಸಿದೆ. ಅಲ್ಲೆಲ್ಲ ರಾರಾಜಿಸಿದ್ದು, ರಾಹುಲ್ ಗಾಂಧಿ ಬಾವುಟಗಳು, ಕಾಂಗ್ರೆಸ್ ಪಕ್ಷದ ಬಾವುಟಗಳು. . . ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕೂಗಿದ ಘೋಷಣೆಗಳು; ?ಕಾಂಗ್ರೆಸ್ ಪಾರ್ಟಿ ಕಿ ಜೈ, ಸೋನಿಯಾ ಗಾಂಧಿ ಕಿ ಜೈ, ರಾಹುಲ್ ಗಾಂಧಿ ಕಿ ಜೈ, ಬೋಲೋ ಭಾರತ್ ಮಾತಾ ಕಿ ಜೈ? ಮುಂತಾದವು. ಇದು ಸರಿಯಲ್ಲವೆಂದು ಹೇಳಬಹುದೇ? ಅದು ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ನಡೆಯುತ್ತಿರುವ ಕಾರ್ಯಕ್ರಮ, ಹೀಗಾಗಿ ಈ ಘೋಷಣೆಗಳಲ್ಲಿ ತಪ್ಪೇನಿಲ್ಲ. ಸಿಪಿಐ(ಎಂ) ಪಕ್ಷವೂ ಇದರಲ್ಲಿ ತಪ್ಪನ್ನೇನೂ ಹುಡುಕುವುದಿಲ್ಲ. ಆದರೆ ಪ್ರಶ್ನೆಯಿರುವುದು, ಕಾಂಗ್ರೆಸ್‌ನ ಈ ಕಾರ್ಯಕ್ರಮವನ್ನು ಎಲ್ಲರೂ ಬೆಂಬಲಿಸುವುದೊಂದೇ ಭಾರತದ ಭವಿಷ್ಯಕ್ಕಿರುವ ದಾರಿ ಎಂದು ಹಲವಾರು ಪ್ರಗತಿಪರ, ಜಾತ್ಯಾತೀತ ವ್ಯಕ್ತಿಗಳು ಮತ್ತು ಶಕ್ತಿಗಳು ಮಾತನಾಡುತ್ತಿರುವುದಕ್ಕೆ. ಕೆಲವು ಎಡ ಸೋಗಿನ ಚಿಂತಕರಂತೂ, ಕಮ್ಯುನಿಸ್ಟ್ ಪಕ್ಷಗಳು ಕಾಂಗ್ರೆಸ್‌ನ ಭಾಗವಾಗಿಬಿಡಬೇಕು ಎಂಬಷ್ಟರ ಮಟ್ಟಿಗೆ ಸಲಹೆಗಳನ್ನು ನೀಡಿದ್ದಾರೆ ಮತ್ತು ಕಟು ಟೀಕೆಗಳನ್ನು ಮಾಡಿದ್ದಾರೆ.



ಎರಡು ಅಂಶಗಳನ್ನು ಇಲ್ಲಿ ಪರಿಗಣಿಸಬೇಕು. ಒಂದು, ಹಿಂದುತ್ವ ಕೋಮುವಾದಿ ಮತ್ತು ಕಾರ್ಪೊರೇಟ್ ನಂಟಿನ ಅಪಾಯಕಾರಿ ಸನ್ನಿವೇಶದಲ್ಲಿ ಭಾರತದ ಜನತೆಯಲ್ಲಿ ಭಾವೈಕ್ಯತೆಯನ್ನು ಬೆಸೆಯಲು ಮತ್ತು ವಿಶ್ವಾಸವನ್ನು ತುಂಬಲು ಭಾರತ್ ಜೋಡೋ ಯಾತ್ರೆ ಸಫಲವಾದರೆ ಅದು ಅತ್ಯಂತ ಸಕಾರಾತ್ಮಕವಾದ ಅಂಶ. ಕಾಂಗ್ರೆಸ್ ಒಂದು ರಾಜಕೀಯ ಪಕ್ಷವಾಗಿ ಎರಡೂ ವಿಚಾರಗಳಲ್ಲಿ ಇದುವರೆಗಿನ ತನ್ನ ವೈಫಲ್ಯವನ್ನು ಸರಿಪಡಿಸಿಕೊಳ್ಳಲು ಅವಕಾಶವೂ ಹೌದು. ಈ ಕಾರಣಕ್ಕಾಗಿ ಕಾಂಗ್ರೆಸ್‌ನ ಈ ಯಾತ್ರೆ ಸಫಲವಾಗಲಿ ಎಂದು ಸಿಪಿಐ(ಎಂ) ಆಶಿಸುತ್ತದೆ. ಸ್ವಾತಂತ್ರ್ಯ ನಂತರದಲ್ಲಿ ಕಾಂಗ್ರೆಸ್‌ನ ನಾಯಕತ್ವ ಇಂತಹದೊಂದು ಪಾದಯಾತ್ರೆಯನ್ನು ಸಂಘಟಿಸಿರುವುದು ಉತ್ತಮವಾದ ಬೆಳವಣಿಗೆಯೇ ಸರಿ. ಬಿಜೆಪಿಯ ಭೂತವನ್ನು ಮುಂದು ಮಾಡಿ ಚುನಾವಣಾ ರಾಜಕೀಯದ ಲಾಭಕ್ಕಾಗಿ ಈ ಯಾತ್ರೆಯನ್ನು ಕಾಂಗ್ರೆಸ್ ಸಂಘಟಿಸಿದೆ ಎನ್ನುವ ಮಾತಿದೆ. ಬಿಜೆಪಿಯೇತರ ಪ್ರಧಾನ ರಾಜಕೀಯ ಪಕ್ಷವಾಗಿ ಕಾಂಗ್ರೆಸ್ ಚುನಾವಣಾ ಲಾಭವನ್ನು ಬಯಸಿದರೆ ಅದನ್ನೂ ತಪ್ಪೆಂದು ಹೇಳಲು ಸಾಧ್ಯವಿಲ್ಲ. ಈ ಯಾತ್ರೆಯನ್ನು ಬೆಂಬಲಿಸುವವರು ಮತ್ತು ಹಿಂದುತ್ವ ಕೋಮುವಾದದ ವಿರುದ್ಧವಿರುವವರು ಈ ಅಂಶಗಳ ಬಗ್ಗೆ ಗೊಂದಲದಲ್ಲಿ ಇರಬೇಕಾಗಿಲ್ಲ.

ಆದರೆ ಕಾಂಗ್ರೆಸೇತರ ಜಾತ್ಯಾತೀತ ಪಕ್ಷಗಳು ಕಾಂಗ್ರೆಸ್‌ನ ಈ ಯಾತ್ರೆಯನ್ನು ತಮ್ಮದೇ ಯಾತ್ರೆಯೆಂಬಂತೆ ತಿಳಿದು ಭಾಗವಹಿಸುವುದು ರಾಜಕೀಯವಾಗಿ ಕಷ್ಟದ ವಿಚಾರ. ಎಲ್ಲರನ್ನೂ ಜೋಡಿಸುವ ಉದ್ದೇಶದ ಯಾತ್ರೆ ಕೇರಳದಲ್ಲಿ, ಹಿಂದುತ್ವ ಕೋಮುವಾದಿ ಮತ್ತು ಅಲ್ಪಸಂಖ್ಯಾತ ಮೂಲಭೂತವಾದಿ ಶಕ್ತಿಗಳನ್ನು ಬಿಟ್ಟು, ಸಿಪಿಐ(ಎಂ)ನ್ನು ಯಾಕೆ ಟಾರ್ಗೆಟ್ ಮಾಡಿತು ಎಂಬುದನ್ನೂ ಎಚ್ಚರಿಕೆಯಿಂದ ಗಮನಿಸಬೇಕು. ಅಲ್ಲಿ ಅದು ಚುನಾವಣಾ ರಾಜಕಾರಣದ ಸ್ಪಷ್ಟ ಹಿನ್ನೆಲೆಯಲ್ಲಿ ಮಾಡಿದ ಟಾರ್ಗೆಟ್. ಸಿಪಿಐ(ಎಂ)ನ್ನು ಟಾರ್ಗೆಟ್ ಮಾಡಿದರೆ ಮಾತ್ರ ಕಾಂಗ್ರೆಸ್ ತನ್ನ ಸೀಟುಗಳನ್ನು ಹೆಚ್ಚು ಮಾಡಿಕೊಳ್ಳಬಹುದೆಂಬ ಇಂತಹ ಧೋರಣೆಯು, ಯಾತ್ರೆಗಿರುವ ಸಹಜವಾದ ಮಿತಿಯನ್ನು ಮುಂದು ಮಾಡುತ್ತದೆ. ಭಾರತದ ಇಂದಿನ ತುರ್ತು ಅಗತ್ಯವಾದ ಭಾರತೀಯರನ್ನು ಒಗ್ಗೂಡಿಸುವ ಉದ್ದೇಶದಿಂದ ಈ ಜೋಡೋ ಪಾದಯಾತ್ರೆ ನಡೆದಿದ್ದರೆ ಎಲ್ಲರೂ ಸ್ವಾಗತಿಸಬಹುದಾದ ಸಂಗತಿಯೇ ಆಗಿದೆ. ಇದರಿಂದ ಕಾಂಗ್ರೆಸ್ ಸಹಜವಾಗಿ ಚುನಾವಣಾ ಲಾಭವನ್ನು ಪಡೆದು ಒಂದಷ್ಟು ಸ್ಥಾನಗಳನ್ನು ಹೆಚ್ಚಿಸಿಕೊಂಡರೆ, ವಿರೋಧ ಮಾಡಲು ಏನೂ ಇಲ್ಲ. ಪ್ರಶ್ನೆಯಿರುವುದು, ಅಂತಹ ಸೀಮಿತತೆ ಅದರ ಘೋಷಿತ ಉದ್ದೇಶಕ್ಕೆ ಬಂದರೆ ಸಾಧಿಸುವುದಾದರೂ ಏನನ್ನು? ಇದರಲ್ಲಿ ಎಲ್ಲರೂ ಪಕ್ಷಾತೀತವಾಗಿ ಭಾಗವಹಿಸಬೇಕು ಎಂಬ ಉದ್ದೇಶವನ್ನು ಸಾಧಿಸಲು ಕಾಂಗ್ರೆಸ್ ಮಾಡಿರುವ ಪ್ರಯತ್ನವಾದರೂ ಏನು? ಬಹುತೇಕ ರಾಜ್ಯಗಳಲ್ಲಿ ಬಿಜೆಪಿಯನ್ನು ಎದುರಿಸುವ ಪಕ್ಷಗಳು ಪ್ರಾದೇಶಿಕ ಪಕ್ಷಗಳು ಮತ್ತು ಶಕ್ತಿಗಳೇ ಆಗಿವೆ. ಹೀಗಿರುವಾಗ ಅಲ್ಲೆಲ್ಲಾ ಎಲ್ಲರನ್ನೂ ಜೋಡಿಸಲು ಕಾಂಗ್ರೆಸ್‌ಗೆ ಸಾಧ್ಯವಿದೆಯೇ? ಹೀಗಾಗಿಯೇ ಈ ಯಾತ್ರೆಯು ಉದಾತ್ತ ಉದ್ದೇಶಗಳನ್ನು ಘೋಷಿಸಿದರೂ, ಅದನ್ನು ಸಾಧಿಸಲು ಬೇಕಾದ ಕಣ್ಣೋಟ ಸಮಂಜಸವಾಗಿಲ್ಲ. ಈ ಯಾತ್ರೆಯು ಖಂಡಿತವಾಗಿ, ಕಾಂಗ್ರೆಸಿಗರಲ್ಲಿ, ಪ್ರಜಾಪ್ರಭುತ್ವವಾದಿಗಳಲ್ಲಿ ಮತ್ತು ಜಾತ್ಯಾತೀತರಲ್ಲಿ ಒಂದು ಆಶಾ ಭಾವನೆಯನ್ನು ಮೂಡಿಸಿದೆ. ಅಷ್ಟರ ಮಟ್ಟಿಗೆ ಕಾಂಗ್ರೆಸಿನ ಈ ಪ್ರಯತ್ನವನ್ನು ಅಭಿನಂದಿಸಬಹುದು.

ಎರಡನೆಯದಾಗಿ, ಕಾಂಗ್ರೆಸ್‌ನ ಪ್ರಸಕ್ತ ಸ್ವರೂಪ ಅಥವಾ ಗುಣವನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು? ಈ ಬಗ್ಗೆ ಸಿಪಿಐ(ಎಂ) ನಿಲುವೇನು? 2022 ಏಪ್ರಿಲ್‌ನಲ್ಲಿ ನಡೆದ ಸಿಪಿಐ(ಎಂ)ನ 23 ನೇ ಮಹಾಧಿವೇಶನದಲ್ಲಿ ಕಾಂಗ್ರೆಸ್‌ನ ಕುರಿತು ರಾಜಕೀಯ ನಿರ್ಣಯದಲ್ಲಿ ಹೀಗೆ ಹೇಳಲಾಗಿದೆ; “ಕಾಂಗ್ರೆಸ್ ಪಕ್ಷವು ಭಾರತದ ದೊಡ್ಡ ಬಂಡವಾಳದಾರರ ನೇತೃತ್ವದ ಬಂಡವಾಳದಾರರು ಮತ್ತು ಜಮೀನ್ದಾರಿ ವರ್ಗಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತದೆ. ಅದು ಸರ್ಕಾರ ನಡೆಸುತ್ತಿರುವ ರಾಜ್ಯಗಳಲ್ಲಿ ನವ–ಉದಾರವಾದಿ ನೀತಿಗಳನ್ನು ಮುಂದುವರಿಸಿದೆ”.

“ಇದರ ರಾಜಕೀಯ ಪ್ರಭಾವ ಮತ್ತು ಸಂಘಟನಾ ಸಾಮರ್ಥ್ಯ ಕುಸಿಯುತ್ತಿದೆ ಮತ್ತು ವಿವಿಧ ರಾಜ್ಯಗಳಲ್ಲಿ ಅದರ ಹಲವಾರು ನಾಯಕರು ಬಿಜೆಪಿಗೆ ಪಕ್ಷಾಂತರ ಮಾಡುವುದರೊಂದಿಗೆ ಸರಣಿ ಬಿಕ್ಕಟ್ಟುಗಳಲ್ಲಿ ಅದು ಮುಳುಗಿದೆ. ಅದು ಜಾತ್ಯಾತೀತತೆಯನ್ನು ಘೋಷಿಸಿದರೂ, ಹಿಂದುತ್ವ ಶಕ್ತಿಗಳಿಗೆ ಸೈದ್ಧಾಂತಿಕ ಸವಾಲನ್ನು ಪರಿಣಾಮಕಾರಿಯಾಗಿ ಒಡ್ಡಲು ಅಸಮರ್ಥವಾಗಿದೆ ಮತ್ತು ಆಗಾಗ ಹೊಂದಾಣಿಕೆಯ ಧೋರಣೆಯನ್ನು ಅಳವಡಿಸಿಕೊಳ್ಳುತ್ತದೆ. ದುರ್ಬಲಗೊಂಡಿರುವ ಕಾಂಗ್ರೆಸ್ ಪಕ್ಷವು ಎಲ್ಲಾ ಜಾತ್ಯಾತೀತ ಪಕ್ಷಗಳನ್ನು ಅಣಿನೆರೆಸಲು ಅಸಮರ್ಥವಾಗಿದೆ... ಬಿಜೆಪಿ ಅಧಿಕಾರ ದಲ್ಲಿರುವುದರಿಂದ ಮತ್ತು ಆರ್‌ಎಸ್‌ಎಸ್‌ನೊಂದಿಗೆ ಅದರ ಮೂಲ ನಂಟಿನ

ಪುಟ 6 ಕ್ಕೆ

ಇರಾನ್ ಮತ್ತು ಕರ್ನಾಟಕದಲ್ಲಿ ಹಿಜಾಬ್

ಸಾವಿರಾರು ಜನ ಬೀದಿಗಿಳಿದು ಹಿಜಾಬಗಳನ್ನು ಸಾರ್ವಜನಿಕವಾಗಿ ಸುಡುವ ಮತ್ತು ತಮ್ಮ ಕೂದಲನ್ನು ಕತ್ತರಿಸಿ ಸುಡುವಂತಹ ಪ್ರತಿಭಟನೆಯನ್ನು ಮಾಡುತ್ತ ಸರ್ಕಾರದ ನಡೆಯನ್ನು ವಿರೋಧಿಸುತ್ತಿದ್ದಾರೆ. ಅಮಿನಿಯ ಸಾವನ್ನು ಪ್ರತಿಭಟಿಸಿ ಪರ್ಶಿಯನ್ ಭಾಷೆ ಹ್ಯಾಷ್ ಟ್ಯಾಗ್ ನಲ್ಲಿ "ಮಹ್ಸಾ ಅಮಿನಿ" ಎಂದು ಮಾಡಿರುವ ಟ್ವೀಟಗಳು 20 ಲಕ್ಷದಷ್ಟು ದಾಟಿರುವುದು ಗಮನ ಸೆಳೆಯುತ್ತದೆ. ಸರ್ಕಾರದ ವಿರುದ್ದ ಕಲ್ಲು ತೂರುತ್ತಿರುವ ಮಹಿಳೆಯರು "ಸರ್ವಾಧಿಕಾರಕ್ಕೆ ಸಾವು ಖಚಿತ" ಎಂದು ಘೋಷಣೆ ಕೂಗುತ್ತಿದ್ದಾರೆ. ತೆಹರಾನಿನ ಮಹಿಳೆಯರು ಇಸ್ಲಾಮಿಕ ಕಪಿಮುಷ್ಟಿಯಿಂದ ಹೊರಬರಲು ತಮ್ಮ ಹಿಜಾಬುಗಳನ್ನು ಬೆಂಕಿಗೆ ಹಾಕಿ "ಸರ್ವಾಧಿಕಾರಿಗಳಿಗೆ ಮರಣದಂಡನೆ ಕೊಡಿ" ಎಂದು ಕೂಗುತ್ತಿದ್ದಾರೆ. 2014ರಲ್ಲಿ ಇರಾನಿನ ಮಹಿಳೆಯರು ಆನ್ ಲೈನ್ ಮೂಲಕ ಹಿಜಾಬಿನ ವಿರುದ್ಧ ಫೋಟೋ, ವಿಡಿಯೋ ಅಭಿಯಾನ ನಡೆಸಿದರು. ಇದರ ಮುಂದುವರಿಕೆಯಾಗಿ ಅಲ್ಲಿ White Wednesday ಮತ್ತು The Girls of Revolution Street ನಂತಹ ಚಳುವಳಿಗಳನ್ನು ಮಹಿಳೆಯರು ರೂಪಿಸಿದರು.



ಡಾ.ಕೆ. ಷರೀಫಾ

ಉಡುಪಿಯ ಸರ್ಕಾರಿ ಪದವಿ ಪೂರ್ವ ಕಾಲೇಜು ಹಿಜಾಬ್ ಧರಿಸಿ ಬಂದ ಕಾರಣಕ್ಕೆನೆ ಆರು ಮಂದಿ ಹುಡುಗಿಯರನ್ನು ತರಗತಿಗಳಿಂದ ನಿಷೇಧಿಸಿತು. ಇದರ ಬೆನ್ನ ಹಿಂದೆಯೇ ಅನೇಕ ಕಡೆಗಳಲ್ಲಿ ಶಾಲಾ ಕಾಲೇಜುಗಳಲ್ಲಿ ಇದೇ ರೀತಿಯ ನಿರ್ಭಂಧಗಳನ್ನು ಹಾಕಲು ಆರಂಭಿಸಿದವು. ಹಿಜಾಬ್ ಧರಿಸುವ ಹಕ್ಕು ಮತ್ತು ಶಿಕ್ಷಣದ ಹಕ್ಕಿನಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಲು ಸೂಚಿಸಿತು. ಕರ್ನಾಟಕದಲ್ಲಿ ಹಿಜಾಬ್ ಹಾಕಿಕೊಳ್ಳದಂತೆ ಇಲ್ಲಿಯ ಹಿಂದುತ್ವದ ಸರ್ಕಾರ ನಿರ್ಭಂಧಿಸಿದರೆ. ಇರಾನಿನ ಇಸ್ಲಾಮಿಕ ಸರ್ಕಾರ ಅವರಿಗೆ ಹಿಜಾಬ್ ಹಾಕಿಕೊಳ್ಳಲೇಬೇಕೆಂದು ನಿರ್ಭಂಧಿಸುತ್ತದೆ. ಇವೆರಡೂ ಮಹಿಳೆಯ ವಸ್ತ್ರ ಮತ್ತು ಕೋಮು ರಾಜಕಾರಣದ ನೆಲೆಗಳನ್ನು ಸೂಚಿಸುವುದಿಲ್ಲವೆ? ಇವರಿಬ್ಬರ ಧರ್ಮರಾಜಕಾರಣದಲ್ಲಿ ನಲುಗುತ್ತಿರುವವಳು ಮಹಿಳೆಯಾಗಿದ್ದಾಳೆ.

ಈ ಹಿಂದೆ ಖಮೇನಿಯ ಆಡಳಿತಾವಧಿಯಲ್ಲಿ ಇರಾನಿನಲ್ಲಿ ಟಿ.ವಿಯಲ್ಲಿ ಸುದ್ದಿವಾಚಕಿಯರ ಧ್ವನಿ ಕೇಳಿ, ಆ ಧ್ವನಿಗೆ ಪುರುಷರಿಗೆ ಉದ್ರೇಕವಾಗುತ್ತದೆ. ಆದ್ದರಿಂದ ಟಿ.ವಿಯಲ್ಲಿ ಮಹಿಳೆಯರನ್ನು ನೇಮಿಸಕೂಡದು ಎಂದು ಆದೇಶ ಹೊರಡಿಸಿದಾಗ ಸುಮಾರು 50,000 ಮಹಿಳೆಯರು ತೆಹೆರಾನಿನ ಬೀದಿ ಬೀದಿಗಳಲ್ಲಿ ಘೋಷಣೆ ಕೂಗಿ "ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆಯೇಕೆ?" ಎಂದು ಪ್ರಶ್ನಿಸಿ ಹೋರಾಟಕ್ಕಿಳಿದಾಗ ಖೊಮೇನಿ ತನ್ನ ಆದೇಶವನ್ನು ಹಿಂದಕ್ಕೆ ಪಡೆದಿರುವುದು ಈಗ ಇತಿಹಾಸ. ಇರಾನಿನಲ್ಲಿ 1979ರಲ್ಲಿ ನಡೆದ ಇಸ್ಲಾಮಿಕ್ ಕ್ರಾಂತಿಯ ನಂತರ ಅಲ್ಲಿ "ಹಿಜಾಬ್ ನ್ನು ಮಹಿಳೆಯರು ಕಂಪಲ್ಸರಿ ಧರಿಸಲೇಬೇಕೆಂಬ" ಡ್ರೇಸ್ ಕೋಡ್ ಜಾರಿಯಾಯಿತು.

ಹಿಜಾಬ್ ಸರಿಯಾಗಿ ಧರಿಸದ ಕಾರಣಕ್ಕೆ ಇರಾನಿನ ಕುರ್ದಿಸ್ ಪ್ರದೇಶದ ಸಾಕ್ವಜ್ ನಗರದ 22 ವರ್ಷದ ಮಹ್ಸಾ ಅಮೀನಿಯನ್ನು ಪೋಲಿಸರು ಬಂಧಿಸಿದ್ದರು. ನಂತರ ಪೋಲೀಸ್ ಕಸ್ಟಡಿಯ್ಲಲಿಯೇ ಅವರ ಹೊಡೆತದ ಕಾರಣ ಮೂರು ದಿನ ಕೋಮಾನಲ್ಲಿದ್ದು ದಿನಾಂಕ 13–9–2022 ರಂದು ಅವಳ ಸಾವಾಗುತ್ತದೆ. ಶತಶತಮಾನಗಳಿಂದ ನೊಂದಿರುವ ಇರಾನಿನ ಮಹಿಳೆಯರು ಈಗ ಮತ್ತೊಮ್ಮೆ ಸಿಡಿದೆದ್ದಿದ್ದಾರೆ. ಹೋರಾಟಕ್ಕಿಳಿದಿದ್ದಾರೆ. ಕೇವಲ ಮಹಿಳೆಯರೇ ಅಲ್ಲ. ಬದಲಾಗಿ ಪುರುಷರೂ ಈ ಹೋರಾಟವನ್ನು ಬೆಂಬಲಿಸಿ ಬೀದಿಗಿಳಿಯುತ್ತಿದ್ದಾರೆ. ಇದರ ಪರಿಣಾಮವಾಗಿ ಸಾವಿರಾರು ಜನ ಬೀದಿಗಿಳಿದು ಹಿಜಾಬಗಳನ್ನು ಸಾರ್ವಜನಿಕವಾಗಿ ಸುಡುವ ಮತ್ತು ತಮ್ಮ ಕೂದಲನ್ನು ಕತ್ತರಿಸಿ ಸುಡುವಂತಹ ಪ್ರತಿಭಟನೆಯನ್ನು ಮಾಡುತ್ತ ಸರ್ಕಾರದ ನಡೆಯನ್ನು ವಿರೋಧಿಸುತ್ತಿದ್ದಾರೆ. ಅಮಿನಿಯ ಸಾವನ್ನು ಪ್ರತಿಭಟಿಸಿ ಪರ್ಶಿಯನ್ ಭಾಷೆ ಹ್ಯಾಷ್ ಟ್ಯಾಗ್ ನಲ್ಲಿ "ಮಹ್ಸಾ ಅಮಿನಿ" ಎಂದು ಮಾಡಿರುವ ಟ್ವೀಟಗಳು 20 ಲಕ್ಷದಷ್ಟು ದಾಟಿರುವುದು ಗಮನ ಸೆಳೆಯುತ್ತದೆ. ಸರ್ಕಾರದ ವಿರುದ್ದ ಕಲ್ಲು ತೂರುತ್ತಿರುವ ಮಹಿಳೆಯರು "ಸರ್ವಾಧಿಕಾರಕ್ಕೆ ಸಾವು ಖಚಿತ" ಎಂದು ಘೋಷಣೆ ಕೂಗುತ್ತಿದ್ದಾರೆ.





ಪ್ರತಿಭಟನಕಾರರ ಮೇಲೇ ಪೋಲೀಸರ ಗುಂಡಿನಿಂದ ಇಲ್ಲಿಯವರೆಗೆ 15 ಜನ ನಾಗರಿಕರ ಸಾವಾಗಿದೆ. 75 ಜನ ಪ್ರತಿಭಟಕಾರರು ಪೋಲೀಸರ ದಾಳಿಯಿಂದ ಗಾಯಗೊಂಡಿದ್ದಾರೆ. ಅಮಿನಿಯ ಊರಾದ ಕುರ್ದಿಸ್, ಸಾಕ್ವೇಜ್ ನಲ್ಲಿ ಹೋರಾಟ ತೀವ್ರವಾಗುತ್ತಿದೆ. ಇಂಟರನೆಟ್ ಸೇವೆಗಳನ್ನು ಸ್ಥಗಿತಗೊಳಿಸಲಾಗಿದೆ.

ಇದು ಕರ್ನಾಟಕ ಸರ್ಕಾರದ ಸರ್ವಾಧಿಕಾರೀ ಮನೋವೃತ್ತಿಗೂ ಅನ್ವಯಿಸುವುದಿಲ್ಲವೇ? ಕರ್ನಾಟಕ ಸರ್ಕಾರ ಈಗೀಗ ಶಿಕ್ಷಣಕ್ಕೆ ತೆರೆದುಕೊಳ್ಳುತ್ತಿರುವಂತಹ ಮುಸ್ಲಿಂ ಸಮುದಾಯದ ಹೆಣ್ಣು ಮಕ್ಕಳ ಶೈಕ್ಷಣಿಕ ಹಿನ್ನಡೆಗೆ ಕಾರಣವಾಗಲಿಲ್ಲವೇ? ಇಲ್ಲಿ ಹೀಗಾದರೆ ಇರಾನಿನಲ್ಲಿ ಮಹಿಳೆಯರು ಕೂದಲು ಕಾಣದಂತೆ ಹಿಜಾಬ್ ಧರಿಸಬೇಕು. ಇತ್ತೀಚೆಗೆ ಅಲ್ಲಿ ಕೇವಲ 13 ವರ್ಷದ ಹೆಣ್ಣು ಮಗುವಿಗೆ ಮದುವೆ ಮಾಡಲಾಗುತ್ತಿದೆ. ಖುರಾನಿನ ಪ್ರಕಾರವೇ ಮಹಿಳೆಗೆ ತನಗೆ ಬೇಡವಾದ ಗಂಡನನ್ನು ಬಿಡುವ ಖುಲಾ ಎಂಬ ಅಧಿಕಾರವನ್ನೂ ಕಿತ್ತುಕೊಳ್ಳಲಾಗಿದೆ. ಇದು ಗಂಡಸಿನ ಪುರುಷಾಧಿಪತ್ಯದ ಅತಿರೇಕವಲ್ಲವೇ? ನಮ್ಮ ಆಹಾರ, ಬಟ್ಟೆ, ಸಂಗಾತಿಗಳ ಆಯ್ಕೆ ಎಲ್ಲದರ ಮೇಲೆಯೂ ನಿರ್ಬಂಧ. ಮೋದಿಯ ಶಹಭಾಶಗಿರಿಗಾಗಿ ತರಾತುರಿಯಲ್ಲಿ ಕರ್ನಾಟಕ ಸರ್ಕಾರ ಹಿಜಾಬ್ ಕಾರಣ ನೀಡಿ ನಿರ್ಬಂಧ ಹೇರುತ್ತದೆ. ಕೋರ್ಟಿಗೆ ಹೋಗುತ್ತದೆ. ಗೋಹತ್ಯಾ ನಿಷೇಧ, ಮತಾಂತರ ನಿಷೇಧ, ಹಿಜಾಬ್, ಯು.ಎ.ಪಿ.ಎ. ಕಾಯ್ದೆ ಜಾರಿ.ಈ ಮೂಲಕ ನಿರಪರಾಧಿಗಳನ್ನು, ಅದರಲ್ಲೂ ಮುಸ್ಲಿಮರನ್ನು, ಸಾಹಿತಿ, ಬುದ್ಧಿಜೀವಿ, ಹೋರಾಟಗಾರರನ್ನು ಜೈಲಿಗೆ ತಳ್ಳುವ ಕುತಂತ್ರ ಮಾಡುತ್ತದೆ. ದುಷ್ಯಂತ ದುಬೆಯಂತಹ ವಕೀಲರು "ಹುಡುಗಿಯರು ಹಿಜಾಬ್ ಹಾಕುವುದರಿಂದ ಅವರ ಘನತೆ ಹೆಚ್ಚುತ್ತದೆ" ಎಂದು ಹೇಳುತ್ತಾರೆ.

ತೆಹರಾನಿನ ಮಹಿಳೆಯರು ಇಸ್ಲಾಮಿಕ ಕಪಿಮುಷ್ಟಿಯಿಂದ ಹೊರಬರಲು ತಮ್ಮ ಹಿಜಾಬುಗಳನ್ನು ಬೆಂಕಿಗೆ ಹಾಕಿ "ಸರ್ವಾಧಿಕಾರಿಗಳಿಗೆ ಮರಣದಂಡನೆ ಕೊಡಿ" ಎಂದು ಕೂಗುತ್ತಿದ್ದಾರೆ. 2014ರಲ್ಲಿ ಇರಾನಿನ ಮಹಿಳೆಯರು ಆನ್ ಲೈನ್ ಮೂಲಕ ಹಿಜಾಬಿನ ವಿರುದ್ಧ ಫೋಟೋ, ವಿಡಿಯೋ ಅಭಿಯಾನ ನಡೆಸಿದರು. ಇದರ ಮುಂದುವರಿಕೆಯಾಗಿ ಅಲ್ಲಿ White Wednesday ಮತ್ತು The Girls of Revolution Street ನಂತಹ ಚಳುವಳಿಗಳನ್ನು ಮಹಿಳೆಯರು ರೂಪಿಸಿದರು. ಇರಾನಿನ ಸಂಸದ ಜಲಾಲ್ ರಶೀದಿ "ಇದು ಇರಾನಿಗೆ ಬಹಳಷ್ಟು ನಷ್ಟವನ್ನುಂಟು ಮಾಡುತ್ತದೆ" ಎಂದು ಹೇಳುತ್ತಾರೆ. ಪ್ರಾನ್ಸನ ಅಧ್ಯಕ್ಷರಾದ ಎಮ್ಯಾನುಯೆಲ್ ಮ್ಯಾಕ್ರಮ್‌ರವರು ಹೇಳುತ್ತಾರೆ. "ನಾವು ಮಹಿಳೆಯರ ಮಾನವೀಯ ಹಕ್ಕುಗಳನ್ನು ಬೆಂಬಲಿಸುತ್ತೇವೆ. ನಾವು ಮಹಿಳೆಯರ ಹಕ್ಕಿನ ಹೋರಾಟದ ಜೋತೆಗಿದ್ದೇವೆ. ಇದರಿಂದ ಇರಾನಿನ ವಿಶ್ವಾಸಾರ್ಹತೆಯೂ ಆತಂಕದಲ್ಲಿದೆ"ಎಂದು. ಇದೇ ಹಿಜಾಬಿನ ಕಾರಣಕ್ಕೆ ಕರ್ನಾಟಕ ಹಾಗೂ ಭಾರತದ ಗೌರವವೂ ಕುಸಿಯುತ್ತಲಿತ್ತು ಎಂಬುದನ್ನು ಗಮನಿಸಬೇಕಾಗಿದೆ.

ಅದು ಇರಾನೇ ಆಗಲಿ, ಭಾರತವೇ ಆಗಲಿ ಅದಕ್ಕೀಗ ವಸ್ತ್ರಸಂಹಿತೆ ಬೇಕಿಲ್ಲ. ಬದಲಾಗಿ ಬದಲಾಗುತ್ತಿರುವ ಪರಿಸರ, ಅತೀವೃಷ್ಟಿ ಅನಾವೃಷ್ಟಿ, ರೈತ ಸಮಸ್ಯೆ, ಕುಸಿಯುತ್ತಿರುವ ರುಪಾಯಿ ಮೌಲ್ಯ, ಜಿ.ಡಿ.ಪಿ, ಕುಸಿತ, ದಿನೇ ದಿನೇ ಹೆಚ್ಚುತ್ತಿರುವ ಬಡತನ, ನಿರುದ್ಯೋಗ, ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರ, ಶಿಕ್ಷಣ, ಆಹಾರ, ಖಾಸಗಿಯವರಿಗೆ ಮಾರಿಕೊಳ್ಳುತ್ತಿರುವ ಒಂದೋಂದೇ ಆಸ್ತಿಗಳ ಕುರಿತು ಚಿಂತಿಸಬೇಕಿದೆ. ಮಾರುತ್ತಿರುವ ಮೋದಿಯಿಂದ ನಮ್ಮ ಸ್ವತ್ತುಗಳ ರಕ್ಷಣೆ, ಮತ್ತು ಯುವಜನರ ನಿರುದ್ಯೋಗ, ಬೆಲೆಯೇರಿಕೆಯನ್ನು ನಿಯಂತ್ರಿಸುವುದು ತುರ್ತು ಅಗತ್ಯವಾಗಿದೆ.

ಕಾಂಗ್ರೆಸ್‌ನ ಭಾರತ್ ಜೋಡೋ ಯಾತ್ರೆಯೂ ಕೋಮುವಾದದ ವಿರುದ್ಧ ಹೋರಾಟವೂ

ಪುಟ 5 ರಿಂದ

ಹಿನ್ನೆಲೆಯಲ್ಲಿ, ಬಿಜೆಪಿ ಪ್ರಧಾನ ಅಪಾಯವಾಗಿದೆ. ಹೀಗಾಗಿ ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಸಮಾನ ಅಪಾಯಗಳಲ್ಲ. ಆದರೆ ಕಾಂಗ್ರೆಸ್ ಪಕ್ಷದೊಂದಿಗೆ ರಾಜಕೀಯ ಹೊಂದಾಣಿಕೆಯಿಲ್ಲ".

ಕಾಂಗ್ರೆಸ್‌ಗಿರುವ ನವ–ಉದಾರವಾದಿ ನೀತಿಗಳ ಮೇಲಿನ ಬದ್ಧತೆ ಮತ್ತು ಕೋಮುವಾದದ ವಿರುದ್ಧ ಸೈದ್ಧಾಂತಿಕ ದುರ್ಬಲತೆಯ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷದ ಕುರಿತು ಈ ಧೋರಣೆಯನ್ನು ರೂಪಿಸಲಾಗಿದೆ. ಕಾಂಗ್ರೆಸ್‌ನ ಈ ಗುಣವನ್ನು ವಿಮರ್ಶಿಸುವಾಗಲೇ ಬಿಜೆಪಿಯ ಹಿಂದುತ್ವ ಕೋಮುವಾದದ ಜೊತೆಯಲ್ಲಿ ಕಾಂಗ್ರೆಸ್‌ನ್ನು ಸಮೀಕರಿಸುವುದಿಲ್ಲ. ಬಿಜೆಪಿಯೇ ಪ್ರಧಾನ ಅಪಾಯ ಎಂದು ಸಿಪಿಐ(ಎಂ) ಪರಿಗಣಿಸುತ್ತದೆ. ಆದರೆ ಕಾಂಗ್ರೆಸ್ ಪಕ್ಷದೊಂದಿಗೆ ರಾಷ್ಟ್ರ ಮಟ್ಟದಲ್ಲಿ ನೇರ ರಾಜಕೀಯ ಹೊಂದಾಣಿಕೆಯನ್ನು ಮಾಡಿಕೊಳ್ಳುವುದಿಲ್ಲವೆಂದು ಸಿಪಿಐ(ಎಂ) ಹೇಳುವುದಕ್ಕೆ ಇವು ಕಾರಣಗಳಾಗಿವೆ. ಈ ಹಿನ್ನೆಲೆಯಲ್ಲೇ, ವಿವಿಧ ರಾಜ್ಯಗಳ ರಾಜಕೀಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಬಿಜೆಪಿ ವಿರೋಧಿ ಮತಗಳು ಹಂಚಿಹೋಗದಂತೆ ಒಟ್ಟುಗೂಡಿಸಲು ಎಲ್ಲಾ ಪ್ರಯತ್ನಗಳನ್ನು ಮಾಡುವುದಾಗಿ ಸಿಪಿಐ(ಎಂ) ತೀರ್ಮಾನಿಸಿದೆ.

ಕಾಂಗ್ರೆಸ್ ಕುರಿತಂತೆ ಸದಾಭಿಪ್ರಾಯ ಹೊಂದಿರುವ ಹಲವರು, ಭಾರತ್ ಜೋಡೋ ಪಾದಯಾತ್ರೆಯ ಕುರಿತು ಅತ್ಯಂತ ಭಾವನಾತ್ಮಕವಾಗಿ ಪ್ರತಿಕ್ರಿಯಿಸುವುದನ್ನು ಕಾಣಬಹುದು. ಕಮ್ಯುನಿಸ್ಟ್ ಪಕ್ಷಗಳೂ ಸೇರಿದಂತೆ ಕಾಂಗ್ರೆಸ್ ಜೊತೆ ಕೈಜೋಡಿಸವುದೊಂದೇ ನಮ್ಮ ಮುಂದಿರುವ ದಾರಿ ಎಂಬಂತೆ ಕೆಲವರು ಮಾತನಾಡುತ್ತಾರೆ. ಹಿಂದುತ್ವ ಕೋಮುವಾದವನ್ನು ಮತ್ತು ಕೋಮುವಾದಿ ಕಾರ್ಪೊರೇಟ್ ನಂಟನ್ನು ಎದುರಿಸಲು ಕಾಂಗ್ರೆಸ್ ಸಮರ್ಥವಾಗಿದೆ ಎಂದು ಇವರು ಭಾವಿಸಿದ್ದಾರೆ. ಕಾಂಗ್ರೆಸ್‌ನ ನವ–ಉದಾರವಾದಿ ಆರ್ಥಿಕ ಧೋರಣೆ ಮತ್ತು ಕೋಮುವಾದದ ಕುರಿತು ಮೃದು ಧೋರಣೆಯನ್ನು ಅದರ ವರ್ಗ ನೆಲೆಯ ಭಾಗವಾಗಿ ಇವರು ನೋಡುವುದಿಲ್ಲ. ವರ್ಗ ನೆಲೆ ಮತ್ತು ಸಾಮಾಜಿಕ ನೆಲೆ ಎರಡು ದೃಷ್ಟಿಯಿಂದಲೂ ಕಾಂಗ್ರೆಸ್ ಈಗಿನ ಪರಿಸ್ಥಿತಿಗೆ ಪರ್ಯಾಯವೇ ಅಲ್ಲ. ಹೀಗಿದ್ದಾಗಲೂ, ಸಿಪಿಐ(ಎಂ) ಪಕ್ಷವು ಕಾಂಗ್ರೆಸ್‌ನ್ನು ಬಿಜೆಪಿ ಜೊತೆ ಸಮೀಕರಣ ಮಾಡುವುದಿಲ್ಲ ಎಂಬುದನ್ನು ಕಾಂಗ್ರೆಸ್ ಕುರಿತು ಭಾವನಾತ್ಮಕವಾಗಿ ಮಾತನಾಡುವವರು ಗಮನಿಸಬೇಕು. ಈ ಸದ್ಯ ಅಖಿಲ ಭಾರತ ಮಟ್ಟದಲ್ಲಿ ಎಲ್ಲಾ ಜಾತ್ಯಾತೀತ ಪಕ್ಷಗಳನ್ನು ಅಣಿನೆರೆಸಿ ಮುನ್ನಡೆಸುವ ಸಾಮರ್ಥ್ಯವಾಗಲೀ, ಬದ್ಧತೆಯಾಗಲೀ ಕಾಂಗ್ರೆಸ್ ಹೊಂದಿಲ್ಲ ಎಂಬುದನ್ನು ಗಮನಿಸಬೇಕು.

ಬಿಜೆಪಿಯ ಕಳೆದ 8 ವರ್ಷಗಳ ಆಡಳಿತವು ನಿರಂಕುಶ ದಾಳಿಗಳನ್ನು ತೀವ್ರಗೊಳಿಸಿರುವ ಕೋಮುವಾದಿ ಕಾರ್ಪೊರೇಟ್ ನಂಟಿನ ಕ್ರೋಢೀಕರಣವಾಗಿದೆ. ಎರಡನೇ ಬಾರಿಗೆ 2019 ರಲ್ಲಿ ಅಧಿಕಾರಕ್ಕೆ ಬಂದ ನಂತರದಲ್ಲಿ ಫ್ಯಾಸಿಸ್ಟ್‌ವಾದಿ ಆರ್‌ಎಸ್‌ಎಸ್‌ನ ಹಿಂದುತ್ವ ರಾಷ್ಟ್ರದ ಅಜೆಂಡಾವನ್ನು ಆಕ್ರಮಣಕಾರಿಯಾಗಿ ಜಾರಿ ಮಾಡುತ್ತಿದೆ. ಇಷ್ಟೇ ಆಕ್ರಮಣಕಾರಿಯಾಗಿ ನವ–ಉದಾರವಾದಿ ಆರ್ಥಿಕ ನೀತಿಗಳನ್ನು ಮತ್ತು ನಿರಂಕುಶ ಆಡಳಿತವನ್ನು ಜಾರಿಗೊಳಿಸುತ್ತಿದೆ. ಆರ್‌ಎಸ್‌ಎಸ್ ಪ್ರೇರಿತ ಹಿಂದುತ್ವ ರಾಷ್ಟ್ರ ಅಜೆಂಡಾವು ಸಂವಿಧಾನಿಕ ಚೌಕಟ್ಟನ್ನು ವಿನಶಾಕಾರಿಯಾಗಿ ತಿಂದು ಹಾಕುತ್ತಿದೆ ಮತ್ತು ಭಾರತ ಗಣರಾಜ್ಯದ ಜಾತ್ಯಾತೀತ ಪ್ರಜಾಪ್ರಭುತ್ವದ ಲಕ್ಷಣವನ್ನು ನಾಶ ಮಾಡುತ್ತಿದೆ.

ಆದ್ದರಿಂದ ನಮ್ಮ ಮುಂದಿನ ಪ್ರಧಾನ ಕರ್ತವ್ಯವೆಂದರೆ ಬಿಜೆಪಿಯನ್ನು ಮೂಲೆಗುಂಪು ಮಾಡುವುದು ಮತ್ತು ಸೋಲಿಸುವುದು. ಇದನ್ನು ಕೇವಲ ಚುನಾವಣಾ ಹೊಂದಾಣಿಕೆಗಳಿಗೆ ➚

ತಥಾಕಥಿತ ಮಧ್ಯಪಂಥೀಯ ಎಡ ಪಕ್ಷಗಳು, ಅದರಲ್ಲೂ ಮುಖ್ಯವಾಗಿ ಡೆಮಾಕ್ರಟಿಕ್ ಪಾರ್ಟಿ, ನವ–ಉದಾರವಾದಿ ಸಂಪ್ರದಾಯಕ್ಕೆ ಸಂಪೂರ್ಣವಾಗಿ ಶರಣಾದ ಹಿನ್ನೆಲೆಯಲ್ಲಿ ಉಗ್ರ–ಬಲಪಂಥೀಯ ಶಕ್ತಿ ಮೇಲೆದ್ದು ಬಂದ ವಿದ್ಯಮಾನ ನಡೆದಿದೆ. ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿಗಳು ಮತ್ತು ಹೆಚ್ಚುತ್ತಿರುವ ಯುವಜನರ ನಿರುದ್ಯೋಗದಿಂದ ಉಂಟಾದ ಅತೃಪ್ತಿಯನ್ನು ಅತಿ–ಬಲಪಂಥೀಯ ಶಕ್ತಿಗಳು ಬಳಸಿಕೊಂಡವು.

ಇಟೆಲಿ ಚುನಾವಣೆ ಫಲಿತಾಂಶದ ಪಾಠಗಳು

ಪ್ರಕಾಶ್ ಕಾರತ್

ಇಟೆಲಿ ಸಂಸತ್ ಚುನಾವಣೆಗಳಲ್ಲಿ ಅತಿ–ಬಲಪಂಥೀಯ ಮೈತ್ರಿಕೂಟ ಗೆಲುವು ಸಾಧಿಸಿರುವುದು ಯುರೋಪ್‌ಗೆ ಮಹತ್ವದ ಕ್ಷಣವಾಗಿದೆ. ಫ್ಯಾಸಿಸ್ಟೋತ್ತರ ಫ್ರಾಟೆಲಿ ಡಿ'ಇಟಾಲಿಯಾ (ಬ್ರದರ್ಸ್ ಪಾರ್ಟಿ ಆಫ್ ಇಟೆಲಿ) ಮತ್ತು ಅದರ ಮಿತ್ರ ಪಕ್ಷಗಳಾದ ದಿ ಲೀಗ್ ಮತ್ತು ಫೋರ್ಜಾ ಇಟಾಲಿಯಾ ಒಳಗೊಂಡ ಮೈತ್ರಿಕೂಟ 46% ಮತಗಳನ್ನು ಪಡೆದಿದೆ.

ಐರೋಪ್ಯ ಒಕ್ಕೂಟದಲ್ಲಿ ಇಟೆಲಿ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗಿದೆ. ಜರ್ಮನಿ ಮೊದಲ ಹಾಗೂ ಫ್ರಾನ್ಸ್ ಎರಡನೇ ಸ್ಥಾನದಲ್ಲಿವೆ. ಇಟೆಲಿ, ಜಿ–7 ಕೂಟದ ಸದಸ್ಯ ರಾಷ್ಟ್ರವೂ ಆಗಿದೆ. ನವ–ಫ್ಯಾಸಿಸ್ಟ್ ಬೇರುಗಳನ್ನು ಹೊಂದಿರುವ ಪಕ್ಷದ ನಾಯಕಿಯಾಗಿರುವ ಜಾರ್ಜಿಯಾ ಮೆಲನಿ, ಈಗ ಇಟೆಲಿಯ ಮಹಿಳಾ ಪ್ರಧಾನಿ ಆಗಲಿದ್ದಾರೆ.

ಇಟಾಲಿಯನ್ ಸೋಷಲಿಸ್ಟ್ ಮೂವ್‌ಮೆಂಟ್‌ನ (ಎಂಎಸ್‌ಐ) ಯುವ ಸಂಘಟನೆಯ ನಾಯಕಿಯಾಗಿ ಮೆಲನಿ ತಮ್ಮ ರಾಜಕೀಯ ಜೀವನ ಆರಂಭಿಸಿದ್ದರು. ಎಂಎಸ್‌ಐ, ಮುಸಲೋನಿ ಬೆಂಬಲಿಗರು 1946ರಲ್ಲಿ ಸ್ಥಾಪಿಸಿದ ಪಕ್ಷವಾಗಿದೆ. ಬಲಪಂಥೀಯ ಗುಂಪುಗಳ ಹಲವು ಒಡಕುಗಳು ಹಾಗೂ ವಿಲೀನಗಳ ಸರಣಿಯ ನಂತರ 2012ರಲ್ಲಿ ಬ್ರದರ್ಸ್ ಪಕ್ಷದ ಸ್ಥಾಪನೆಯಾಗಿತ್ತು. ಫ್ಯಾಸಿಸ್ಟ್ ಲಾಂಛನವಾದ ಕೆಂಪು, ಬಿಳಿ ಮತ್ತು ಹಸಿರು ಜ್ವಾಲೆಯನ್ನೇ ಈ ಪಕ್ಷ ಈಗಲೂ ತನ್ನ ಚಿಹ್ನೆಯಾಗಿ ಬಳಸುತ್ತಿದೆ. 2018ರ ಸಂಸದೀಯ ಚುನಾವಣೆಯಲ್ಲಿ ಬ್ರದರ್ಸ್ ಪಾರ್ಟಿ ಕೇವಲ 4% ಮತ ಪಡೆದಿತ್ತು. ಈಗ ಅದು 26% ಮತದೊಂದಿಗೆ ಎಲ್ಲ ಪಕ್ಷಗಳಿಗಿಂತ ಅತ್ಯಧಿಕ ಓಟು ಪಡೆದ ಪಕ್ಷವಾಗಿ ಹೊರಹೊಮ್ಮಿದೆ. ವಲಸೆ–ವಿರೋಧಿ, ಜನಾಂಗೀಯ ರಾಷ್ಟ್ರೀಯತಾವಾದ, ಯುರೋಪ್–ವಿರೋಧಿ ಮತ್ತು ಮಿತವ್ಯಯ–ವಿರೋಧಿ ಘೋಷಣೆಗಳ ಮಿಶ್ರಣವು ಆರ್ಥಿಕ ಸಂಕಷ್ಟಗಳಿಂದ ನಲಗುತ್ತಿದ್ದ ದುಡಿಯುವ ವರ್ಗವೂ ಸೇರಿದಂತೆ ಜನರನ್ನು ಆಕರ್ಷಿಸಲು ಯಶಸ್ವಿಯಾಯಿತು.

ತಥಾಕಥಿತ ಮಧ್ಯಪಂಥೀಯ ಎಡ ಪಕ್ಷಗಳು, ಅದರಲ್ಲೂ ಮುಖ್ಯವಾಗಿ ಡೆಮಾಕ್ರಟಿಕ್ ಪಾರ್ಟಿ, ನವ–ಉದಾರವಾದಿ ಸಂಪ್ರದಾಯಕ್ಕೆ ಸಂಪೂರ್ಣವಾಗಿ ಶರಣಾದ ಹಿನ್ನೆಲೆಯಲ್ಲಿ ಉಗ್ರ–ಬಲಪಂಥೀಯ ಶಕ್ತಿ ಮೇಲೆದ್ದು ಬಂದ ವಿದ್ಯಮಾನ ನಡೆದಿದೆ. ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿಗಳು ಮತ್ತು ಹೆಚ್ಚುತ್ತಿರುವ ಯುವಜನರ ನಿರುದ್ಯೋಗದಿಂದ ಉಂಟಾದ ಅತೃಪ್ತಿಯನ್ನು ಅತಿ–ಬಲಪಂಥೀಯ ಶಕ್ತಿಗಳು ಬಳಸಿಕೊಂಡವು.

ಮಾರಿಯೋ ಡ್ರಾಘಿಯ ಬಹು–ಪಕ್ಷ ಮೈತ್ರಿಕೂಟ ಸರಕಾರವನ್ನು ಐರೋಪ್ಯ ಒಕ್ಕೂಟದ ತಾಕೀತಿನಂತೆ ನವ–ಉದಾರವಾದಿ ಅಜೆಂಡಾ ಜಾರಿಗೊಳಿಸುವ ಉದ್ದೇಶದಿಂದ ರಚಿಸಲಾಗಿತ್ತು. ಡ್ರಾಘಿ ಒಬ್ಬ ತಂತ್ರಜ್ಞನಾಗಿದ್ದು (ಟೆಕ್ನೋಕ್ರಾಟ್) ಯುರೋಪಿಯನ್ ಸೆಂಟ್ರಲ್ ಬ್ಯಾಂಕ್‌ನ ಮಾಜಿ ಮುಖ್ಯಸ್ಥರಾಗಿದ್ದಾರೆ. ಎರಡು ಅತಿ–ಬಲಪಂಥೀಯ ಪಕ್ಷಗಳಾದ ದಿ ಲೀಗ್ ಮತ್ತು ಫೋರ್ಜಾ ಇಟಾಲಿಯಾ ಸಹಿತ ಎಲ್ಲ ಪಕ್ಷಗಳು ಡ್ರಾಘಿ ಸರಕಾರವನ್ನು ಸೇರಿದ್ದವು. ಆದರೆ ಬ್ರದರ್ಸ್ ಪಾರ್ಟಿ ಹೊರಗೆ ಉಳಿದಿತ್ತು.

ಐರೋಪ್ಯ ಒಕ್ಕೂಟ ಮತ್ತು ಅದರ ಮಿತವ್ಯಯ ಸಲಹೆಗಳ ಮೇಲೆ ನಡೆಯುತ್ತಿದ್ದ ಸತತ ದಾಳಿ ಬಂಡವಾಳಶಾಹಿ ಬಿಕ್ಕಟ್ಟು ಮತ್ತು ಕರೊನಾ ಸಾಂಕ್ರಾಮಿಕತೆಯ ಕೆಟ್ಟ ಪರಿಣಾಮಗಳಿಗೆ ಒಳಗಾಗಿದ್ದ ದುಡಿಯುವ ಜನರಲ್ಲಿ ಪ್ರತಿಕ್ರಿಯೆಯನ್ನು ಗಳಿಸಿತು. ಆಫ್ರಿಕಾದಿಂದ ವಲಸೆ ಬಂದ ಜನರು ಇಟೆಲಿಯ ಭದ್ರತೆಗೆ ಮತ್ತು ಉದ್ಯೋಗಗಳಿಗೆ ಕುತ್ತು



ಎಂದು ಹೇಳಿ ಅವರನ್ನು ಖಳರನ್ನಾಗಿ ಬಿಂಬಿಸುವಲ್ಲಿ ಅತಿ–ಬಲಪಂಥೀಯರು ಯಶಸ್ವಿಯಾದರು. ಆರ್ಥಿಕ ಬಿಕ್ಕಟ್ಟಿನ ಬಗ್ಗೆ ತಮ್ಮ ಎಂದಿನ ಜನರನ್ನು ಮರಳು ಮಾಡುವ ಜನಪ್ರಿಯ ತಂತ್ರವನ್ನೂ ಅವರು ಬಳಸಿಕೊಂಡರು. ಅತಿ ಹಾಗೂ ಉಗ್ರ ಬಲಪಂಥೀಯ ಶಕ್ತಿಗಳು ಯುರೋಪ್‌ನಾದ್ಯಂತ ತಲೆ ಎತ್ತುತ್ತಿರುವುದು ವಲಸಿಗರ ಭೀತಿ, ಅನ್ಯ–ದ್ವೇಷ ಮತ್ತು ಜನಾಂಗವಾದವನ್ನು ಬಂಡವಾಳ ಮಾಡಿಕೊಳ್ಳುವ ಅದೇ ಮಾದರಿಯನ್ನು ತೋರಿಸುತ್ತದೆ. ನವ–ಉದಾರವಾದಿ ಆಡಳಿತಕ್ಕೆ ಸೋಷಿಯಲ್ ಡೆಮಾಕ್ರಾಟರು ಮತ್ತು ಮಧ್ಯಪಂಥೀಯ ಪಕ್ಷಗಳ ಶರಣಾಗತಿಯಿಂದ ಉಂಟಾದ ಶೂನ್ಯವನ್ನು ಬಳಸಿಕೊಳ್ಳಲು ಕೂಡ ಅವರು ಯಶಸ್ವಿಯಾದರು. ಅವುಗಳ ಶರಣಾಗತಿಯಿಂದಾಗಿ ಬಲಪಂಥೀಯ ಪಕ್ಷಗಳಿಗೆ ಅನ್ಯ–ದ್ವೇಷ ಬಳಸಿಕೊಂಡು ಅತೃಪ್ತಿಯನ್ನು ಕ್ರೋಡೀಕರಿಸಲು ಮೈದಾನ ಮುಕ್ತಾವಾದಂತಾಗಿತ್ತು.

ಇಟೆಲಿ ಚುನಾವಣೆಗಿಂತ ಕೆಲವೇ ದಿನಗಳ ಮೊದಲು ಸ್ವೀಡನ್‌ನಲ್ಲೂ ಬಲಪಂಥೀಯ ಮೈತ್ರಿಕೂಟ ಚುನಾವಣೆಯಲ್ಲಿ ಗೆಲುವು ಸಾಧಿಸಿದೆ. ಅತಿ–ಬಲಪಂಥೀಯ ಪಕ್ಷವಾದ ಸ್ವೀಡನ್ ಡೆಮಾಕ್ರಾಟ್ಸ್ ದೊಡ್ಡ ಗೆಲುವು ಸಾಧಿಸಿದೆ ಹಾಗೂ ಬಲಪಂಥೀಯ ಮೈತ್ರಿ ಸರಕಾರ ರಚನೆಯ ಹಿಂದಿನ ಮುಖ್ಯ ಶಕ್ತಿಯಾಗಿದೆ. ಸ್ವೀಡಿಶ್ ಡೆಮಾಕ್ರಾಟರು ಕೂಡ ತೀವ್ರತರವಾದ ವಲಸೆ–ವಿರೋಧಿ ಮತ್ತು ಅನ್ಯ–ದ್ವೇಷ ಪ್ರಚಾರದ ಮೂಲಕವೇ ಹೆಚ್ಚು ಲಾಭ ಮಾಡಿಕೊಂಡಿದ್ದಾರೆ.

ಇಟೆಲಿಯಲ್ಲಿ, ಎಡಪಕ್ಷಗಳು ಅನೇಕ ವರ್ಷಗಳ ಹಿಂದೆಯೇ ಒಂದು ಪರಿಣಾಮಕಾರಿ ಚುನಾವಣಾ ಶಕ್ತಿಯ ಸ್ಥಾನವನ್ನು ಕಳೆದುಕೊಂಡಿವೆ. 1990ರ ದಶಕದ ಮಧ್ಯ ಭಾಗದಲ್ಲಿ ಯುರೋಪ್‌ನ ಅತ್ಯಂತ ದೊಡ್ಡ ಕಮ್ಯೂನಿಸ್ಟ್ ಪಕ್ಷವನ್ನು (ಇಟೆಲಿ ಕಮ್ಯೂನಿಸ್ಟ್ ಪಕ್ಷ) ವಿಸರ್ಜಿಸಿದ ನಂತರ ಉಗ್ರ ಎಡಪಂಥೀಯ ಶಕ್ತಿಗಳನ್ನು ಒಟ್ಟುಗೂಡಿಸಲು ಹಾಗೂ ಪುನರ್‌ಸಂಘಟಿಸಲು ಪ್ರಯತ್ನಗಳು ನಡೆದಿದ್ದವು. ಒಂದು ಕಾಲದಲ್ಲಿ, ಒಂದು ರಾಜಕೀಯ ಶಕ್ತಿಯಾಗಿ ಹೊರಹೊಮ್ಮುವ ಆಶೆಯನ್ನು ಕಮ್ಯೂನಿಸ್ಟ್ ರೀಫೌಂಡೇಶನ್ ಚಿಗುರಿಸಿತ್ತು. ಆದರೆ ಪಕ್ಷ ವಿಭಜನೆಗೊಂಡ ನಂತರ ಆ ಆಶೆ ಕಮರಿಹೋಯಿತು. ಪ್ರಸಕ್ತ ಚುನಾವಣೆಗಿಂತ ಸ್ವಲ್ಪ ಸಮಯದ ಮುಂಚೆ, ಯೂನಿಯೋನ್ ಪೊಪೊಲೇರ್ ಎಂಬ ಹೆಸರಿನ ಹೊಸ ಎಡ ವೇದಿಕೆಯೊಂದನ್ನು ರಚಿಸಲಾಗಿತ್ತು. ಕಮ್ಯೂನಿಸ್ಟ್ ರೀಫೌಂಡೇಶನ್ ಸಹಿತ ಕೆಲವು ಎಡ ಗುಂಪುಗಳು ಅದರಲ್ಲಿದ್ದವು. ಆದರೆ, ಚುನಾವಣೆಗೆ ಸ್ವಲ್ಪವೇ ಸಮಯವಿದ್ದಿದ್ದರಿಂದ ಅದು ಹೆಚ್ಚು ಪ್ರಭಾವ ಬೀರುವಲ್ಲಿ ಯಶಸ್ವಿಯಾಗಲಿಲ್ಲ. ಸಂಸತ್ತಿನಲ್ಲಿ ಪ್ರಾತಿನಿಧ್ಯ ಗಳಿಸಲು ಅರ್ಹತೆ ನೀಡುವ 4% ಮತ ಗಳಿಸುವಲ್ಲಿಯೂ ಅದು ವಿಫಲವಾಯಿತು. ಚುನಾವಣಾ–ಪೂರ್ವ ಘೋಷಣೆಗಳು ಏನೇ ಇದ್ದರೂ ಅತಿ–ಬಲಪಂಥೀಯ ಸರಕಾರವು ದೊಡ್ಡ ಕೈಗಾರಿಕೋದ್ಯಮಿಗಳ ಏಜೆಂಟ್ ಆಗಿ ವರ್ತಿಸುವುದರಲ್ಲಿ ಸಂದೇಹವೇ ಇಲ್ಲ. ಇದು ಎಡಪಂಥೀಯರು ಪ್ರಬಲವಾಗಿ ಮಧ್ಯಪ್ರವೇಶಿಸುವ ಅನಿವಾರ್ಯತೆಯನ್ನು ಸೃಷ್ಟಿಸಬೇಕು.

ಇಟೆಲಿ ಚುನಾವಣೆ ಫಲಿತಾಂಶದ ಪಾಠಗಳನ್ನು ವಿಶೇಷವಾಗಿ ಯುರೋಪ್‌ನ ಎಡ ಶಕ್ತಿಗಳು ಪರಿಗಣಿಸಬೇಕು. ನವ–ಉದಾರವಾದಿ ಆಡಳಿತದೊಂದಿಗೆ ರಾಜಿ ಅಥವಾ ಹೊಂದಾಣಿಕೆಯ ಪ್ರಶ್ನೆಯೇ ಇಲ್ಲ. ನವ ಉದಾರವಾದಿ ಸರಕಾರಗಳು ದುಡಿಯುವ ಜನರ ಮೇಲೆ ನಡೆಸುವ ದಾಳಿಗಳ ವಿರುದ್ಧ ಹೋರಾಟ ನಡೆಸುವುದರಿಂದ ಮಾತ್ರವೇ ಅತಿ–ಬಲಪಂಥೀಯ ಶಕ್ತಿಗಳು ಒಡ್ಡಿರುವ ಅಪಾಯವನ್ನು ದೂರವಿರಿಸಬಹುದು. ಯಾಕೆಂದರೆ ನವ–ಉದಾರವಾದಿ ಬಂಡವಾಳಶಾಹಿಯ ವಿನಾಶಕಾರಿ ಪ್ರವೃತ್ತಿಯೇ ಅತಿ–ಬಲಪಂಥೀಯ ಶಕ್ತಿಗಳ ಹುಟ್ಟಿಗೆ ಕಾರಣವಾಗುತ್ತದೆ. ಪರ್ಯಾಯ ಎಡ ವೇದಿಕೆಯೊಂದನ್ನು ರಚಿಸುವುದು ತುರ್ತು ಅಗತ್ಯವಾಗಿದೆ. ಅತಿ–ಬಲಪಂಥೀಯ ಸರಕಾರದ ಲಕ್ಷಣ ಮತ್ತು ನವ–ಫ್ಯಾಸಿಸಂನ ಬೆದರಿಕೆಯನ್ನು ನೋಡಿದರೆ, ಹೋರಾಟ ನಿರತ ಜನರ ಐಕ್ಯತೆಯನ್ನು ಕೆಳಗಿನಿಂದ ಕಟ್ಟುವುದು ಅಗತ್ಯವಾಗಿದೆ. ಇಟೆಲಿ ಜನರ ಬಲಿಷ್ಠ ಫ್ಯಾಸಿಸ್ಟ್–ವಿರೋಧಿ ಹೋರಾಟಗಳು ಆ ನಿಟ್ಟಿನಲ್ಲಿ ಒಂದು ಸ್ಫೂರ್ತಿದಾಯಕ ಪರಂಪರೆಯಾಗಿದೆ.

ಅನು: ವಿಶ್ವ

ಸೀಮಿತವಾಗಿ ನೋಡಬಾರದು.

ಶಕ್ತಿಶಾಲಿಯಾದ, ಸಮರಧೀರ ಸಮೂಹ ಚಳುವಳಿಗಳು ಮತ್ತು ವರ್ಗ ಹೋರಾಟಗಳ ಮೂಲಕ ಜನರನ್ನು ಅಣಿನೆರೆಸುವ ಕೆಲಸ ಇದಕ್ಕೆ ಅತ್ಯಗತ್ಯ. ಇಂತಹ ಅಣಿನೆರೆಸುವಿಕೆ ಆರ್‌ಎಸ್‌ಎಸ್‌ನ ಹಿಂದುತ್ವ ಕೋಮುವಾದದ ವಿರುದ್ಧವೂ ಮತ್ತು ನವ–ಉದಾರವಾದಿ ನೀತಿಗಳ ವಿರುದ್ಧವೂ ನಡೆಯಬೇಕು. ಕೋಮುವಾದದ ವಿರುದ್ಧ ಅತ್ಯಂತ ವಿಶಾಲವಾದ ಜಾತ್ಯಾತೀತ ಶಕ್ತಿಗಳ ಒಗ್ಗೂಡುವಿಕೆಯನ್ನು ಸಾಧಿಸಬೇಕು.

ರಾಷ್ಟ್ರೀಯ ಸಂಪತ್ತನ್ನು ನೇರಾನೇರಾ ಲೂಟಿ ಮಾಡುವುದರ ವಿರುದ್ಧ, ಸಾರ್ವಜನಿಕ ಉದ್ದಿಮೆಗಳು, ಸಾರ್ವಜನಿಕ ಸೇವೆಗಳು, ಖನಿಜ ಸಂಪನ್ಮೂಲಗಳು ಮತ್ತು ಮಾನವ ಸಂಪನ್ಮೂಲಗಳ ಬೃಹತ್ ಪ್ರಮಾಣದ ಖಾಸಗೀಕರಣ ಮತ್ತು ಲೂಟಿಯ ವಿರುದ್ಧ ಎಲ್ಲರನ್ನೂ ಅಣಿನೆರೆಸುವ ಕೆಲಸಕ್ಕೆ ಮುಂದಾಗಬೇಕಿದೆ. ದೆಹಲಿ ರೈತರ ಹೋರಾಟದಲ್ಲಿ ಮೂಡಿಬಂದ ಅತ್ಯಂತ ವಿಶಾಲ ತಳಹದಿಯ ಐಕ್ಯತೆಯ ಮಾದರಿಯಲ್ಲಿ ಜನಸಮುದಾಯಗಳ ಅಣಿನೆರೆಸುವಿಕೆ ಅಗತ್ಯವಾಗಿದೆ. ಕೋಮುವಾದಿ ಕಾರ್ಪೋರೇಟ್ ನಂಟನ್ನು ಇಂತಹ ಒಗ್ಗೂಡುವಿಕೆಯಿಂದ ಮಾತ್ರ ಎದುರಿಸಲು ಸಾಧ್ಯ. ಈ ವಿಚಾರದಲ್ಲಿ ಕಾಂಗ್ರೆಸ್‌ನ ನಿಲುವೇನು? ನವ–ಉದಾರವಾದಿ ನೀತಿಗಳ ವಿರುದ್ಧ ಕಾಂಗ್ರೆಸ್ ವಿಶಾಲ ತಳಹದಿಯ ಅಣಿನೆರೆಸುವಿಕೆ ಮಾಡಬಲ್ಲದೇ? ಕಾಂಗ್ರೆಸ್‌ನ ವರ್ಗ ಧೋರಣೆ ಅದಕ್ಕೆ ಅವಕಾಶ ಕೊಡುತ್ತದೆಯೇ? 1990ರ ದಶಕದಲ್ಲಿ ಕಾಂಗ್ರೆಸ್ ಆರಂಭಿಸಿದ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ನೀತಿಗಳನ್ನೇ ಅಲ್ಲವೇ ಇಂದು ಮೋದಿ ಅತ್ಯುಗ್ರವಾಗಿ ಜಾರಿ ಮಾಡುತ್ತಿರುವುದು. ಇದೇ ನೀತಿಗಳೇ ಅಲ್ಲವೇ ಕಾಂಗ್ರೆಸ್‌ನ್ನು ಜನ ನಿರಂತರವಾಗಿ ತಿರಸ್ಕರಿಸುತ್ತಾ ಬರಲು ಕಾರಣವಾಗಿದ್ದು? ಮೋದಿಯ ಈ ನೀತಿಗಳಿಂದಲೇ ಅಲ್ಲವೇ ನಿರುದ್ಯೋಗ, ಬಡತನ, ಅಸಮಾನತೆ ಹೆಚ್ಚುತ್ತಿರುವುದು, ಸಂವಿಧಾನದ ಒಕ್ಕೂಟ ವ್ಯವಸ್ಥೆಯನ್ನು ನಾಶ ಮಾಡುತ್ತಿರುವುದು?

ಕಾಂಗ್ರೆಸ್‌ನ ಜೊತೆ ಹಾಗೇ ಕೈಜೋಡಿಸಿ ಬಂದುಬಿಡಬೇಕು ಎನ್ನುವವರು ಈ ಅಂಶವನ್ನು ಗಣನೆಗೇ ತೆಗೆದುಕೊಳ್ಳದ ಹಾಗೆ ಅಭಿಪ್ರಾಯಗಳನ್ನು ನೀಡುತ್ತಿದ್ದಾರೆ. ಸಿಪಿಐ(ಎಂ) ಈ ವಿಚಾರವನ್ನು ಕಣ್ಣುಮುಚ್ಚಿ ನೋಡಲು ಬಯಸುವುದಿಲ್ಲ. ಹೀಗಾಗಿ ಹಿಂದುತ್ವ ಕಾರ್ಪೋರೇಟ್ ಹೆಜಮನಿ ವಿರುದ್ಧದ ಹೋರಾಟದಲ್ಲಿ ಯಶಸ್ಸು ಸಾಧಿಸಬೇಕಾದರೆ, ಒಟ್ಟೊಟ್ಟಿಗೆ ಹಿಂದುತ್ವ ಕೋಮುವಾದಿ ಶಕ್ತಿಗಳು ಮತ್ತು ನವ–ಉದಾರವಾದಿ ನೀತಿಗಳ ವಿರುದ್ಧದ ಹೋರಾಟದ ಅಗತ್ಯವಿದೆ. ಇದರ ಆಧಾರದಲ್ಲೇ ಕಾಂಗ್ರೆಸ್‌ನ ಭಾರತ್ ಜೋಡೋ ಯಾತ್ರೆಯ ಯಶಸ್ಸು ಮತ್ತು ದೌರ್ಬಲ್ಯ ಎರಡೂ ಅಡಗಿದೆ.

ಈ ರಾಜಕೀಯ ಧೋರಣೆಯನ್ನು ಅನುಸರಿಸಿ ಸಿಪಿಐ(ಎಂ) ಮತ್ತು ಎಡ ಪಕ್ಷಗಳು ತಮ್ಮೆಲ್ಲಾ ಶಕ್ತಿಯನ್ನು ಉಪಯೋಗಿಸಿ ಜನರನ್ನು ಅಣಿನೆರೆಸಲು ಶ್ರಮಿಸುತ್ತವೆ. ಯಾವಾಗೆಲ್ಲಾ ಚುನಾವಣೆಗಳು ನಡೆಯುತ್ತವೆಯೋ ಆಗ ಬಿಜೆಪಿ–ವಿರೋಧಿ ಮತಗಳನ್ನು ಅತ್ಯಂತ ಹೆಚ್ಚಿಗೆ ಒಟ್ಟುಗೂಡಿಸಲು ಬೇಕಾದ ತಂತ್ರಗಾರಿಕೆಗಳನ್ನು ರೂಪಿಸುತ್ತವೆ. ಕಾರ್ಪೋರೇಟ್–ಕೋಮುವಾದದ ಜೋಡಿಯನ್ನು ಸ್ಪಷ್ಟವಾಗಿ ಮತ್ತು ದೃಢವಾಗಿ ಎದುರಿಸಲು ಬಲಿಷ್ಟವಾದ ಸಿಪಿಐ(ಎಂ) ಮತ್ತು ಎಡಪಕ್ಷಗಳ ತಳಹದಿ ಅಗತ್ಯವಿದೆ.

ಇಷ್ಟೆಲ್ಲಾ ಹೇಳಿದ ಮೇಲೂ, ಕಾಂಗ್ರೆಸ್‌ನ ಭಾರತ್ ಜೋಡೊ ಯಾತ್ರೆ ತನ್ನ ಘೋಷಿತ ಉದ್ದೇಶಗಳನ್ನು ಈಡೇರಿಸಿಕೊಳ್ಳುವಲ್ಲಿ ಯಶಸ್ಸು ಕಾಣಲಿ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಚಂದಾ ವಿವರ:
ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ:
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467



ಪಿ.ಎಫ್.ಐ ಮಾಡೆಲ್ ಹೋರಾಟ ಮತ್ತು ಮುಸ್ಲಿಮ್ ಸಮುದಾಯ ಇಡಬೇಕಾದ ಎಚ್ಚರಿಕೆಯ ಹೆಜ್ಜೆಗಳು

ಮುಹಮ್ಮದ್ ನಜೀಬ್

ಕೇಂದ್ರ ಸರ್ಕಾರ ಪಿ.ಎಫ್.ಐ. ಸಂಘಟನೆಯ ಮೇಲೆ ದೇಶಾದ್ಯಂತ ಧಾಳಿಗಳನ್ನು ನಡೆಸಿ ಬಳಿಕ ಅದನ್ನು ಐದು ವರ್ಷಗಳ ಕಾಲ ನಿಷೇಧಿಸಿ ಆದೇಶ ಹೊರಡಿಸಿದೆ. ಕೇಂದ್ರ ಸರ್ಕಾರ ಮತ್ತು ಬಿ.ಜೆ.ಪಿ–ಸಂಘಪರಿವಾರದ ಇತ್ತೀಚಿಗಿನ ಟೀಕೆ, ಹೇಳಿಕೆಗಳು ಇಂತಹ ನಡೆಯ ಪೂರ್ವ ಸಿದ್ಧತೆಯಂತೆ ಕಾಣುತ್ತದೆ. ಇದೇ ಹೊತ್ತಿನಲ್ಲಿ ಪಿ.ಎಫ್.ಐ. ಸಂಘಟನೆಯಂತಹುದೇ ವಿಚಾರಧಾರೆ ಹೊಂದಿರುವ, ಉಗ್ರವಾಗಿ ನಡೆದುಕೊಳ್ಳುತ್ತಿರುವ ಕೋಮುವಾದೀ ಫ್ಯಾಶಿಸ್ಟ್ ಸಂಘಟನೆಗಳ ಮೇಲೂ ಇಂತಹ ಕ್ರಮ ವಹಿಸುತ್ತಿಲ್ಲವೇಕೆ ಎನ್ನುವ ಪ್ರಶ್ನೆಗಳೂ ಕೇಳಿ ಬರುತ್ತಿವೆ. ಅಂತಹ ಕ್ರಮಗಳು ಮತೀಯವಾದಿಗಳ ಕೃತ್ಯಗಳಿಗೆ ಮತ್ತು ಜನತೆಯ ಮೂಲಭೂತ ಪ್ರಶ್ನೆಗಳಿಗೆ ಪರಿಹಾರೊದಗಿಸಬಲ್ಲುದೇ ಎನ್ನುವ ಚರ್ಚೆಗಳೂ ನಡೆದಿವೆ. ಹೀಗಿರುವಾಗ ಕೋಮುವಾದಿಗಳ ಧಾಳಿಗಳು ಪಿ.ಎಫ್.ಐ. ನಂತಹ ಸಂಘಟನೆಗಳ ಬೆಳವಣಿಗೆಗಳಿಗೆ ಅವಕಾಶ ಮಾಡಿಕೊಡುತ್ತಿರುವುದನ್ನು ಗಮನಿಸುತ್ತಲೇ ನಿಜಕ್ಕೂ ಪಿ.ಎಫ್.ಐ. ಪರಿಹಾರವಾಗುವುದೇ ಎನ್ನುವಂತಹ ಗಂಭೀರ ಪ್ರಶ್ನೆಯನ್ನೂ, ಮುಸ್ಲಿಂ ಸಮುದಾಯ ಈ ಸಂದರ್ಭದಲ್ಲಿ ಗಾಢವಾದ ಅವಲೋಕನವನ್ನು ಮಾಡುವ ಜರೂರಿನ ಬಗ್ಗೆ ಲೇಖಕರು ಇಲ್ಲಿ ಚರ್ಚಿಸಿದ್ದಾರೆ.

‘ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ’–ಪಿ.ಎಫ್.ಐ. ಸಂಘಟನೆಯ ವಿರುದ್ಧ ರಾಷ್ಟ್ರೀಯ ತನಿಖಾ ದಳ(ಎನ್ಐಎ) ರಾಷ್ಟ್ರೀಯ ಮಟ್ಟದಲ್ಲಿ 93 ಸ್ಥಳಗಳಲ್ಲಿ ಏಕಕಾಲದಲ್ಲಿ ದಾಳಿ ಸಂಘಟಿಸಿ 106 ಮುಖಂಡರನ್ನು ಬಂಧನ ಮಾಡಿದೆ. ಸಂಘಟನೆಯ ಸ್ಥಾಪಕ ಸದಸ್ಯರು ಹಾಗೂ ಪ್ರಮುಖ ನಾಯಕರನ್ನೇ ಮೊದಲ ಹಂತದ ದಾಳಿಯಲ್ಲಿ ಎನ್ಐಎ ಗುರಿಪಡಿಸಿದೆ. ಸದ್ಯ ಎನ್ಐಎ ಕಾನೂನು ಬಾಹಿರ ಚಟುವಟಿಕೆ ಹಾಗೂ ಭಯೋತ್ಪಾದನೆ ಸಂಚು ಆರೋಪವನ್ನು ಈ ಸಂಘಟನೆಯ ಮೇಲೆ ಹೊರಿಸಿದೆ. ದಾಳಿಯ ಬೆನ್ನಲ್ಲೇ ಪಿಎಫ್ಐ ನಿಷೇಧವನ್ನು ಕೇಂದ್ರ ಸರ್ಕಾರ ಮಾಡಿದಿದೆ. ಆದರೆ ಎನ್ಐಎ ನಡೆಸಿದ ದಾಳಿ ಮತ್ತು ಕೇಂದ್ರ ಸರ್ಕಾರ ಕೈಗೊಂಡ ನಿರ್ಧಾರಗಳ ಪರಿಣಾಮಗಳು ಒಟ್ಟು ಮುಸ್ಲಿಂ ಸಮುದಾಯದ ಮೇಲೆ ಆಗಲಿರುವ ಹಿನ್ನೆಲೆಯಲ್ಲಿ ಪಿಎಫ್ಐ ಮಾದರಿಯ ಹೋರಾಟ ಮತ್ತು ಫ್ಯಾಸಿಸ್ಟ್ ಸ್ವರೂಪದ ಆಡಳಿತದಲ್ಲಿ ಮುಸ್ಲಿಮ್ ಸಮುದಾಯ ಇಡಬೇಕಾದ ಎಚ್ಚರಿಕೆಯ ಹೆಜ್ಜೆಗಳ ಬಗ್ಗೆ ಚರ್ಚೆ ನಡೆಸಬೇಕಾದ ತುರ್ತು ಅಗತ್ಯವಿದೆ.

ಅದಕ್ಕಿಂತ ಮೊದಲು, ಪಿಎಫ್ಐ ಇಂದಿನ ಸ್ಥಿತಿಗೆ ಅವರ ಕೆಲವು ಸ್ವಯಂಕೃತ ಅಪರಾಧಗಳೇ ಬಹುಮುಖ್ಯ ಕಾರಣ ಎಂಬುವುದು ನಾವು ಹಾಗೂ ಅವರ ಆ ಸಂಘಟನೆಯ ನಾಯಕತ್ವ ಅರ್ಥೈಸಿಕೊಳ್ಳಬೇಕಾಗದ ಸಂಗತಿ. ಸಂಘಪರಿವಾರದ ದಬ್ಬಾಳಿಕೆ ದೌರ್ಜನ್ಯವನ್ನು ಎದುರಿಸಲು ಮುಸ್ಲಿಂ ಸಮಾಜವನ್ನು ಪ್ರತಿರೋಧದ ಹೆಸರಿನಲ್ಲಿ ಒಟ್ಟುಗೂಡಿಸುವ ಉದ್ದೇಶದಿಂದ ಸ್ಥಾಪಿತವಾದ ಸಂಘಟನೆ ಪಿಎಫ್ಐ. ಆರಂಭಿಕ ಹಂತದಲ್ಲೇ ಪಿಎಫ್ಐ ತನ್ನ ಸಂಘಟನೆ ಹಾಗೂ ಕಾರ್ಯಕರ್ತರನ್ನು (ಕೇಡರ್) ಸಜ್ಜುಗೊಳಿಸಿದ್ದೇ ಮತೀಯ ಆಧಾರದಲ್ಲಿ. ಕೊಲೆಗೆ ಕೊಲೆ, ಏಟಿಗೆ ಇದಿರೇಟು ಧರ್ಮ, ಮನಿ, ಮಸಲ್ ಹಾಗೂ ಪೊಲಿಟಿಕಲ್ ಪವರ್ ಮೂಲಕ ದೇಶದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ಸಂಘಪರಿವಾರವನ್ನು ಎದುರುಗೊಳ್ಳುವುದು ಪಿಎಫ್ಐ ಕಂಡುಕೊಂಡ ಮಾರ್ಗವಾಗಿದೆ. ಮುಸ್ಲಿಮರ ಮುಂದೆ ಇರುವುದು ಏಕೈಕ ದಾರಿ ಇದೊಂದೇ ಎಂಬುವುದು ಪಿಎಫ್ಐ ನಿಲುವು.

> ಬಹುಸಂಖ್ಯಾತ ಬಲಪಂಥೀಯ ಸಂಘ ಸಿದ್ಧಾಂತವನ್ನು ನಾವು ಎದುರಿಸುವ ಬಗೆ ಪಿಎಫ್ಐ ಮಾದರಿಯ ಮೂಲಕವಲ್ಲ. ಕೋಮುವಾದಕ್ಕೆ ಮತ್ತೊಂದು ಕೋಮುವಾದ ಪರಿಹಾರವಾಗಲಾರದು. ಅಲ್ಪಸಂಖ್ಯಾತ ಮತೀಯವಾದ ಬಹುಸಂಖ್ಯಾತ ಮತೀಯವಾದವನ್ನು ಮತ್ತಷ್ಟು ಬೆಳೆಸುತ್ತದೆ ಎಂಬುವುದನ್ನು ಅರ್ಥೈಸಿಕೊಳ್ಳಬೇಕಾಗಿದೆ. ಬದಲಾಗಿ ಹಿಂದುತ್ವ ಮತೀಯವಾದವನ್ನು ಎದುರಿಸಲು ಈ ದೇಶದ ಜಾತ್ಯಾತೀತ ಶಕ್ತಿಗಳು, ಮಹಿಳೆಯರು, ಪ್ರಜಾಪ್ರಭುತ್ವದಲ್ಲಿ, ಸಾಮರಸ್ಯದಲ್ಲಿ, ಪ್ರಗತಿಯಲ್ಲಿ ಹಾಗೂ ಬಹುತ್ವದಲ್ಲಿ ನಂಬಿಕೆ ಇಟ್ಟುಕೊಂಡಿರುವ ಎಲ್ಲ ಜನ ಸಮೂಹ ಒಂದಾಗಬೇಕಾಗಿದೆ.

ಈ ಮಾರ್ಗ ಸಾಧನೆಗೆ ದೇಶದ ಹಲವು ಕಡೆಗಳಲ್ಲಿ ಪ್ರತಿರೋಧದ ಹೆಸರಿನಲ್ಲಿ ನಡೆಸಿದ ಹತ್ಯೆಗಳು ಒಂದು ಕಡೆಯಾದರೆ, ಪ್ರವಾದಿ ಪೈಗಂಬರರಿಗೆ ಅವಮಾನ ಮಾಡಿದ್ದಾರೆ ಎಂಬ ಆರೋಪ ಹೊರಿಸಿ ಕೇರಳದಲ್ಲಿ ಅಧ್ಯಾಪಕರೊಬ್ಬರ ಕೈಕಡಿದು ಅದನ್ನು ಸಮರ್ಥನೆ ಮಾಡಿಕೊಂಡ ರೀತಿ ಪಿಎಫ್ಐ ಮತೀಯ ಮನಸ್ಥಿತಿಗೆ ಹಿಡಿದ ಕೈಗನ್ನಡಿ. ಇತ್ತೀಚೆಗೆ ಉಡುಪಿಯ ಒಂದು ಕಾಲೇಜಿನಲ್ಲಿ ನಡೆದ ಹಿಜಾಬ್ ವಿಚಾರವನ್ನು ಸ್ಥಳೀಯವಾಗಿ ಬಗೆಹರಿಸಲು ಇದ್ದ ಎಲ್ಲಾ ಸಾಧ್ಯತೆಗಳನ್ನು ಮೀರಿ ರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದು ನಿಭಾಯಿಸಿದ ವಿಧಾನ ಹಾಗೂ ಅದರಿಂದ ಮುಸ್ಲಿಂ ಸಮಾಜದ ಮೇಲಾದ ಪರಿಣಾಮಗಳು ಪಿಎಫ್ಐ ಮಾಡೆಲ್ ಒಂದು ಶೋಷಿತ ಸಮುದಾಯಕ್ಕೆ ಯಾವ ರೀತಿ ಹಾನಿ ಉಂಟು ಮಾಡಬಲ್ಲದು ಎಂಬುವುದಕ್ಕೆ ಮತ್ತೊಂದು ಉದಾಹರಣೆ.

ಇತ್ತೀಚೆಗೆ ಬೆಳ್ಳಾರೆಯಲ್ಲಿ ನಡೆದ ಮಸೂದ್ ಕೊಲೆ ಪ್ರಕರಣದಲ್ಲಿ 80 ಶೇಕಡಾ ಬೀದಿ ಜಗಳ, ವ್ಯಕ್ತಿಗತ ದ್ವೇಷದ ಆಯಾಮದಲ್ಲಿ ನಡೆದಿದ್ದರೂ ಅದಕ್ಕೆ ಪ್ರತಿಯಾಗಿ ಬಿಜೆಪಿ ಹಾಗೂ ಸಂಘದ ಪ್ರಮುಖ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣ ರಾಜ್ಯದಲ್ಲಿ ಮಂಕು ಕವಿದು ಕುಳಿತಿದ್ದ ಬಿಜೆಪಿಗೆ ಮುಸ್ಲಿಮರ ವಿರುದ್ಧ ದ್ವೇಷ ಕಾರಲು ಹಾಗೂ ರಾಜಕೀಯ ಲಾಭ ಪಡೆದುಕೊಳ್ಳಲು ಸಿಕ್ಕ ಅವಕಾಶವಾದದ್ದು ಪಿಎಫ್ಐ ಅಪಾಯಕಾರಿ ನಡೆಗೆ ಮಗದೊಂದು ಉದಾಹರಣೆ. ಇದರ ಪರಿಣಾಮ ಫಾಝಿಲ್ ಎಂಬ ಅಮಾಯಕ ಜೀವವನ್ನು ಕಳೆದುಕೊಂಡರೂ ಆ ಸಾವಿಗೆ ನ್ಯಾಯ ಸಿಗದಂತಾಯಿತು.

ಇಂತಹ ಮತೀಯತೆಯಿಂದ ಕೂಡಿದ ಅಪಕ್ವ ನಡೆಗಳ ಜೊತೆಗೆ ಅತಿರೇಕದ ನಿಲುವು, ಹುತಾತ್ಮತೆ, ಸದಾ ಸಂಘರ್ಷದ ಹಾಗೂ ರಾಡಿಕಲ್ ಮಾದರಿಯ ಹೋರಾಟವನ್ನು ಮುಸ್ಲಿಮ್ ಯುವ ಸಮಾಜಕ್ಕೆ ಪರಿಚಯಿಸಿ ಅದೇ ಅಂತಿಮ ದಾರಿ ಎಂದು ಬಿಂಬಿಸುವ ಪ್ರಯತ್ನವನ್ನು ಪಿಎಫ್ಐ ನಡೆಸಿದೆ. ಇದನ್ನು ವಿಮರ್ಶೆ ಮಾಡಿದ ಸಮುದಾಯದ ಜನರನ್ನೇ ಧರ್ಮ ವಿರೋಧಿಗಳಾಗಿ, ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್ಎಸ್ಎಸ್) ಏಜೆಂಟರೆಂದು ಐಟಿ ಸೆಲ್‌ಗಳ ಮೂಲಕ ದಾಳಿಗಳನ್ನು ನಡೆಸಿ ಬಾಯಿ ಮುಚ್ಚಿಸುವ ಪ್ರಯತ್ನವನ್ನು ನಡೆಸಿದೆ. ಇದರ ಮೂಲಕ ಮುಸ್ಲಿಂ ಸಮುದಾಯವನ್ನು ಸದಾ ಭಯ, ಆತಂಕದಲ್ಲಿ ಇಡುವ ಮೂಲಕ ತಮ್ಮ ರಾಜಕೀಯ ನೆಲೆಯನ್ನು ಭದ್ರಪಡಿಸುತ್ತಿರುವ ಫ್ಯಾಸಿಸ್ಟ್ ಶಕ್ತಿಗಳಿಗೆ ಮತ್ತಷ್ಟು ಅವಕಾಶವನ್ನು ಕಲ್ಪಿಸಿಕೊಟ್ಟಂತಾಗಿದೆ. ಜೊತೆಗೆ ತಮ್ಮ ರಾಜಕೀಯ ಶಕ್ತಿಯನ್ನು ಪಿಎಫ್ಐ ವೃದ್ದಿಸಿಕೊಳ್ಳುತ್ತಿದೆ.

ದೇಶದಲ್ಲಿ ಆರ್ಎಸ್ಎಸ್ ಭಜರಂಗದಳದಂತಹ ಮತೀಯ ಶಕ್ತಿಗಳು ನಡೆಸಿದ ಕೃತ್ಯಗಳಿಗೆ ಆಗದ ಕ್ರಮಗಳು ಪಿಎಫ್ಐ ವಿರುದ್ಧ ಏಕೆ ಎಂಬ ಸಹಜ ಪ್ರಶ್ನೆಗಳು ಉದ್ಭವವಾಗುತ್ತವೆ. ಖಂಡಿತಾ ಎನ್.ಐ.ಎ. ದಾಳಿಯ ಹಿಂದಿರುವ ಸೂತ್ರದಾರಿಗಳು ಯಾರು ಹಾಗೂ ಅವರ ಉದ್ದೇಶ ಏನು ಎಂಬುವುದು ಬಹಿರಂಗ ಸತ್ಯ. ದೇಶದಲ್ಲಿ ಆಡಳಿತದ ಬಹುತೇಕ ಪೂರ್ಣ ಪ್ರಮಾಣದ ಚುಕ್ಕಾಣಿ ಹಿಡಿದಿರುವ ಸಂಘಪರಿವಾರ ಹಾಗೂ ಸರ್ವಾಧಿಕಾರದತ್ತ ತೆರಳುತ್ತಿರುವ ಆಡಳಿತ ತನ್ನ ವಿರುದ್ಧ ನಿಂತ ಯಾರನ್ನು ಸುಮ್ಮನೆ ಬಿಟ್ಟಿಲ್ಲ. ತನಿಖಾ ಸಂಸ್ಥೆಗಳ ದುರ್ಬಳಕೆ ಮಾಡುವ ಮೂಲಕ ನಡೆಸುತ್ತಿರುವ ದಾಳಿಗಳು ಹಾಗೂ ದೇಶದ ಸಂವಿಧಾನವನ್ನೇ ಬುಡಮೇಲು ಮಾಡುವಂತಹ ಪ್ರಯತ್ನಗಳು ಬಹಿರಂಗವಾಗಿಯೇ ನಡೆಯುತ್ತಿರುವ ಈ ಸಂದರ್ಭದಲ್ಲಿ ಫ್ಯಾಸಿಸ್ಟ್ ಸರ್ಕಾರದಿಂದ ತಾರತಮ್ಯವಿಲ್ಲದ ಸಮಾನ ನ್ಯಾಯದ ನಿರೀಕ್ಷೆ ಮಾಡುವುದೇ ದಡ್ಡತನವಾಗಿದೆ. ಈ ಕಾರಣಕ್ಕಾಗಿಯೇ ಮುಸ್ಲಿಮ್ ಸಮುದಾಯ ಎಚ್ಚರಿಕೆಯ ಹಾಗೂ ಬುದ್ಧಿವಂತಿಕೆಯ ಹೆಜ್ಜೆಯನ್ನು ಇಡಬೇಕಾಗಿದೆ.

ಹಾಗಾದರೆ ಪರಿಹಾರ ಏನು?

ಆರ್ಎಸ್ಎಸ್ ಹಾಗೂ ಪರಿವಾರಕ್ಕೆ ಕೇವಲ ಮುಸ್ಲಿಮರು ಶತ್ರುಗಳಲ್ಲ. ಈ ದೇಶದ ಬಹುತ್ವವೇ ಅದಕ್ಕೆ ಶತ್ರುವಾಗಿದೆ. ಬಹುತ್ವ ದೇಶವನ್ನು ನಾಶಪಡಿಸಿ ಹಿಂದುತ್ವದ ರಾಷ್ಟ್ರ ಕಟ್ಟುವುದು ಅದರ ಗುರಿಯಾಗಿದೆ. ಸದ್ಯಕ್ಕೆ ಬಲಿಪೀಠದಲ್ಲಿರುವವರು ಮುಸ್ಲಿಮರಷ್ಟೇ. ಸಂಘದ ಸಿದ್ಧಾಂತ ದೇಶದ ಪ್ರಗತಿಗೆ ಅಭಿವೃದ್ದಿಗೆ ಯಾವತ್ತೂ ಹಾನಿಕಾರಿ.

ಇಂದು ಮುಸ್ಲಿಂ ಮಹಿಳೆಯರ ಹಿಜಾಬ್ ನಿಷೇಧಿಸುವ ಸಂಘ ನಿರ್ದೇಶಿತ ಸರ್ಕಾರ ನಾಳೆ ಹಿಂದೂ ಯುವತಿಯರು ತೊಡುವ ಜೀನ್ಸ್ ಪ್ಯಾಂಟ್, ಟಿ–ಶರ್ಟ್‌ನ್ನು ಭಾರತೀಯ ಸಂಸ್ಕೃತಿ ಕಾಪಾಡುವ ಹೆಸರಿನಲ್ಲಿ ನಿಷೇಧ ಮಾಡಲೂಬಹುದು.



ಈ ನಿಟ್ಟಿನಲ್ಲಿ ಬಹುಸಂಖ್ಯಾತ ಬಲಪಂಥೀಯ ಸಂಘ ಸಿದ್ಧಾಂತವನ್ನು ನಾವು ಎದುರಿಸುವ ಬಗೆ ಪಿಎಫ್ಐ ಮಾದರಿಯ ಮೂಲಕವಲ್ಲ. ಕೋಮುವಾದಕ್ಕೆ ಮತ್ತೊಂದು ಕೋಮುವಾದ ಪರಿಹಾರವಾಗಲಾರದು. ಅಲ್ಪಸಂಖ್ಯಾತ ಮತೀಯವಾದ ಬಹುಸಂಖ್ಯಾತ ಮತೀಯವಾದವನ್ನು ಮತ್ತಷ್ಟು ಬೆಳೆಸುತ್ತದೆ ಎಂಬುವುದನ್ನು ಅರ್ಥೈಸಿಕೊಳ್ಳಬೇಕಾಗಿದೆ. ಬದಲಾಗಿ ಹಿಂದುತ್ವ ಮತೀಯವಾದವನ್ನು ಎದುರಿಸಲು ಈ ದೇಶದ ಜಾತ್ಯಾತೀತ ಶಕ್ತಿಗಳು, ಮಹಿಳೆಯರು, ಪ್ರಜಾಪ್ರಭುತ್ವದಲ್ಲಿ, ಸಾಮರಸ್ಯದಲ್ಲಿ, ಪ್ರಗತಿಯಲ್ಲಿ ಹಾಗೂ ಬಹುತ್ವದಲ್ಲಿ ನಂಬಿಕೆ ಇಟ್ಟುಕೊಂಡಿರುವ ಎಲ್ಲ ಜನ ಸಮೂಹ ಒಂದಾಗಬೇಕಾಗಿದೆ.

ರಾಜಕೀಯವಾಗಿ ಕಾಂಗ್ರೆಸ್ ಒಳಗೊಂಡು ಜಾತ್ಯಾತೀತ ಸಿದ್ಧಾಂತದಲ್ಲಿ ನಂಬಿಕೆ ಇಟ್ಟುಕೊಂಡಿರುವ ಎಡ, ಪ್ರಾದೇಶಿಕ ಪಕ್ಷಗಳು ಬಲಗೊಳ್ಳಬೇಕಿದೆ. ತಮ್ಮ ಕಾರ್ಯಕರ್ತರನ್ನು ಸೈದ್ಧಾಂತಿಕವಾಗಿ ಗಟ್ಟಿಗೊಳಿಸಬೇಕಾದ ಜವಾಬ್ದಾರಿಯೂ ಈ ಪಕ್ಷಗಳಿಗಿವೆ. ಇದರ ಜೊತೆಗೆ ಮುಸ್ಲಿಮ್ ಹಾಗೂ ಅಲ್ಪಸಂಖ್ಯಾತ ಸಮುದಾಯಕ್ಕೆ ತಮ್ಮ ಪಕ್ಷದಲ್ಲಿ ಸೂಕ್ತ ಪ್ರಾತಿನಿಧ್ಯ ನೀಡುವ ಮೂಲಕ ಅವರ ಸಾಮಾಜಿಕ ಶ್ರೇಯಾಭಿವೃದ್ಧಿಗೆ ಕಾರ್ಯಕ್ರಮಗಳನ್ನು ರೂಪಿಸಬೇಕಿದೆ.

ಇದರ ಜೊತೆಗೆ ಆಯಾ ಸಮಾಜದ ತಮ್ಮ ಸಮಾಜದ ಮತೀಯವಾದಿಗಳ

ಪುಟ 10 ಕ್ಕೆ

ದಸರಾ ಜನರ ಹಬ್ಬವಾಗಿ

ಮೈಸೂರು ದಸರಾ ಎಷ್ಟೊಂದು ಸುಂದರ, ಚೆಲ್ಲಿದೆ ನಗೆಯಾ ಪನ್ನೀರಾ



ಸಾಮಾನ್ಯ ಜನಕ್ಕೆ ದಸರಾ ಎಂದರೆ ಮಾನ್ರ್ೋಮಿ, ಆಯುಧ ಪೂಜೆ, ಬನ್ನಿ ಪತ್ರಿ ಹಂಚಿ ಬಂಗಾರವಾಗಿರೋಣ ಎಂಬ ಕೂಡು ಜೀವನದ ಒಗ್ಗಟ್ಟಿನ ಆದರ್ಶ.

ಜಿ.ಎನ್. ನಾಗರಾಜ್

ದಸರಾ ಎಂದ ಕೂಡಲೇ ವೈಭವದ ಮೈಸೂರು ರಾಜರ ದಸರಾ ನೆನಪಿಗೆ ಬರುತ್ತದೆ. ಏಕೆಂದರೆ ಪತ್ರ್ಯ ಪುಸ್ತಕ, ಪತ್ರಿಕೆ, ಮಾಧ್ಯಮಗಳಲ್ಲಿ, ಸಿನಿಮಾ, ಟಿವಿ ಧಾರಾವಾಹಿಗಳಲ್ಲಿ ಅದರದೇ ಸುದ್ದಿ, ಅದರದೇ ಅಬ್ಬರ. ಈಗ ರಾಜರಿಲ್ಲದಿದ್ದರೂ ರಾಜ ವೈಭವವನ್ನು ಕಣ್ಣು ಕುಕ್ಕುವಂತೆ ಮಾಡಿ ಜನರು ಬೆರಗಾಗಿ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡುವುದೇ ಇಂದಿನ ದರ್ಬಾರಿಗಳ ಉದ್ದೇಶವೂ ಕೂಡಾ. ಅದಕ್ಕಾಗಿ ನೂರಾರು ಕೋಟಿ ಪ್ರತಿ ವರ್ಷ ವ್ಯಯ. ಅದರಲ್ಲಿ ಎಷ್ಟೆಷ್ಟು ಯಾರ್ಯಾರಾ ಜೇಬಿಗೋ ಗೊತ್ತಿಲ್ಲ.

ಆದರೆ ಜನರ ದಸರಾ ಬಗ್ಗೆ ಇವರ್‍ಯಾರ ಗಮನವೂ ಬಹಳ ಕಡಿಮೆ.

ಸಾಮಾನ್ಯ ಜನಕ್ಕೆ ದಸರಾ ಎಂದರೆ ಮಾನ್ರ್ೋಮಿ, ಆಯುಧ ಪೂಜೆ, ಬನ್ನಿ ಹಂಚಿ ಬಂಗಾರವಾಗಿರೋಣ ಎಂಬ ಕೂಡು ಜೀವನದ ಒಗ್ಗಟ್ಟಿನ ಆದರ್ಶ. ದಸರಾಕ್ಕೆ ನೇರ ಸಂಬಂಧವಿಲ್ಲದಿದ್ದರೂ ಪಕ್ಷ ಎಂದು ಕರೆಯುವ ಹಿರೇರ ಹಬ್ಬದೊಂದಿಗೆ ದಸರಾದ ನಾಂದಿ ಸಾಮಾನ್ಯ ಜನಕ್ಕೆ.

ಈ ಹಿರೇರ ಹಬ್ಬದಲ್ಲಿ ತಲೆ ತಲಾಂತರದಿಂದ ಗತಿಸಿರುವ ಹಿರಿಯರನ್ನು ಅವರ ಬಳಗವೆಲ್ಲ ಒಂದೆಡೆ ಸೇರಿ ನೆನಪು ಮಾಡಿಕೊಳ್ಳುವುದು, ಅವರಿಗೆ ಹೊಸ ಬಟ್ಟೆ ತರುವುದು, ಅವರಿಗೆ ಏನೆಲ್ಲ ಇಷ್ಟದ ಊಟ, ತಿಂಡಿ, ಮದ್ಯ, ತಂಬಾಕಿನ ಸೇವನೆ ಮಾಡುತ್ತಿದ್ದವರಿಗೆ ಅವುಗಳೂ ಸೇರಿದಂತೆ ಎಡೆ ಇಡುವುದು, ಅವರು ಬಂದು ಇವುಗಳನ್ನು ಸೇವಿಸಿದರೆಂದು ಭಾವಿಸುವುದು ಜನರು ಆಚರಿಸುವ ಪಕ್ಷದ ವಿಧಾನ. ನಂತರ ಅವರಿಗೆಂದು ತಂದ ಹೊಸ ಬಟ್ಟೆಗಳನ್ನು ಅವರ ಆಶೀರ್ವಾದವೆಂದು ಪರಿಗಣಿಸಿ ತಾವೇ ಉಡುವುದು, ಅವರಿಗೆಂದು ಇಟ್ಟ ಎಡೆಯನ್ನೂ ಕಾಗೆಗೋ, ಹಸುವಿಗೋ ಒಂದಷ್ಟು ಇಟ್ಟು ಉಳಿದುದನ್ನು ತಾವೇ ಊಟ ಮಾಡುವುದು ಅದರ ಭಾಗ. ಹಾಸನ, ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಒಂದೊಂದು ಊರು ತಮಗೆ ಅನುಕೂಲವೆಂಬ ದಿನ ಇದನ್ನು ಆಚರಿಸುತ್ತಾರೆ. ಸರಿಸುಮಾರು ಒಂದು ತಿಂಗಳು ಇಡೀ ಪ್ರದೇಶವನ್ನು ಬಾಡೂಟದ ಘಮ ಘಮ ಆವರಿಸಿರುತ್ತದೆ. ಪ್ರತಿಯೊಬ್ಬರೂ ಹಲವಾರು ಪಕ್ಷದ ಆಚರಣೆಗಳಲ್ಲಿ ಭಾಗವಹಿಸಿ ಹೊಟ್ಟೆ ಬಿರಿಯ ಬಾಡೂಟ ಮಾಡಿ ತೇಗುತ್ತಾರೆ. ವೈದಿಕ ಕಟ್ಟಲೆಗಳಿಂದಾಗಿ ಹಬ್ಬಗಳಲ್ಲಿ ಬಾಡೂಟಕ್ಕೆ ಅವಕಾಶವನ್ನೇ ಇಲ್ಲವಾಗಿಸಿ ಬಿಟ್ಟಿದ್ದಾರೆ ನೋಡಿ. ಅದರಿಂದ ಪಕ್ಷ ಬಹಳ ಜರ್ಬಿನಿಂದ ಆಚರಿಸುತ್ತಾರೆ.

ಆಯುಧ ಪೂಜೆ:

ಇದು ಮುಗಿದ ನಂತರ ಮಾನ್ರ್ೋಮಿಯ ಆಯುಧ ಪೂಜೆ. ಬದುಕಿನ ನಿರ್ವಹಣೆಗಾಗಿ ಕೈಗೊಂಡ ವಿವಿಧ ವೃತ್ತಿಗಳ ಮುಖ್ಯ ಸಾಧನಗಳನ್ನು ತೊಳೆದು ಸ್ವಚ್ಛ ಮಾಡಿ ಪೂಜಿಸುವುದು. ನೇಗಿಲು, ರಂಟೆ ಕುಂಟೆ, ಕುಡುಗೋಲು, ಮಚ್ಚು, ಸನಿಕೆ, ಪಿಕಾಸಿ ಮೊದಲಾದ ಕೃಷಿ ಸಲಕರಣೆಗಳು ರೈತರ ಪೂಜೆಯ ವಸ್ತುಗಳಾದರೆ ಬಡಗಿ, ಕಮ್ಮಾರ, ಕುಂಬಾರ, ಚಮ್ಮಾರ ಮೊದಲಾದ ಕುಶಲ ಕರ್ಮಿಗಳು ತಮ್ಮ ಸಲಕರಣೆಗಳನ್ನು ಪೂಜೆ ಮಾಡುತ್ತಾರೆ.

ಇದೇ ಪದ್ಧತಿ ಬೆಳೆದು ಕೈಗಾರಿಕೆಗಳ ಯಂತ್ರಗಳು, ಸಂಚಾರದ ವಾಹನಗಳು, ಈಗಿನ ಕಂಪ್ಯೂಟರ್ ಇತ್ಯಾದಿಗಳೂ ಪೂಜಿಸಲ್ಪಡುತ್ತವೆ. ಇವುಗಳಿಗೆ ಕೋಳಿ ಇತ್ಯಾದಿ ಬಲಿ ನೀಡಿ ಅವುಗಳ ರಕ್ತವನ್ನು ಈ ಸಾಧನಗಳಿಗೆ ಹಚ್ಚಿ ಮುಂದೆ ಕೆಲಸ ಮಾಡುವಾಗ ಅವು ತಮಗೆ ಅಪಾಯ ಉಂಟು ಮಾಡಿ ರಕ್ತ ಹರಿಸದಿರಲಿ ಎಂದು ಪ್ರಾರ್ಥಿಸುತ್ತಾರೆ.

ಇದು ಜನ ಸಾಮಾನ್ಯರ ಆಯುಧ ಪೂಜೆಯಾದರೆ ವೈದಿಕ ಪದ್ಧತಿಯಲ್ಲಿ ತಮ್ಮ ಆಯುಧಗಳಾದ ಲೇಖನಿ, ಪುಸ್ತಕಗಳನ್ನು ಪೂಜೆ ಮಾಡುತ್ತಾರೆ. ಇದನ್ನು ಸರಸ್ವತಿ ಪೂಜೆ ಎಂದು ಕರೆದುಕೊಂಡರೂ ಆಯುಧ ಪೂಜೆಯ ಅನುಕರಣೆಯೇ ಆಗಿದೆ. ಅವರೂ ಕೂಡಾ ತಮ್ಮ ವಾಹನಗಳನ್ನು, ಇತರ ಸಾಧನಗಳನ್ನು ಪೂಜೆ ಮಾಡುವುದು ರೂಢಿ. ಆದರೆ ಪ್ರಾಣಿ ಬಲಿ, ರಕ್ತ ಕಾಣಿಕೆ ನೀಡಲಾರರು, ನೀಡದೆ ಇರಲಾರರು.



ಉತ್ತರ ಕರ್ನಾಟಕದಲ್ಲಿ ಬನ್ನಿ ಮುಡಿಯುವ ವಿಶಿಷ್ಟ ಬಗೆ

ಅದಕ್ಕಾಗಿ ತಮ್ಮದೇ ತಂತ್ರಗಳನ್ನು ರೂಪಿಸಿಕೊಂಡು ಆಯುಧ ದೇವಿ, ದೇವರುಗಳ ಕಣ್ಣಿಗೆ ಮಣ್ಣೆರಚುವ ಪ್ರಯತ್ನ ಮಾಡುತ್ತಾ ಬಂದಿದ್ದಾರೆ. ಪ್ರಾಣಿಯ ರುಂಡಕ್ಕೆ ಬದಲಾಗಿ ಅದೇ ಆಕಾರವನ್ನು ನೆನಪಿಸುವ ಕೂಷ್ಮಾಂಡ (ಬೂದುಗುಂಬಳ) ದಲ್ಲಿ ಒಂದು ತೂತು ಮಾಡಿ ರಕ್ತದಂತೆ ಕಾಣಲು ಕುಂಕುಮ ಒಳಗೆ ಹಾಕಿ ಎತ್ತಿ ಹಾಕಿ ಒಡೆಯುತ್ತಾರೆ.

ಜೊತೆಗೆ ರಕ್ತವನ್ನು ನೆನಪಿಸುವಂತೆ ಸುಣ್ಣದ ನೀರಿನಲ್ಲಿ ಅರಿಷಿಣ ಕಲಸಿ ರಕ್ತದ ಬಣ್ಣ ಬರುವಂತೆ ಮಾಡಿದ ನೀರನ್ನು ವಾಹನಗಳ ಮುಂದೆ ಚೆಲ್ಲುತ್ತಾರೆ.

ಸಾಮಾನ್ಯ ಜನರು ತಾವು ಬಲಿ ನೀಡಿದ ಪ್ರಾಣಿಗಳನ್ನು ಆಹಾರವಾಗಿ ಬಳಸಿದರೆ ವೈದಿಕ ಪದ್ಧತಿ ಅನುಸರಿಸುವವರು ಬೇರೆ ಸಮಯದಲ್ಲಿ ಬೂದುಗುಂಬಳಕಾಯಿಯ ಅಡುಗೆಗಳನ್ನು ಮಾಡಿಕೊಂಡು ಲೊಟ್ಟೆ ಹೊಡೆಯುತ್ತಾ ತಿನ್ನುತ್ತಾರೆ. ಆದರೆ ಆಯುಧ ಪೂಜೆಗೆ ಬಳಸಿದ ಈ ಕಾಯಿಗಳನ್ನು ತಿನ್ನಲಾರರು ಏಕೆಂದರೆ ಅವು ಪ್ರಾಣಿ ಬಲಿಯನ್ನು ನೆನಪಿಸುತ್ತವೆ. ಆದ್ದರಿಂದ ಆಯುಧ ಪೂಜೆಯ ದಿನ ವೈದಿಕ ಪದ್ಧತಿ ಅನುಸರಿಸುವವರು ಹೆಚ್ಚಾಗಿರುವ ನಗರ, ಪಟ್ಟಣಗಳಲ್ಲಿ ಬೂದುಗುಂಬಳಕಾಯಿಗಳು ಎಲ್ಲೆಂದರಲ್ಲಿ ಇಟ್ಟಾಡುತ್ತಿರುತ್ತವೆ. ಕೊಳೆತು ದುರ್ವಾಸನೆ ಬರುತ್ತವೆ. ಟನ್‌ಗಟ್ಟಲೆ ಕಸವಾಗಿ ನಗರ ಸಭೆಗಳಿಗೆ ತಲೆ ಬೇನೆಯಾಗುತ್ತವೆ.

ನಾವು ನೀವು ಬಂಗಾರದ್ಹಾಂಗ ಇರೋಣ:

ಬನ್ನಿ ಮುಡಿಯೋಣು ಬಾರಾ ಕೋಲು ಕೋಲಾ
ಚಿನ್ನ ತರುವೋಣ ಬಾರಾ ಕೋಲು ಕೋಲಾ
ಊರ ಸೀಮೆಯ ದಾಟಿ ಕಾಡ ಗಡಿಯನು ಕಾಡ
ಸಂಪತ್ತು ತರಬನ್ನಿ.

ವಿಜಯ ದಶಮಿ ಎಂದು ಪ್ರಭುಗಳು ಮೆರೆಯುವ ಹಬ್ಬ ಜನಪದರಲ್ಲಿ ಬನ್ನಿ ಹಬ್ಬ. ಬನ್ನಿ ಎಲೆಗಳನ್ನು ಬನ್ನಿ ಎಲೆ ಎನ್ನುವುದಿಲ್ಲ, ಬಂಗಾರವೆಂದು ಕರೆಯುತ್ತಾರೆ.

"ಬಂಗಾರ ಕೊಟ್ಟು ಬಂಗಾರ ತಕ್ಕೊಂಡು ಬಂಗಾರದ್ಹಾಂಗ ಇರೋಣ"

ಇದು ಬನ್ನಿ ಮುಡಿಯುವ ಹಬ್ಬದಲ್ಲಿ ತುಂಗಭದ್ರೆಯ ಆಚೆಗಿನ ಜಿಲ್ಲೆಗಳಲ್ಲಿ ಬೆಳಗ್ಗಿನಿಂದ ಸಂಜೆಯವರೆಗೂ ಕೇಳುವ ನುಡಿ. ತಮಗಿಂತ ಹಿರಿಯರಿಗೆ ಈ ಬಂಗಾರ ಕೊಟ್ಟು ಅವರ ಕಾಲಿಗೆ ನಮಸ್ಕಾರ ಮಾಡಿ ಬಂಗಾರದ ರೂಪದ ಆಶೀರ್ವಾದ ಪಡೆಯುವ ಕಿರಿಯರು, ಪುಟ 10 ಕ್ಕೆ

ಆಯುಧಗಳೆಂದರೆ ಮಾನವರ ಶ್ರಮ ಮತ್ತು ಬುದ್ಧಿ ಶಕ್ತಿ ಶೇಖರಗೊಂಡ ಒಂದು ಖಜಾನೆ

ಆಯುಧ ಪೂಜೆ ಎಂದರೆ ಮಾನವ ಶ್ರಮ, ಕೌಶಲ್ಯ, ಅರಿವಿಗೆ ಸಂದ ಗೌರವ. ಆಯುಧಗಳನ್ನು ತಯಾರಿಸಲು ಕಲಿತ ವಾನರ ಪ್ರಾಣಿಗಳೇ ಮನುಷ್ಯರು. ಮಾನವರು ತಮ್ಮ ಹಸಿವನ್ನು ನಿವಾರಿಸಿಕೊಳ್ಳಲು ಕಂಡುಕೊಂಡ ಆಯುಧಗಳನ್ನು ತಯಾರಿಸುವ, ಉಪಯೋಗಿಸುವ ಹಾದಿಯಲ್ಲಿಯೇ ತಮ್ಮ ಮೆದುಳಿನ ಬೆಳವಣಿಗೆ, ಭಾಷೆಯ ಬೆಳವಣಿಗೆಗಳನ್ನು ಸಾಧಿಸಿಕೊಂಡರು. ಮಾನವರಾದರು. ಮರಗಳ ಹಣ್ಣನ್ನು ಉದುರಿಸಲು ಕೋಲನ್ನು ಬಳಸಿದ್ದೇ ಮೊದಲ ಆಯುಧ. ನಂತರ ಕಲ್ಲುಗಳಿಂದ ಆಯುಧಗಳನ್ನು ತಯಾರಿಸಲು ಕಲಿತರು. ಆಯುಧಗಳನ್ನು ತಯಾರು ಮಾಡುವಾಗ ಅವರ ಕೈ, ಕೈ ಬೆರಳುಗಳು, ಮುಂಗೈ ಮಣಿಕಟ್ಟು ಗೊರಿಲ್ಲಾ, ಚಿಂಪಾಂಜಿಗಳಿಗೆ ಹೋಲಿಸಿದರೆ ಬಹಳ ಸೂಕ್ಷ್ಮವಾಗಿ ರೂಪುಗೊಂಡಿತು. ಆಯುಧಗಳನ್ನು ಬಳಸುವಾಗ ಅವರ ದೇಹ ಮತ್ತಷ್ಟು ಸೂಕ್ಷ್ಮ ಬೆಳವಣಿಗೆ ಸಾಧಿಸಿತು.

ಈ ತಯಾರಿಕೆಯ ಪ್ರಕ್ರಿಯೆಯಲ್ಲಿ ಎಂತಹಾ ಕಲ್ಲುಗಳನ್ನು ಆರಿಸಿಕೊಳ್ಳಬೇಕು, ಅದರಲ್ಲಿ ಯಾವ ಆಯುಧವನ್ನು ಹೇಗೆ ತಯಾರಿಸಬೇಕೆಂಬ ಯೋಜನೆ ಮಾನವರ ಮೆದುಳಿನಲ್ಲಿ ಮೊದಲೇ ತಯಾರಾಗದೆ ಆಯುಧ ತಯಾರಿಕೆ ಸಾಗುವುದಿಲ್ಲ. ಇದೇ ಮೆದುಳಿನ ಬೆಳವಣಿಗೆಗೆ ಹಾದಿ ತೆರೆಯಿತು. ಹಳೇ ಶಿಲಾಯುಗದ ಕೆಲವೇ ಸರಳ ಆಯುಧಗಳಿಂದ ಹಲವು ರೀತಿಯ ಕೆಲಸಗಳಿಗೆ ಉಪಯುಕ್ತವಾದ ವಿವಿಧ ರೂಪದ ಸಂಕೀರ್ಣ (complex) ನವ ಶಿಲಾಯುಗದ ಆಯುಧಗಳನ್ನು ತಯಾರಿಸುವುದರ ಜೊತೆ ಜೊತೆಗೇ ಅವರ. ಮೆದುಳಿನ ಗಾತ್ರ ಮೂರು ಪಟ್ಟಾಯಿತು. ಅದರ ರಚನೆ ವಿಕಾಸವಾಯಿತು. ಬುದ್ಧಿ ಮತ್ತು ಚಿಂತನೆಯ ಸಾಮರ್ಥ್ಯ ಬೆಳೆಯಿತು. ವಿಶ್ವದಾದ್ಯಂತ ವಿವಿಧ ಕಾಲ ಘಟ್ಟಗಳಲ್ಲಿ ಈ ಬೆಳವಣಿಗೆಯನ್ನು ಕಾಣುತ್ತೇವೆ.

ಕರ್ನಾಟಕದಲ್ಲಿ ಬಳ್ಳಾರಿಯ ಸಂಗನಕಲ್ಲು ಪಿಕಳೀಹಾಳ್, ಮಸ್ಕಿ ಮೊದಲಾದ ಅನೇಕ ತಾಣಗಳು ಶಿಲಾಯುಧ ತಯಾರಿಕೆ ನೈಪುಣ್ಯತೆಯ ದರ್ಶನ ಮಾಡಿಸುತ್ತವೆ. ನಂತರ ಲೋಹಗಳನ್ನು ಕಂಡು ಹಿಡಿದು ಅವುಗಳನ್ನು ಭೂಮಿಯಿಂದ ಪಡೆಯುವ ಬಗೆ, ಅದಕ್ಕೆ ಬೇಕಾದ ಅತಿ ಉಷ್ಣದ ಕುಲುಮೆಗಳು, ಲೋಹದ ನೇಗಿಲ ಗುಳ ಮೊದಲಾದ ಉತ್ಪಾದನಾ ಸಾಧನಗಳು ಮಾನವರ ಸಾಮರ್ಥ್ಯಕ್ಕೆ ಉದಾಹರಣೆಗಳು. ಹೀಗೆ ಆಯುಧಗಳೆಂದರೆ ಮಾನವರ ಶ್ರಮ ಮತ್ತು ಬುದ್ಧಿ ಶಕ್ತಿ ಶೇಖರಗೊಂಡ ಒಂದು ಖಜಾನೆ.

ಆಯುಧಗಳ ಲಭ್ಯತೆ, ಅಲಭ್ಯತೆ ಉಂಟು ಮಾಡಿದ ಅಸಮಾನತೆ:

ಲೋಹಗಳಿಂದ ತಯಾರಿಸಿದ ಆಯುಧಗಳು ಕಬ್ಬಿಣದ ನೇಗಿಲು ಮತ್ತು ಕಬ್ಬಿಣದ ತುದಿಯುಳ್ಳ ಬಾಣಗಳು ಮೊದಲಾದವುಗಳ ಪರಿಣಾಮಕಾರಿತ್ವ, ಕೆಲವರಿಗೆ ಮಾತ್ರ ಅದರ ಲಭ್ಯತೆ, ಉಳಿದವರಿಗೆ ಅಲಭ್ಯತೆ ಮಾನವ ಸಮಾಜದಲ್ಲಿ ಅಸಮಾನತೆಯ ಬೆಳವಣಿಗೆಯ ಪ್ರಮುಖ ಕಾರಣ.

ಸಮಾನತೆಯ ಆಧಾರದ ಮೇಲೆ ಬದುಕುತ್ತಿದ್ದ ಬುಡಕಟ್ಟುಗಳ ಏಕಲವ್ಯರ ಸೋಲು, ಲೋಹಾಯುಧಗಳಿಲ್ಲದವರ ಮೇಲೆ ಉತ್ತಮ ಬಿಲ್ಲುಗಳನ್ನು, ರಥಗಳು, ಕುದುರೆಗಳನ್ನು ಹೊಂದಿದ ರಾಮ, ಅರ್ಜುನರ ವಿಜಯ. ಅದರ ಪರಿಣಾಮವಾಗಿ ಭೂ ಆಕ್ರಮಣಗಳು, ಹಾಗೂ ಮನುಷ್ಯರನ್ನು ಬಂಧಿಸಿ ಹಿಡಿತಂದು ದುಡಿಸಿಕೊಳ್ಳುವುದು ಗುಲಾಮಗಿರಿಯ ಮೂಲಕ ಬಹು ದೊಡ್ಡ ಅಸಮಾನತೆಗೆ ಕಾರಣವಾದವು.

ರಾಜ್ಯ, ಸಾಮ್ರಾಜ್ಯಗಳ ಸ್ಥಾಪನೆಗೂ ಕೂಡಾ. ಅಲ್ಲಿಂದ ಇಲ್ಲಿವರೆಗೆ ಆಯುಧಗಳ ಅಸಮಾನತೆಗಳ ಬಲವೇ ವಿಶ್ವವನ್ನು ದಬ್ಬಾಳಿಕೆಯಲ್ಲಿಟ್ಟಿದೆ. ಆಯುಧ ಪೂಜೆಯ ದಿನ ಮಾನವ ಜನಾಂಗದಲ್ಲಿ ಅಸಮಾನತೆಯನ್ನುಂಟು ಮಾಡಿದ ಈ ಇತಿಹಾಸವನ್ನೂ ನೆನಪಿಸಿಕೊಳ್ಳೋಣ.





ಕಾರ್ಪೊರೇಟ್ ಭೂ ಮತ್ತು ಅರಣ್ಯ ಕಬಳಿಕೆ ವಿರುದ್ಧ ಹೋರಾಟ ಭೂಮಿ ಅಧಿಕಾರ ಆಂದೋಲನದ ರಾಷ್ಟ್ರೀಯ ಸಮಾವೇಶದ ಕರೆ

26–27 ಸೆಪ್ಟೆಂಬರ್ 2022 ರಂದು ದೆಹಲಿಯಲ್ಲಿ ನಡೆದ ಭೂಮಿ ಅಧಿಕಾರ ಆಂದೋಲನ(ಬಿಎಎ)ದ ಎರಡು ದಿನಗಳ ರಾಷ್ಟ್ರೀಯ ಸಮಾವೇಶವು ಸರ್ಕಾರ ಮತ್ತು ಕಾರ್ಪೊರೇಟ್‌ಗಳ ಭೂಮಿ ಮತ್ತು ಅರಣ್ಯ ಕಬಳಿಕೆ ವಿರುದ್ಧ ಹೋರಾಡಲು ನಿರ್ಧರಿಸಿದೆ. ಹಾಗೂ ಡಿಸೆಂಬರ್ 10 ಮಾನವ ಹಕ್ಕುಗಳ ದಿನದಂದು ಅರಣ್ಯ, ಭೂಮಿ, ಖನಿಜಗಳು, ನೀರು ಮತ್ತು ಕಾರ್ಮಿಕ ಕಾನೂನುಗಳ ಮೇಲಿನ ದಾಳಿಗಳ ವಿರುದ್ಧ ಬೃಹತ್ ಚಳುವಳಿಯಲ್ಲಿ ಭಾಗವಹಿಸಲು ಮತ್ತು ಜನವರಿ 30 ರಂದು ದೆಹಲಿಯಲ್ಲಿ ನಡೆಯಲಿರುವ 'ನಫ್ರತ್ ಛೋಡೋ ಸಂವಿಧಾನ್ ಬಚಾವೋ ಯಾತ್ರಾ'(ದ್ವೇಷ ಬಿಡಿ, ಸಂವಿಧಾನ ಉಳಿಸಿ ಯಾತ್ರೆ)ಗೆ ದೇಶಾದ್ಯಂತ ಬೆಂಬಲ ನೀಡಲು ಕರೆ ಕೊಟ್ಟಿದೆ.

ಭೂಮಿ ಅಧಿಕಾರ ಆಂದೋಲನದ 4 ನೇ ರಾಷ್ಟ್ರೀಯ ಸಮಾವೇಶದಲ್ಲಿ ದೇಶದ ವಿವಿಧ ರಾಜ್ಯಗಳಲ್ಲಿ ಸರ್ಕಾರ ಮತ್ತು ಕಾರ್ಪೊರೇಟ್‌ಗಳ ಭೂ ಕಬಳಿಕೆ ವಿರುದ್ಧ ಹೋರಾಡುತ್ತಿರುವ ಜನಾಂದೋಲನಗಳ ಪ್ರತಿನಿಧಿಗಳು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು. ಹನ್ನನ್ ಮೊಲ್ಲಾ, ಮೇಧಾ ಪಾಟ್ಕರ್, ಉಲ್ಕಾ ಮಹಾಜನ್, ಪ್ರಫುಲ್ಲ ಸಾಮಂತ್ರಾಯ, ದಯಾಮಣಿ ಬಾರ್ಲಾ, ಡಾ. ಸುನಿಲಂ, ಡಾ. ಅಶೋಕ್ ಧಾವಳೆ, ಅರವಿಂದ್ ಅಂಜುಮ್, ಮಾಧುರಿ, ರೋಮಾ ಮಲಿಕ್, ಸತ್ಯವಾನ್, ವಿಜೂ ಕೃಷ್ಣನ್ ಮುಂತಾದವರು ಸೇರಿ ಭೂಮಿ ಮತ್ತು ಅರಣ್ಯ ಹಕ್ಕು ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಿದ್ದಾರೆ.

ಸಮಾವೇಶ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಅರಣ್ಯ ಸಂರಕ್ಷಣಾ ಕಾಯ್ದೆ, 1980 ರ ನಿಯಮಗಳಲ್ಲಿ ಮಾಡಿದ ಬದಲಾವಣೆಗಳನ್ನು ಖಂಡಿಸಿತು.

ಮೋದಿ ಸರ್ಕಾರದ ಯಜಮಾನ ಅದಾನಿ ಕಲ್ಲಿದ್ದಲಿನ ಮೇಲೆ ಏಕಸ್ವಾಮ್ಯವನ್ನು ಸ್ಥಾಪಿಸಲು ಮಧ್ಯ ಭಾರತದ ಶ್ವಾಸಕೋಶ ಎಂದು ಕರೆಯಲ್ಪಡುವ ಛತ್ತೀಸ್‌ಗಢದ ಹಸ್ದೇವ್ ಅರಣ್ಯದಂತಹ ಶ್ರೀಮಂತ ಕಾಡುಗಳ ನಾಶಕ್ಕೆ ಬಲವಾದ ವಿರೋಧವನ್ನು ಸಮಾವೇಶ ಪುನರುಚ್ಚರಿಸಿತು.

ದೇಶದಲ್ಲಿ ಪ್ರಜಾಸತ್ತಾತ್ಮಕ ಚಳುವಳಿಗಳು ಮತ್ತು ಕಾರ್ಯಕರ್ತರ ಮೇಲಿನ ದಬ್ಬಾಳಿಕೆಯನ್ನು ಬಲವಾಗಿ ಖಂಡಿಸುತ್ತ, ಸರ್ಕಾರವು ತನ್ನ ಫ್ಯಾಸಿಸ್ಟ್ ಚಟುವಟಿಕೆಗಳನ್ನು ನಿಲ್ಲಿಸುವಂತೆ ಸಮಾವೇಶ ನಿರ್ಣಯವೊಂದರಲ್ಲಿ ಎಚ್ಚರಿಸಿತು.

ಈ ರಾಷ್ಟ್ರೀಯ ಸಮಾವೇಶ ಈ ಕೆಳಗಿನಂತೆ ಭವಿಷ್ಯದ ಕಾರ್ಯಕ್ರಮಗಳನ್ನು ರೂಪಿಸಿದೆ:

1. ಬಿಎಎ ಜತೆಗಿರುವ ಎಲ್ಲಾ ರಾಜ್ಯಗಳಲ್ಲಿ ಒಂದು ತಿಂಗಳೊಳಗೆ ರಾಜ್ಯ ಮಟ್ಟದ ಸಭೆಗಳನ್ನು ನಡೆಸಲಾಗುವುದು ಮತ್ತು ಅವರು ಸ್ಥಳೀಯ ಸಮಸ್ಯೆಗಳು ಮತ್ತು ಅಲ್ಲಿನ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಕಾರ್ಯತಂತ್ರವನ್ನು ರೂಪಿಸಲಾಗುವುದು.
2. ಡಿಸೆಂಬರ್ 10 ಮಾನವ ಹಕ್ಕುಗಳ ದಿನದಂದು ಅರಣ್ಯ, ಭೂಮಿ, ಖನಿಜಗಳು, ನೀರು ಮತ್ತು ಕಾರ್ಮಿಕ ಕಾನೂನುಗಳ ಮೇಲಿನ ದಾಳಿಗಳ ವಿರುದ್ಧ ಬೃಹತ್ ಚಳುವಳಿ ನಡೆಯಲಿದೆ.
3. ಜನವರಿ 30 ರಂದು ದೆಹಲಿಯಲ್ಲಿ ನಡೆಯಲಿರುವ 'ನಫ್ರತ್ ಛೋಡೋ ಸಂವಿಧಾನ್ ಬಚಾವೋ ಯಾತ್ರಾ'(ದ್ವೇಷ ಬಿಡಿ, ಸಂವಿಧಾನ ಉಳಿಸಿ ಯಾತ್ರೆ) ನಡೆಯಲಿದ್ದು, ಬಿಎಎ ದಿಲ್ಲಿಯಲ್ಲಿ ಈ ಯಾತ್ರೆಗೆ ಸೌಹಾರ್ದ ವ್ಯಕ್ತಪಡಿಸುವುದು ಮತ್ತು ದೇಶಾದ್ಯಂತ ಈ ಯಾತ್ರೆಗೆ ಬೆಂಬಲ ನೀಡಲು ಕರೆ.
4. ಭೂಮಿ ಪ್ರಶ್ನೆಗಳ ಮೇಲಿನ ಚಳುವಳಿಗಳಿಗೆ ನೆರವಾಗಲು ಒಂದು ಕಾನೂನು ಕೋಶ(ಲೀಗಲ್ ಸೆಲ್) ರಚನೆ.
5. ಇಲ್ಲಿಯವರೆಗೆ ಬಿಎಎ ಸ್ವಯಂಪ್ರೇರಿತ ರೀತಿಯಲ್ಲಿ ಕೆಲಸ ಮಾಡಿದೆ, ಆದರೆ ಈಗ ಕೆಲಸ ಮಾಡಲು ಒಂದು ಕಾರ್ಯದರ್ಶಿ ಮಂಡಳಿಯ ಅಗತ್ಯವಿದೆ ಎಂದನಿಸುತ್ತಿದೆ. ಈ ದಿಕ್ಕಿನಲ್ಲಿ ಶೀಘ್ರವೇ ಒಂದು ಮೂರ್ತ ಉಪಕ್ರಮವನ್ನು ತೆಗೆದುಕೊಳ್ಳುತ್ತದೆ.

ಬಿಎಎ ರಾಷ್ಟ್ರೀಯ ಸಮಾವೇಶ ಹಕ್ಕೊತ್ತಾಯಗಳ ಚಾರ್ಟರನ್ನು ಅಂಗೀಕರಿಸಿತು. ಅದರಲ್ಲಿ

* ಭೂಮಿಯನ್ನು ಕಾರ್ಪೊರೇಟ್‌ಗಳು ವಹಿಸಿಕೊಳ್ಳುವುದನ್ನು ನಿಲ್ಲಿಸಬೇಕು, ಎಲ್ಲಾ ಕಾನೂನುಬಾಹಿರ ಸ್ಥಳಾಂತರ ಮತ್ತು ಒಕ್ಕಲೆಬ್ಬಿಸುವುದನ್ನು ನಿಲ್ಲಿಸಬೇಕು ಮತ್ತು ರೈತರ ಭೂಮಿಯ ಹಕ್ಕುಗಳನ್ನು ಖಚಿತಪಡಿಸಬೇಕು;
* 'ಭೂಸ್ವಾಧೀನ, ಮರುವಸತಿ ಮತ್ತು ಮರು ನೆಲಸು ಕಾಯ್ದೆ' (ಎಲ್.ಎ.ಎ.ಆರ್.) 2013 ನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು;. ಕಾನೂನುಬಾಹಿರ ಸ್ಥಳಾಂತರ ಮತ್ತು ಒಕ್ಕಲೆಬ್ಬಿಸುವುದರ ವಿರುದ್ಧ ರೈತರ ಪ್ರತಿರೋಧದ ಮೇಲೆ ದಮನವನ್ನು ಹರಿಬಿಡಬಾರದು;
* ಕೃಷಿ ಭೂಮಿಯನ್ನು ಇತರ ಉದ್ದೇಶಗಳಿಗಾಗಿ ಪರಿವರ್ತಿಸದಂತೆ ರಕ್ಷಿಸುವ ವಿಧಿಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಮತ್ತು ಕಾನೂನುಬದ್ಧ ಮತ್ತು ನ್ಯಾಯಯುತವಾದ ಭೂ ಸ್ವಾಧೀನದಲ್ಲಿ ಸರಿಯಾದ ಪರಿಹಾರಕ್ಕಾಗಿ ಭೂ ಕಾನೂನುಗಳಲ್ಲಿನ ವಿಧಿಗಳನ್ನು ಅನುಸರಿಸಬೇಕು;
* ಒಂದು ವರ್ಷದ ನಿಗದಿತ ಕಾಲಮಿತಿಯೊಳಗೆ ಎಲ್ಲಾ ರಾಜ್ಯಗಳಲ್ಲಿ ಅರಣ್ಯ ಹಕ್ಕು ಕಾಯ್ದೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು;
* ಅರಣ್ಯ ಸಂರಕ್ಷಣಾ ನಿಯಮಗಳನ್ನು 2022 ಮತ್ತು ಜೀವವೈವಿಧ್ಯ (ತಿದ್ದುಪಡಿ) ಕಾಯಿದೆ 2022ನ್ನು ಹಿಂಪಡೆಯಬೇಕು;
* ಕರಾವಳಿ ಭೂಮಿಯಲ್ಲಿ ಮೀನು ಕಾರ್ಮಿಕರ ಸಮುದಾಯ ಹಕ್ಕುಗಳನ್ನು ಗುರುತಿಸಿ ದಾಖಲಿಸಬೇಕು;
* ಕೃಷಿ, ಮೀನುಗಾರಿಕೆ, ಹೈನುಗಾರಿಕೆ ಮತ್ತು ಎಲ್ಲಾ ಸಂಬಂಧಿತ ವಲಯಗಳೊಂದಿಗೆ ಜೋಡಿಸಿ ಮನರೇಗದ ಸಮಗ್ರ ಅನುಷ್ಠಾನ ಮತ್ತು ಎಲ್ಲಾ ಗ್ರಾಮೀಣ ಕಾರ್ಮಿಕರಿಗೆ ದಿನಕ್ಕೆ 600ರೂ.ಗಳ ಕನಿಷ್ಠ ವೇತನ ಖಾತ್ರಿಪಡಿಸಬೇಕು;
* ರೈತರಿಗೆ ತಮ್ಮ ಜಾನುವಾರು ಸಂಪತ್ತನ್ನು ವಿನಿಮಯ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಖಾತ್ರಿಪಡಿಸಲು ದೇಶಾದ್ಯಂತ ಜಾನುವಾರು ವ್ಯಾಪಾರ ಮಾರುಕಟ್ಟೆಯನ್ನು ಕಾನೂನುಬದ್ಧಗೊಳಿಸಬೇಕು;
* ರಾಜ್ಯ ಸರ್ಕಾರವು ಜಾನುವಾರುಗಳನ್ನು ಖರೀದಿಸುತ್ತದೆ, ರೈತರಿಗೆ ಮಾರುಕಟ್ಟೆ ಬೆಲೆಯನ್ನು ಪಾವತಿಸುತ್ತದೆ ಮತ್ತು ಅವುಗಳನ್ನು ಸರಿಯಾದ ಆಹಾರ ಮತ್ತು ನೀರನ್ನು ಖಾತರಿಪಡಿಸುವ ಗೋಶಾಲೆಗಳಲ್ಲಿ ರಕ್ಷಿಸುತ್ತದೆ ಎಂದು ವಿಧಿಸುವ ಅಂಶವನ್ನು ಸೇರಿಸುವಂತೆ ಎಲ್ಲ ರಾಜ್ಯ ಸರಕಾರಗಳಿಗೆ ನಿರ್ದೇಶನ ನೀಡಬೇಕು;
* 'ಗೋಸಂರಕ್ಷಣೆ' ಹೆಸರಿನಲ್ಲಿ ಹಿಂಸಾಚಾರ ಮತ್ತು ದೊಂಬಿ ಹತ್ಯೆಯನ್ನು, ವಿಶೇಷವಾಗಿ ಮುಸ್ಲಿಮರು ಮತ್ತು ದಲಿತರ ವಿರುದ್ಧ, ಹರಿಯಬಿಡುವ ಕೋಮುವಾದಿಗಳ ವಿರುದ್ಧ ಕಠಿಣ ಕಾನೂನು ಕ್ರಮವನ್ನು ಖಾತ್ರಿಪಡಿಸಬೇಕು;

ಎಂಬ ಭೂಮಿ ಸಂಬಂಧಿತ ಬೇಡಿಕೆಗಳಲ್ಲದೆ, ರೈತರು ಮತ್ತು ಕಾರ್ಮಿಕರ ಮತ್ತು ಪ್ರಜಾಪ್ರಭುತ್ವ ಆಂದೋಲನದ ಸಾರ್ವತ್ರಿಕ ಬೇಡಿಕೆಗಳೂ ಸೇರಿವೆ.

ದಸರಾ ಜನರ ಹಬ್ಬವಾಗಿ........ ಪುಟ 9 ರಿಂದ

ಕಿರಿಯರಿಗೆ ಬಂಗಾರ ನೀಡಿ ಹಾರೈಸುವ ಹಿರಿಯರು ಎಲ್ಲೆಲ್ಲೂ ಕಾಣ ಸಿಗುತ್ತಾರೆ. ಜಾತಿ ಬೇಧ, ಲಿಂಗ ಬೇಧಗಳನ್ನು ಮರೆಯುತ್ತಾರೆ. ಹಾಗೇಯೇ ಧರ್ಮ ಬೇಧಗಳನ್ನೂ ಹಿಂದೂಗಳು ಮುಸ್ಲಿಮರಿಗೂ, ಮುಸ್ಲಿಮರು ಹಿಂದೂಗಳಿಗೂ ನಾವೂ ನೀವೂ ಬಂಗಾರದಂಗಿರೋಣ ಎಂದು ಪರಸ್ಪರ ಹಾರೈಸುತ್ತಾರೆ.

ಈ ಮಾತುಗಳಲ್ಲಿ ತುಂಬಿದ ಮಾನವತೆ, ಕೂಡು ಬಾಳಿದರೆ ಸ್ವರ್ಗ ಸುಖ ಎನ್ನುವ ಭಾವನೆ ಇಂದು ಇಡೀ ದೇಶದ ಅಗತ್ಯ. (ದಲಿತರ ಜೊತೆ ಈ ರೀತಿ ಹಾರೈಕೆಗಳಿವೆಯೇ, ನನಗೆ ಗೊತ್ತಿಲ್ಲ, ಗೊತ್ತಿದ್ದವರು ಹೇಳಬೇಕು.)

ಎರುಮೈಯೂರು ಎಂಬ ಅಚ್ಚ_ಕನ್ನಡ, ದ್ರಾವಿಡ_ಮೂಲದ ಹೆಸರು, ಶಂಗಂ ಸಾಹಿತ್ಯದಲ್ಲಿ ಹಲವು ಬಾರಿ ಉಲ್ಲೇಖವಾಗಿರುವ ಹೆಸರು ಸಂಸ್ಕೃತ ರೂಪ ತಳೆದು ಮಹಿಷ_ಮಂಡಲವಾಯಿತು. ಮಹಿಷನ ಊರು ಮಹಿಷೂರಾಯಿತು.

ಈ ಪ್ರದೇಶದಲ್ಲಿ ಕೃಷಿ ಇನ್ನೂ ಬೆಳೆಯದ ಅಂದಿನ ಕಾಲದಲ್ಲಿ ಜನರಿಗೆ ಮಾಂಸಾಹಾರವೇ ಜೀವನಾಧಾರ. ಈ ಪ್ರದೇಶದ ಕಾಡುಗಳಲ್ಲಿ ಹೆಚ್ಚಾಗಿದ್ದ ಎಮ್ಮೆ ಕೋಣಗಳು ಅಂದು ಆಹಾರದ ಮುಖ್ಯ ಮೂಲವಾಗಿದ್ದವು. ಕೃಷಿ ಹೆಚ್ಚಿದಂತೆ ಒಂದು ಕಡೆ ಸಸ್ಯಾಹಾರ ಪ್ರಧಾನ ಮೂಲವಾಯಿತು. ಮತ್ತೊಂದು ಕಡೆ ಬುಡಕಟ್ಟು ಜನರನ್ನು ಮತ್ತು ಅವರು ವಾಸಿಸುತ್ತಿದ್ದ ಕಾಡುಗಳನ್ನು ರಾಜ, ಪಾಳೆಯಗಾರರು ವಶಪಡಿಸಿಕೊಂಡು ಕೃಷಿ ಮಾಡಲಾರಂಭಿಸಿದರು.

ಎಲ್ಲರೂ ರೈತರಾದರೆ ರಾಜ, ಸಾಮಂತ ಪಾಳೆಯಗಾರರ ಭೂಮಿಯಲ್ಲಿ ಹಾಗೂ ಬ್ರಾಹ್ಮಣರಿಗೆ ಬ್ರಹ್ಮಸ್ವವಾಗಿ ನೀಡಿದ ಅಪಾರ ಭೂಮಿಯಲ್ಲಿ ಬೇಸಾಯ ಮಾಡುವವರು ಯಾರು?

ಭೂಮಿಯಲ್ಲಿ ಯಾವಾಗಲೂ ಜೀತಗಾರರಂತೆ ದುಡಿಯಲು ಈ ಬುಡಕಟ್ಟು ಜನರನ್ನು ಕೀಳು, ಅಸ್ಪೃಶ್ಯರು, ಅವರಿಗೆ ಭೂಮಿಯ ಒಡೆಯರಾಗುವ ಹಕ್ಕಿಲ್ಲ. ಅವರ ಕೆಲಸವೇ ಜೀತಗಾರರಾಗಿ ಕೇವಲ ಎರಡು ಹೊತ್ತಿನ ಊಟಕ್ಕಾಗಿ ಅಗ್ಗದ ದುಡಿಮೆ ಮಾಡಬೇಕು ಎಂಬ ಜಾತಿ ವ್ಯವಸ್ಥೆ, ಅಸ್ಪೃಶ್ಯತೆಯನ್ನು ಸೃಷ್ಟಿಸಲಾಯಿತು.

ಇದಕ್ಕೆ ಎಮ್ಮೆ ಹಸುಗಳನ್ನು, ಕಾಡಿನ ಹಲವು ಜೀವರಾಶಿಗಳನ್ನು ತಿನ್ನುವ ಅವರ ಆಹಾರ ಪದ್ಧತಿ ಕೀಳು ಎಂದು ಬಿಂಬಿಸಲಾಯಿತು.

ಕೀಳು ಆಹಾರವನ್ನು ತಿನ್ನುವವರು ಕೀಳು ಎಂದು ಬೇಧವನ್ನು ಹೇರಲಾಯಿತು.

ಇದರ ಫಲವೇ ಮಾರಮ್ಮ ಬ್ರಾಹ್ಮಣಿ, ಅವಳಿಗೆ ಬಲಿ ನೀಡುವ ಕೋಣ ದಲಿತ ಎಂದು ಒಂದು ಪುರಾಣ,

ಮಹಿಷ ಅಸುರ ಎಂಬುದು ಮತ್ತೊಂದು ಪುರಾಣ ಸೃಷ್ಟಿಸಲಾಯಿತು.

ರಾಜರ ಆಳ್ವಿಕೆ, ಪುರೋಹಿತರ ಸುಖೀ ಬದುಕಿಗೆ ಆಧಾರವಾಗಿ ಕಟ್ಟಿದ ಪುರಾಣಗಳು ಇವು.

ಫ್ಯಾಸಿಸ್ಟ್ ಆಡಳಿತದಲ್ಲಿ ಮುಸ್ಲಿಮ್ ಸಮುದಾಯ ಇಡಬೇಕಾದ ಎಚ್ಚರಿಕೆಯ ಹೆಜ್ಜೆಗಳು....

ಪುಟ 8 ರಿಂದ

ವಿರುದ್ಧ ಗಟ್ಟಿಧ್ವನಿಯಲ್ಲಿ ಮಾತನಾಡಬೇಕು. ಇದು ಭಾರತದ ಉತ್ತಮ ಭವಿಷ್ಯಕ್ಕಾಗಿ ಅತೀ ಅಗತ್ಯವಾಗಿದೆ. ಧರ್ಮವನ್ನು ಮುಂದಿಟ್ಟುಕೊಂಡು ಹೋದ ಯಾವುದೇ ರಾಷ್ಟ್ರ ಮುಂದುವರಿದಿಲ್ಲ. ಬದಲಾಗಿ ಪತನದತ್ತ ಸಾಗಿದೆ. ಈ ನಿಟ್ಟಿನಲ್ಲಿ ಬಹುಸಂಖ್ಯಾತ ಪ್ರಗತಿಪರರು ಸಂಘದ ಅಪಾಯವನ್ನು ತಮ್ಮ ಸಮುದಾಯದ ಜನರಿಗೆ ಮತ್ತಷ್ಟು ಗಟ್ಟಿಯಾಗಿ ತಿಳಿಸಬೇಕಾದದ್ದು ಈ ಕಾಲದ ತುರ್ತು. ಸಂಘ ಸಿದ್ಧಾಂತ ಈ ದೇಶಕ್ಕೆ ಯಾವ ರೀತಿ ಅಪಾಯಕಾರಿ ಎಂಬುವುದರ ವಿವಿಧ ಸ್ವರೂಪಗಳನ್ನು ಜನರಿಗೆ ಮನಗಾಣಿಸಬೇಕು. ಪ್ರಗತಿಪರ ಸಂಘಟನೆಗಳು ತಳಮಟ್ಟದಲ್ಲಿ ಜನರನ್ನು ತಲುಪಿ ಜನರನ್ನು ಜಾಗೃತಗೊಳಿಸುವ ನಿಟ್ಟಿನಲ್ಲಿ ಕಾರ್ಯಯೋಜನೆ ರೂಪಿಸಬೇಕು. ಇವಷ್ಟೇ ಅಲ್ಲ, ಮುಸ್ಲಿಮ್ ಸಮುದಾಯದಲ್ಲೂ ಕೆಲವೊಂದು ಬದಲಾವಣೆಗಳು ಹಾಗೂ ಸುಧಾರಣೆಗಳು ನಡೆಯಬೇಕಾಗಿದೆ.

ಮುಸ್ಲಿಮ್ ಸಮಾಜದಲ್ಲಿರುವ ಪಿಡುಗುಗಳನ್ನು ತೊಡೆದು ಹಾಕಲು ಯಾವ ಪ್ರಮಾಣದಲ್ಲಿ ಸುಧಾರಣಾ ಚಳುವಳಿಗಳು ನಡೆಯಬೇಕಿತ್ತೂ ಆ ಪ್ರಮಾಣದಲ್ಲಿ ಆಗಿಲ್ಲ ಎಂಬುವುದು ಸ್ವತಃ ಡಾ. ಬಿ.ಆರ್ ಅಂಬೇಡ್ಕರ್ ಅವರ ನಿಲುವೂ ಆಗಿತ್ತು. ಸಮುದಾಯಕ್ಕೆ ಸೂಕ್ತವಾದ ಜಾತ್ಯಾತೀತ ಅಥವಾ ಲಿಬರಲ್ ಮತ್ತು ದೂರದೃಷ್ಟಿತ್ವ ಹೊಂದಿರುವ ನಾಯಕತ್ವವಿಲ್ಲ. ಸದ್ಯ ನಡೆಯುತ್ತಿರುವ ಘಟನಾವಳಿಗಳಿಗೆ ಯಾವ ರೀತಿ ಪ್ರತಿಕ್ರಿಯೆ ನೀಡಬೇಕು ಎಂಬ ನಿರ್ದೇಶನಗಳಿಲ್ಲ. ಭಯ, ಅಸಹಾಯಕತೆ, ನೋವು ಮುಸ್ಲಿಮ್ ಸಮುದಾಯವನ್ನು ಕಂಗೆಡಿಸುತ್ತಿದೆ. ಈ ನಿಟ್ಟಿನಲ್ಲಿ ಮುಸ್ಲಿಮ್ ಸಮುದಾಯ ಸಜ್ಜುಗೊಳ್ಳಬೇಕಾಗಿದೆ. ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಮುಂದುವರಿಯಬೇಕಾಗಿದೆ.

ಮತಧರ್ಮ ಪಾಲನೆಯ ಜೊತೆಗೆ ಬಹುತ್ವದ ಕಲ್ಪನೆಯನ್ನು ಈ ನೆಲದ ಸೂಫಿಗಳು ನಮಗೆ ತೋರಿಸಿಕೊಟ್ಟಿದ್ದಾರೆ. ಅತಿಧಾರ್ಮಿಕತೆ, ಮತೀಯತೆ, ಲಿಂಗ ತಾರತಮ್ಯ ಸಮುದಾಯವನ್ನು ಮತ್ತಷ್ಟು ಕತ್ತಲೆಯಲ್ಲಿ ಇಡುತ್ತದೆ. ಈ ನಿಟ್ಟಿನಲ್ಲಿ ಕೆಲವು ಸೀಮೋಲ್ಲಂಘನೆಯ ಅಗತ್ಯ ಖಂಡಿತಾ ಇದೆ. ಅತಿರೇಕದ ವರ್ತನೆಯನ್ನು ತೋರದೆ ಪ್ರಜ್ಞಾವಂತಿಕೆಯಿಂದ ಮುಂದುವರಿಯಬೇಕು. ಸಮುದಾಯದ ಒಳಗಿನ ಪ್ರಜ್ಞಾವಂತ ಧ್ವನಿಗಳಿಗೆ ಕೊಂಚ ಮಟ್ಟಿಗಾದರು ಕಿವಿಯಾಗಬೇಕು. ಘನತೆಯ ಬದುಕಿಗಾಗಿ ನಾವು ಎಲ್ಲಾ ದಿಕ್ಕುಗಳಲ್ಲಿ ಎಲ್ಲರ ಜತೆಗೂಡಿ ಹೋರಾಡೋಣ. ಎಲ್ಲರ ಜೊತೆಗೂಡಿ ಬದುಕಿ ಬಾಳೋಣ.

ಅಮಿತ್ ಶಾ ತೆಲಂಗಾಣದಲ್ಲಿ ಹೇಳಿದ್ದರಲ್ಲಿ ಸತ್ಯಾಂಶ ಎಷ್ಟು?

ಗೃಹ ಸಚಿವರು ತೆಲಂಗಾಣದಲ್ಲಿ ಅನೇಕ ವಿಷಯಗಳನ್ನು ಹೇಳಿದರು. ನಿಜಾಮ ಶರಣಾದ್ದನ್ನು ಮುಸ್ಲಿಂ ವರ್ಸಸ್ ಹಿಂದೂ ಎನ್ನುವಂತೆ ಬಿಂಬಿಸಿದರು. ಹೌದು, ತೆಲಂಗಾಣದಲ್ಲಿ "ವಿಮೋಚನೆ" ನಡೆದಿತ್ತು ಆದರೆ ಅದು ಅಮಿತ್ ಶಾ ಉಸುರಿದ 'ಕ್ರೊನೋಲೊಜಿ'ಅಲ್ಲ. ಒಪ್ಪಂದವನ್ನು ಉಲ್ಲಂಘಿಸಿದ ನಿಜಾಮನನ್ನು 'ರಾಜಪ್ರಮುಖ'ನಾಗಿ ಮಾಡಲಾಯಿತು, ಆತನ ದಬ್ಬಾಳಿಕೆಯ ವಿರುದ್ಧ ಹೋರಾಡಿದವರನ್ನು ಶಿಕ್ಷಿಸಲಾಯಿತು. ಇದು ತಿರುಗುಮುರುಗಾದ 'ವಿಮೋಚನೆ'! ಇಷ್ಟೇ ಅಲ್ಲ– ಅವರು ಕೃತಜ್ಞತೆಯಿಂದ ಸ್ಮರಿಸಿಕೊಂಡ ಹಿಂದೂ ಮಹಾಸಭಾದ ಉನ್ನತ ಮುಖಂಡರೇ ತಿರುವಾಂಕೂರಿನ ಮಹಾರಾಜ ಕೂಡ ನಿಜಾಮರಂತೆಯೇ ಭಾರತದಿಂದ ಸ್ವತಂತ್ರವಾಗಿರುವ ಘೋಷಣೆಯನ್ನು ಮಾಡಿದ್ದನ್ನು ಬೆಂಬಲಿಸಿದರು ಮತ್ತು ಇದೇ ಶಾ ರವರ ಸರಕಾರ ಪಾಕಿಸ್ತಾನದೊಂದಿಗೆ 'ಸ್ಟಾಂಡ್‌ಸ್ಟಿಲ್' ಒಪ್ಪಂದಕ್ಕೆ ಸಹಿ ಹಾಕುವಬುದಾಗಿ ಹೇಳಿ ಭಾರತದಿಂದ ಸ್ವತಂತ್ರವಾಗಿ ಉಳಿಯುವ ಉದ್ದೇಶವನ್ನು ಘೋಷಿಸಿದ್ದ ಜಮ್ಮು ಮತ್ತು ಕಾಶ್ಮೀರದ ಮಹಾರಾಜ ಹರಿಸಿಂಗರ ಜನ್ಮದಿನವನ್ನು ಅಲ್ಲಿ ರಜಾದಿನವಾಗಿ ಘೋಷಿಸಿದೆ!



ಬೃಂದಾ ಕಾರತ್ — ಅನು: ಲವಿತ್ರ

ಗೃಹ ಸಚಿವ ಅಮಿತ್ ಶಾರವರಿಗೆ ಹೈದರಾಬಾದ್ ನಿಜಾಮ್ ಭಾರತಕ್ಕೆ ಸೇರ್ಪಡೆಯಾದ ವಾರ್ಷಿಕೋತ್ಸವವನ್ನು ಆಚರಿಸಲು ತೆಲಂಗಾಣಕ್ಕೆ ಭೇಟಿ ಮಾಡಿದ ಸಂದರ್ಭದಲ್ಲಿ ಅನೇಕ ವಿಷಯಗಳನ್ನು ಹೇಳಲಿಕ್ಕಿತ್ತು. ಸೆಪ್ಟೆಂಬರ್ 17ನ್ನು ನಿಜಾಮ ಮತ್ತು ರಜಾಕಾರರ ಆಳ್ವಿಕೆಯಿಂದ 'ವಿಮೋಚನಾ ದಿನ'ವನ್ನಾಗಿ ಆಚರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದರು. ನಮಗೆ ತಿಳಿದಿರುವಂತೆ ರಜಾಕಾರರು, ಪಾಕಿಸ್ತಾನಕ್ಕೆ ಹೋಗಲು ಅನುಮತಿ ಪಡೆದ ಖಾಸಿಂ ರಿಜ್ವಿಯ ನಿಯಂತ್ರಣದಲ್ಲಿದ್ದ ನಿಜಾಮರ ಖಾಸಗಿ ಸಶಸ್ತ್ರ ಪಡೆಗಳು. ತೆಲಂಗಾಣವನ್ನು ಆಳುವವರು ಮತ್ತು ಭಾರತವನ್ನು ಆಳಿದವರು ಇಂದಿನ ರಜಾಕಾರ್‌ಗಳಿಗೆ ಹೆದರುತ್ತಿದ್ದಾರೆ, ಅದಕ್ಕಾಗಿಯೇ ಅವರು ದಿನವನ್ನು ಆಚರಿಸಲಿಲ್ಲ ಎಂದು ಶಾ ಆರೋಪಿಸಿದರು. ನಿಜಾಮ್ ಮತ್ತು ರಜಾಕಾರರ ವಿರುದ್ಧ, ಅವರ ಪ್ರಕಾರ, ಹೋರಾಡಿದವರಿಗೆ ತಮ್ಮ ಕೃತಜ್ಞತೆಯ ಸಂದೇಶದಲ್ಲಿ, ನಿರ್ದಿಷ್ಟವಾಗಿ ಹಿಂದೂ ಮಹಾಸಭಾ ಮತ್ತು ಆರ್ಯ ಸಮಾಜವನ್ನು ಮಾತ್ರ ಉಲ್ಲೇಖಿಸಿದ್ದಾರೆ. ಮತ್ತು ಸಹಜವಾಗಿಯೇ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಗಂತೂ ಕೃತಜ್ಞತೆಯನ್ನು ಸಲ್ಲಿಸಿದರು. ಭಾರತದ ಗೃಹ ಸಚಿವರು ನಿಜಾಮ್ ಭಾರತಕ್ಕೆ ಸೇರ್ಪಡೆಯಾದದ್ದನ್ನು ಹಿಂದು– ಮುಸ್ಲಿಂ ಮುಖಾಮುಖಿ ಎನ್ನುವಂತೆ ಬಿಂಬಿಸಿದರು. ಮತ್ತು ಭಾರತೀಯ ಸೇನೆಯು "ಉಕ್ಕಿನ ಮನುಷ್ಯ" ಪಟೇಲ್ ಅವರ ನಾಯಕತ್ವದಲ್ಲಿ ನಿರಂಕುಶ ಮುಸ್ಲಿಂ ಆಡಳಿತಗಾರನ ಹಿಡಿತದಿಂದ ರಾಜ್ಯವನ್ನು "ವಿಮೋಚನೆ" ಮಾಡುವ ಒಂದು ಮಾದರಿ ಪ್ರಕರಣವೆಂದು ಪ್ರಸ್ತುತಪಡಿಸಿದರು.

ನೀವು ಇದನ್ನು ತಿರುಚಿದ ಇತಿಹಾಸವೆಂದೋ, ಸತ್ಯದ ಕೊರತೆಯೆಂದೋ ಅಥವಾ ಸುಳ್ಳುಗಳ ಕಂತೆಯೆಂದೋ, ಏನು ಬೇಕಾದರೂ ಕರೆಯಬಹುದು.

ಹೌದು, ತೆಲಂಗಾಣದಲ್ಲಿ "ವಿಮೋಚನೆ" ನಡೆದಿತ್ತು ಆದರೆ ಅದು ಅಮಿತ್ ಶಾ ಉಸುರಿದ 'ಕ್ರೊನೋಲೊಜಿ'(ಘಟನಾಕ್ರಮ) ಅಲ್ಲ. ನಿಜಾಮರ ಆಳ್ವಿಕೆಯು "ದೊರಾ" ಎಂದು ಕರೆಯಲ್ಪಡುತ್ತಿದ್ದ ಜಮೀನ್ದಾರರು, ದೇಶಮುಖರನ್ನು ಆಧರಿಸಿದ್ದ ಕ್ರೂರ ಊಳಿಗಮಾನ್ಯ ದಬ್ಬಾಳಿಕೆಯಾಗಿತ್ತು. ನಿಜಾಮರ ಆಳ್ವಿಕೆಗೆ ಬಲವಾದ ಬೆಂಬಲದ ನೆಲೆಯನ್ನು ಒದಗಿಸಿದ ಹಿಂದೂ ಮೇಲ್ಜಾತಿಯ ಗ್ರಾಮೀಣ ಕುಲೀನರು ಇದರಲ್ಲಿ ಸೇರಿದ್ದರು. ನಿಜಾಮ ಆಳ್ವಿಕೆಯ ಸಂಕೇತಗಳಾದ ಈ ಹಿಂದೂ ಮತ್ತು ಮುಸ್ಲಿಂ ದಮನಕೋರರನ್ನು ಬೆಂಬಲಿಸಲು ರಜಾಕಾರರನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಲಾಯಿತು. ಈ ವ್ಯವಸ್ಥೆಯು ನಿಜಾಮರ ಬೊಕ್ಕಸವನ್ನು ದುಬಾರಿ ಗೇಣಿ, ಬಲವಂತದ ಬಿಟ್ಟಿ ದುಡಿಮೆಯ "ವೆಟ್ಟಿ" ವ್ಯವಸ್ಥೆ, ಸಾಮೂಹಿಕ ಒಕ್ಕಲೆಬ್ಬಿಸುವುದು ಮತ್ತು ಸಾಗುವಳಿ ರೈತರಿಂದ ಭೂಮಿಯ ಸ್ವಾಧೀನ, ಭೂಮಾಲೀಕ ಕುಟುಂಬಗಳಿಗೆ ಉಚಿತ ಸೇವೆಗಳನ್ನು ಒದಗಿಸುವ ಮೂಲಕ ಕಂದಾಯ ಸಂಗ್ರಹವನ್ನು ಆಧರಿಸಿತ್ತು. ಬಡ ಗ್ರಾಮೀಣ ಮಹಿಳೆಯರ ಮೇಲೆ ಲೈಂಗಿಕ ಶೋಷಣೆ ವಿಪರೀತವಾಗಿತ್ತು.

ಧರ್ಮದ ಅಂಶ ಇರಲಿಲ್ಲ

1946 ರಲ್ಲಿ, ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಆಂಧ್ರ ಮಹಾಸಭಾದ ಮೂಲಕ ಈಗಿನ ತೆಲಂಗಾಣದ ಜಿಲ್ಲೆಗಳಲ್ಲಿ ನಿಜಾಮನ ಈ ಆಳ್ವಿಕೆಯನ್ನು ದ್ವೇಷಿಸಲಾರಂಭಿಸಿದ್ದ ರೈತರು, ಭೂರಹಿತರು, ಕುಶಲಕರ್ಮಿಗಳು, ಮಹಿಳೆಯರು ನಿಜಾಮ ಆಡಳಿತದ ವಿರುದ್ಧ ಶಸ್ತ್ರಗಳನ್ನು ಎತ್ತಿದರು. ಈ ಹೋರಾಟವು ಊಳಿಗಮಾನ್ಯ ದಬ್ಬಾಳಿಕೆಯ ಭಾರೀ ಹೊರೆಯಿಂದ ರೈತ ಮತ್ತು ಭೂರಹಿತ ಕಾರ್ಮಿಕರು, ದಲಿತರು ಮತ್ತು ಆದಿವಾಸಿಗಳ ವಿಮೋಚನೆಗಾಗಿ ಆಗಿತ್ತು. ಈ ಹೋರಾಟದಲ್ಲಿ ಧರ್ಮದ ಅಂಶ ಇರಲಿಲ್ಲ. ಹೇಗೆ ಹೋರಾಟಗಾರರು ಹಿಂದೂ ಮತ್ತು ಮುಸ್ಲಿಂ ರೈತರಾಗಿದ್ದರೋ ಅದೇ ರೀತಿ ದಬ್ಬಾಳಿಕೆ ಮಾಡುವವರು ಕೂಡ ಹಿಂದೂ ಮತ್ತು ಮುಸ್ಲಿಂ ಇಬ್ಬರೂ ಆಗಿದ್ದರು. ನಂತರದ ವರ್ಷಗಳಲ್ಲಿ, 1951ರಲ್ಲಿ ಹೋರಾಟವನ್ನು ಹಿಂತೆಗೆದುಕೊಳ್ಳುವ ವರೆಗೆ, ನಿಜಾಮ ಮತ್ತು ರಜಾಕಾರರ ಬಲವನ್ನು ಎದುರಿಸಿ, ರೈತರು ಹೋರಾಡಿ 3,000 ಕ್ಕೂ ಹೆಚ್ಚು








ಹಳ್ಳಿಗಳನ್ನು ವಿಮೋಚನೆಗೊಳಿಸಿದರು. ನ್ಯಾಯ ಮತ್ತು ಸಮಾನತೆಯ ಆಧಾರದ ಮೇಲೆ "ಗ್ರಾಮರಾಜ್ಯ" ಸ್ಥಾಪಿಸಿದರು ಮತ್ತು 10 ಲಕ್ಷ ಎಕರೆ ಭೂಮಿ ಹಂಚಿಕೆ ಮಾಡಿದರು; ಜೊತೆಗೆ ಜಾತಿ ವ್ಯವಸ್ಥೆ ಮತ್ತು ಮಹಿಳೆಯರ ಅಧೀನತೆಯ ವಿರುದ್ಧ ಸಾಮಾಜಿಕ ಸಂಬಂಧಗಳಲ್ಲಿ ಆಮೂಲಾಗ್ರ ಪರಿವರ್ತನೆಗೆ ಪ್ರಯತ್ನಿಸಿದರು. ಈ ಹೋರಾಟದಲ್ಲಿ 4,000ಕ್ಕೂ ಹೆಚ್ಚು ಜನ ಹುತಾತ್ಮರಾಗಿದ್ದರು. ಈ ಹೋರಾಟದ ಪ್ರತೀಕ ಜಲಗಾಂವ ತಾಲೂಕಿನ ಪಾಲಕುರ್ತಿ ಗ್ರಾಮದಲ್ಲಿ ಶೋಷಿತ ವರ್ಗದ ವೀರ ಮಹಿಳೆ ಐಲಮ್ಮ. ಈ ಪ್ರದೇಶದ ದುಷ್ಟ ದೇಶಮುಖ, ವಿ ರಾಮಚಂದ್ರ ರೆಡ್ಡಿ, ಅವಳು ಮತ್ತು ಅವಳ ಕುಟುಂಬವು ಗೇಣಿದಾರರಾಗಿದ್ದ ಅವರ ಹೊಲದಿಂದ ಬಲವಂತವಾಗಿ ಬೆಳೆ ಕಟಾವು ಮಾಡಲು ತನ್ನ ಶಸ್ತ್ರಸಜ್ಜಿತ ಗೂಂಡಾಗಳನ್ನು ಕಳುಹಿಸಿದನು. ಆಂಧ್ರ ಮಹಾಸಭೆ ಮತ್ತು ಕೆಂಪು ಬಾವುಟದ ಬೆಂಬಲದೊಂದಿಗೆ ಹೋರಾಡಿ ಅಂತಿಮವಾಗಿ ತನ್ನ ಬೆಳೆ ಲೂಟಿಯನ್ನು ಆಕೆ ತಡೆಯುತ್ತಾಳೆ. ಅದು ಇಡೀ ಹುಲ್ಲುಗಾವಲನ್ನು ಸುಟ್ಟು ಹಾಕುವ ಕಿಡಿಯಾಗಿತ್ತು, ಪ್ರತಿರೋಧದ ಬೆಂಕಿ ಹರಡಿತು. ಊಳಿಗಮಾನ್ಯ ದಬ್ಬಾಳಿಕೆಯಿಂದ, ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯಿಂದ ವಿಮೋಚನೆಗಾಗಿ ನಡೆದ ಈ ಹೋರಾಟವು ನಿಜಾಮನ ಆಳ್ವಿಕೆಯನ್ನು ಬಹಳವಾಗಿ ದುರ್ಬಲಗೊಳಿಸಿತು. ಈ ಸಂಧರ್ಭದಲ್ಲಿ ಎಲ್ಲಿಯೂ ಆರ್ಯ ಸಮಾಜ ಮತ್ತು ಹಿಂದೂ ಮಹಾಸಭಾದ ಪತ್ತೆಯೇ ಇರಲಿಲ್ಲ. ಅಂದಿನ ಪ್ರಮುಖ ಕಮ್ಯುನಿಸ್ಟ್ ಸಂಘಟಕರೂ, ನಂತರ ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿಯೂ ಆಗಿದ್ದ ಪಿ. ಸುಂದರಯ್ಯ ಅವರು ಬರೆದ ಪುಸ್ತಕದಲ್ಲಿ ಈ ಭವ್ಯ ಇತಿಹಾಸ ಲಭ್ಯವಿದೆ.

ನಿಜಾಮರು ಭಾರತಕ್ಕೆ ಸೇರಲು ನಿರಾಕರಿಸಿದ್ದು ಇತಿಹಾಸದ ಸತ್ಯ. ರೈತರ ವಿಮೋಚನಾ ಹೋರಾಟದ ಮತ್ತು ಭಾರತ ಸರ್ಕಾರದ ಒತ್ತಡದಲ್ಲಿ, ಆತ ನವೆಂಬರ್ 1947 ರಲ್ಲಿ "ನಿಲುಗಡೆ ಒಪ್ಪಂದ"(ಸ್ಟಾಂಡ್‌ಸ್ಟಿಲ್ ಅಗ್ರಿಮೆಂಟ್) ಕ್ಕೆ ಸಹಿ ಹಾಕಿದರು. ಇದು ಕಾನೂನುಬದ್ಧವಾಗಿ ಆತನಿಗೆ ಒಂದು ವರ್ಷದ ಸಂಕ್ರಮಣದ ಸಮಯವನ್ನು ನೀಡಿತು. ಈ ಸಮಯದಲ್ಲಿ ವಿದೇಶಾಂಗ ವ್ಯವಹಾರಗಳು, ರಕ್ಷಣೆ ಮತ್ತು ಸಂವಹನಗಳು ಭಾರತ ಸರ್ಕಾರದ ನಿಯಂತ್ರಣದಲ್ಲಿರಬೇಕು. ಮತ್ತು ಆತನಿಗೆ ಆಂತರಿಕ ವ್ಯವಹಾರಗಳ ಮೇಲಿನ ನಿಯಂತ್ರಣಕ್ಕೆ ಮಾತ್ರ ಅನುಮತಿಯಿತ್ತು. ಪಟೇಲ್ ಗೃಹ ಸಚಿವರಾಗಿದ್ದರು. ರಾಜಿ ಮಾಡಿಕೊಂಡಿದ್ದು ಅವರೇ. ಮುಂದಿನ ಆರು ತಿಂಗಳೊಳಗೆ, ಪಟೇಲರು ತೆಲಂಗಾಣದಿಂದ ಭಾರತೀಯ ಸೈನ್ಯವನ್ನು ಹಿಂತೆಗೆದುಕೊಂಡು ರಜಾಕಾರರಿಗೆ ಕ್ಷೇತ್ರವನ್ನು ಮುಕ್ತಗೊಳಿಸಲಾಯಿತು. ನಿಜಾಮ ಈ ಅವಧಿಯನ್ನು ರೈತ ಹೋರಾಟದ ವಿರುದ್ಧ ಸಶಸ್ತ್ರ ಆಕ್ರಮಣ ಮಾಡಲು, ತನ್ನ ಸ್ವಂತ ಆಳ್ವಿಕೆಯನ್ನು ಗಟ್ಟಿಗೊಳಿಸಲು, ಪಾಕಿಸ್ತಾನದೊಂದಿಗೆ ರಹಸ್ಯ ಸಂಪರ್ಕಗಳನ್ನು ನಿರ್ವಹಿಸಲು ಬಳಸಿದರು – ಆದರೆ ಆತನಿಗೆ ಅಗತ್ಯವಾದ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಲು ಸಾಧ್ಯವಾಗಲಿಲ್ಲ. ಒಪ್ಪಂದವನ್ನು ಉಲ್ಲಂಘಿಸಿದ ಕಾರಣಕ್ಕಾಗಿ ಭಾರತ ಸರ್ಕಾರವು ಅಂತಿಮವಾಗಿ ಕಾರ್ಯಾಚರಣೆ ನಡೆಸಲು ನಿರ್ಧರಿಸಿದಾಗ, ಆತ ತುಂಬಾ ದುರ್ಬಲಗೊಂಡಿದ್ದು, ಭಾರತೀಯ ಸೇನೆಗೆ ಆತ ಶರಣಾಗಲು ಕೇವಲ ನಾಲ್ಕು ದಿನಗಳಷ್ಟೇ ಸಾಕಾಯಿತು. ಭಾರತದೊಂದಿಗೆ ಸೇರ್ಪಡೆಯ ದಸ್ತಾವೇಜಿಗೆ ಆತ ಸಹಿ ಹಾಕಿದರು. ಆದರೆ ನೆಹರು–ಪಟೇಲ್ ಜೋಡಿ ಆತನಿಗೆ 'ರಾಜ ಪ್ರಮುಖ್' ಎಂಬ ನಾಮಮಾತ್ರದ ಪಾತ್ರವನ್ನು ಮರಳಿಸಿತು – ಈ ಘಟನಾಕ್ರಮ('ಕ್ರೊನೋಲೊಜಿ') ಅಮಿತ್ ಶಾ ಅವರ ಕಥನ್ನದಲ್ಲಿ ಇಲ್ಲ. ಇದೊಂದು ವಿಚಿತ್ರ ರೀತಿಯ "ವಿಮೋಚನೆ" – ದಮನಕೋರನಿಗೆ 'ರಾಜಪ್ರಮುಖ' ಎಂಬ ಪುರಸ್ಕಾರ! ಸೇನೆಯು ತೆಲಂಗಾಣದಲ್ಲಿ ಉಳಿದುಕೊಂಡಿತು, ರೈತರ ಸಶಸ್ತ್ರ ಹೋರಾಟದ ಮೇಲೆ ಹರಿಹಾಯಲು. ಅದರ ದೌರ್ಜನ್ಯಗಳು ರಜಾಕಾರರಿಗಿಂತ ಕಡಿಮೆಯೇನೂ ಇರಲಿಲ್ಲ. 10,000 ಕ್ಕೂ ಹೆಚ್ಚು ಕಮ್ಯುನಿಸ್ಟರನ್ನು ಬಂಧನ ಶಿಬಿರಗಳಲ್ಲಿ ಅಮಾನವೀಯ ಪರಿಸ್ಥಿತಿಗಳಲ್ಲಿ



ಬಂಧಿಸಿಡಲಾಯಿತು ಮತ್ತು ಅಲ್ಲಿ ಅನೇಕರು ನಾಶವಾದರು. ಇನ್ನೂ 50,000 ದಷ್ಟು ಜನರು ಸೇನಾ ಶಿಬಿರಗಳಲ್ಲಿ ಕ್ರೂರ ಚಿತ್ರಹಿಂಸೆಗೆ ಗುರಿಯಾಗಿದ್ದರು. ರೈತರಿಂದ ನಿಜಾಮರ ಆಡಳಿತದ ವಿರುದ್ಧದ "ಗ್ರಾಮರಾಜ್ಯ"ದ, ವಿಮೋಚನೆಯ ಗಳಿಕೆಯನ್ನು ಭಾರತೀಯ ಸೇನೆಯು ಹೊಸಕಿ ಹಾಕಿತು. ನಿಜಾಮನು ತನ್ನ ಸಂಪತ್ತು ಮತ್ತು ತನ್ನ ಸ್ಥಾನಮಾನವನ್ನು ಉಳಿಸಿಕೊಂಡರೆ ಮತ್ತು ಊಳಿಗಮಾನ್ಯ ದಮನಕೋರರ ಆಳ್ವಿಕೆಯನ್ನು ಆಳ್ವಿಕೆಯನ್ನು ಪುನಃಸ್ಥಾಪಿಸಲು ಪ್ರಯತ್ನಿಸಿದರೆ, ಇತ್ತ ನಿಜಾಮನ ವಿರುದ್ಧದ ಹೋರಾಟಗಾರರಿಗೆ ಶಿಕ್ಷೆಯಾಯಿತು. ಇದು ತಿರುಮುರುಗಾದ "ವಿಮೋಚನೆ"ಯಾಗಿತ್ತು.

ಹಿಂದೂ ಮಹಾಸಭಾದ ಧ್ವಂದ್ವ ಪಾತ್ರ

ಆದರೆ ಅಮಿತ್ ಶಾ ಹೊಗಳಿದ ಆರ್ಯ ಸಮಾಜ ಮತ್ತು ಹಿಂದೂ ಮಹಾಸಭಾದ ಪಾತ್ರವೇನು? ನಿಜಾಮನ ವಿರುದ್ಧದ ಹೋರಾಟದಲ್ಲಿ ಅವರ ಪಾತ್ರವೇನೂ ಇರಲಿಲ್ಲ. ಆತ ಶರಣಾದ ನಂತರವೇ ಈ ಎರಡು ಸಂಘಟನೆಗಳು ರಜಾಕಾರರ ಹಿಂದಿನ ದೌರ್ಜನ್ಯಗಳಿಗೆ ಪ್ರತೀಕಾರವಾಗಿ ಮುಸ್ಲಿಮರ ವಿರುದ್ಧ ಕೋಮು ದಾಳಿಯ ಅಲೆಯನ್ನು ಪ್ರಾರಂಭಿಸಿದವು. ಪರಿಸ್ಥಿತಿಯನ್ನು ಅಂದಾಜು ಮಾಡಲು ಕೇಂದ್ರ ಸರ್ಕಾರವು "ಸದ್ಭಾವನಾ (ಗುಡ್ವಿಲ್) ಮಿಷನ್' ಅನ್ನು ಕಳುಹಿಸಿತು. ಇದಕ್ಕೆ ಪಂಡಿತ್ ಸುಂದರ್ ಲಾಲ್ ನೇತೃತ್ವ ವಹಿಸಿದ್ದರು. ಕೇವಲ ಮೂರು ಜಿಲ್ಲೆಗಳು ಮಾತ್ರ ಕೋಮುಗಲಭೆಯಿಂದ ಮುಕ್ತವಾಗಿವೆ ಎಂದು ಅವರು ತಮ್ಮ ವರದಿಯಲ್ಲಿ ತಿಳಿಸಿದ್ದರು. ಈ ಮೂರು ಜಿಲ್ಲೆಗಳು ಸಶಸ್ತ್ರ ವಿಮೋಚನಾ ಹೋರಾಟ ನಡೆದ ಸ್ಥಳಗಳು. ಈಗಿನ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿರುವ ಉಸ್ಮಾನಾಬಾದ್, ಗುಲ್ಬರ್ಗಾ, ಬೀದರ್ ಮತ್ತು ನಾಂದೇಡ್ ನಲ್ಲಿ ಪರಿಸ್ಥಿತಿ ಕೆಟ್ಟದಾಗಿತ್ತು. 'ಸುಂದರ್‌ಲಾಲ್ ವರದಿ' ಅಲ್ಪಸಂಖ್ಯಾತರಾಗಿದ್ದ ಗ್ರಾಮೀಣ ಪ್ರದೇಶಗಳಲ್ಲಿನ ಬಡ ಮುಸ್ಲಿಮರು ಮುಖ್ಯ ಬಲಿಪಶುಗಳು ಎಂಬ ವಾಸ್ತವತೆಯನ್ನು ವಿವರಿಸಿದೆ. ಸಾವಿರಾರು ಜನರನ್ನು ಕೊಂದರು, ಮಹಿಳೆಯರ ಮೇಲೆ ಅತ್ಯಾಚಾರ ಎಸಗಲಾಯಿತು, ಬಲವಂತವಾಗಿ ಹಣೆಯ ಮೇಲೆ ಹಚ್ಚೆ ಹಾಕುವ ಮೂಲಕ ಮತಾಂತರಗಳನ್ನು ಮಾಡಲಾಯಿತು. ಇದನ್ನು ಎಸಗಿದ ಅಪರಾಧಿಗಳು ಯಾರು? "ಶೋಲಾಪುರದ ಸುಪರಿಚಿತ ಹಿಂದೂ ಸಂಘಟನೆಗೆ ಸೇರಿದ ಹಲವಾರು ಶಸ್ತ್ರಸಜ್ಜಿತ ವ್ಯಕ್ತಿಗಳು ಈ ಗಲಭೆಗಳಲ್ಲಿ ಭಾಗವಹಿಸಿದ್ದಾರೆ ಮತ್ತು ಕೆಲವು ಸಂದರ್ಭಗಳಲ್ಲಿ ಅವರೇ ಗಲಭೆಕೋರರನ್ನು ಮುನ್ನಡೆಸಿದ್ದಾರೆ ಎಂಬ ಖಚಿತ ಸೂಚನೆಗಳು ನಮಗೆ ಸಿಕ್ಕಿವೆ" ಎಂದು ವರದಿಯಲ್ಲಿ ಹೇಳಲಾಗಿದೆ. ಯಾವುದು ಈ "ಸುಪರಿಚಿತ ಹಿಂದೂ ಸಂಘಟನೆ"?

ಆ ಪ್ರದೇಶಗಳಲ್ಲಿ ಆ ಸಮಯದಲ್ಲಿ ಹಿಂದೂ ಮಹಾಸಭಾ ಮತ್ತು ಆರ್ಯ ಸಮಾಜ ಈ ಎರಡು ಸಂಘಟನೆಗಳು ಕಾರ್ಯನಿರ್ವಹಿಸುತ್ತಿದ್ದವು. ಕೋಮುಗಲಭೆಗೆ ಕಾರಣರಾದ ಯಾರನ್ನೂ ಬಂಧಿಸಲಿಲ್ಲ. ವರದಿಯು ಕಮ್ಯುನಿಸ್ಟರನ್ನು ಉಲ್ಲೇಖಿಸಿದೆ, ಆದರೆ ಅವರ ಸಶಸ್ತ್ರ ಹೋರಾಟವನ್ನು ಕೋಮು ಗಲಭೆಗಳೊಂದಿಗೆ ಗೊಂದಲ ಮಾಡಿಕೊಂಡಿದೆ.

ಹಿಂದೂ ಮಹಾಸಭಾದ ಪಾತ್ರಕ್ಕೆ ಮತ್ತೊಂದು ಅಷ್ಟೇ –ಪುಟ 15 ಕ್ಕೆ

"ಮೋದಿಯವರು ಅಷ್ಟೇನೂ ಕೆಟ್ಟವರಲ್ಲ"– ವ್ಯಂಗ್ಯಚಿತ್ರ: ಮಿಕ ಅಜೀಜ್



ಮಮತಾ ಬ್ಯಾನರ್ಜಿಯವರ ಶೋಧಗಳು

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಇತ್ತೀಚೆಗೆ ಕೆಲವು ಹೊಸ ಆವಿಷ್ಕಾರಗಳನ್ನು ಮಾಡುತ್ತಿದ್ದಾರೆ. ಮೊದಲಿಗೆ, ಆರ್‌ಎಸ್‌ಎಸ್ ಅಷ್ಟೇನೂ ಕೆಟ್ಟದ್ದಲ್ಲ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಇದನ್ನು ಅನುಸರಿಸಿ, ಅವರು ಮತ್ತೊಂದು ಆವಿಷ್ಕಾರವನ್ನು ಮಾಡಿದ್ದಾರೆ – ಸಿಬಿಐ ಮತ್ತು ಜಾರಿ ನಿರ್ದೇಶನಾಲಯದಂತಹ ಕೇಂದ್ರೀಯ ಸಂಸ್ಥೆಗಳ ದುರುಪಯೋಗದ ಹಿಂದೆ ಪ್ರಧಾನಿ ನರೇಂದ್ರ ಮೋದಿ ಇದ್ದಾರೆ ಎಂದು ಅವರು ನಂಬುವುದಿಲ್ಲವಂತೆ. ಶಾಸಕಾಂಗ ಸಭೆಯಲ್ಲಿ ಅವರು, "ಈ ಏಜೆನ್ಸಿಗಳು ಇನ್ನು ಮುಂದೆ ಪ್ರಧಾನಿ ಕಚೇರಿ (ಪಿಎಂಒ)) ಅಡಿಯಲ್ಲಿ ಇರುವುದಿಲ್ಲ ಎಂಬುದು ನಿಮಗೆ ತಿಳಿದಿರಲಿಕ್ಕಿಲ್ಲ. ಅವರು ಈಗ ಕೇಂದ್ರ ಗೃಹ ಸಚಿವಾಲಯದಿಂದ ನಿಯಂತ್ರಿಸಲ್ಪಡುತ್ತಾರೆ". ಸಿಬಿಐ ಇನ್ನು ಮುಂದೆ ಪ್ರಧಾನಿ ಕಚೇರಿಯಲ್ಲಿಲ್ಲ ಎಂಬ ತೀರ್ಮಾನಕ್ಕೆ ಅವರು ಹೇಗೆ ಬಂದಿದ್ದಾರೆ ಎಂಬುದು ತಿಳಿದಿಲ್ಲ, ಏಕೆಂದರೆ ಅಧಿಕೃತವಾಗಿ ಸಿಬಿಐ ಸಿಬ್ಬಂದಿ ಮತ್ತು ಪಿಎಂಒ ಅಡಿಯಲ್ಲಿ ತರಬೇತಿ ಇಲಾಖೆ ಅಡಿಯಲ್ಲಿದೆ. ಹೀಗಾಗಿ, ವಾಸ್ತವವನ್ನು ತಪ್ಪಾಗಿ ಹೇಳುವ ಮೂಲಕ ಪ್ರಧಾನ ಮಂತ್ರಿಯನ್ನು ದೋಷಮುಕ್ತಗೊಳಿಸಿದರು.

ಉಪರಾಷ್ಟ್ರಪತಿ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿಗೆ ಸಹಾಯ ಮಾಡಲು ಟಿಎಂಸಿ ನಾಯಕಿ ತೆಗೆದುಕೊಂಡ ಮೂರ್ತರಾಜಕೀಯ ಹೆಜ್ಜೆಯ ನಂತರ ಈ ಸಮಾಧಾನ ಪಡಿಸುವ ಹೇಳಿಕೆಗಳು ಬಂದಿವೆ. ಉಪರಾಷ್ಟ್ರಪತಿ ಚುನಾವಣೆಗೆ ಸಾಮಾನ್ಯ ಅಭ್ಯರ್ಥಿಯನ್ನು ಹಾಕಲು ಪ್ರತಿಪಕ್ಷಗಳು ನಿರ್ಧರಿಸಿದಾಗ, ಟಿಎಂಸಿ ದೂರವಿರಲು ನಿರ್ಧರಿಸಿತು. ಸರಿಯಾಗಿ ಸಮಾಲೋಚನೆ ನಡೆಸಿಲ್ಲ ಎಂಬ ಕುಂಟು ನೆಪ ಹೇಳಿತು. ಆಗ ಪಶ್ಚಿಮ ಬಂಗಾಳದ ಗವರ್ನರ್ ಆಗಿದ್ದ ಜಗದೀಪ್ ಧನಕರ್ ಬಿಜೆಪಿಯ ಅಭ್ಯರ್ಥಿ ಎಂಬುದು ಅವರ ಈ ನಿರ್ಧಾರವನ್ನು ಅತ್ಯಂತ ವಿಲಕ್ಷಣಗೊಳಿಸಿದೆ. ಮೂರು ವರ್ಷಗಳ ಕಾಲ ತನ್ನ ಮತ್ತು ತನ್ನ ಸರ್ಕಾರವನ್ನು ಪೀಡಿಸಿದ ವ್ಯಕ್ತಿಯ ವಿರುದ್ಧ ವಿರೋಧ ಪಕ್ಷದ ಅಭ್ಯರ್ಥಿಯನ್ನು ಬೆಂಬಲಿಸದಿರಲು ಮಮತಾ ಬ್ಯಾನರ್ಜಿ ಏಕೆ ನಿರ್ಧರಿಸಿದರು ಎಂಬುದು ಅವರ ಬೆಂಬಲಿಗರೂ ವಿವರಿಸಲು ಸಾಧ್ಯವಿಲ್ಲದ ಸಂಗತಿ.

ಆರೆಸ್ಸೆಸ್ ಮತ್ತು ಪ್ರಧಾನ ಮಂತ್ರಿಯ ಬಗ್ಗೆ ಹಠಾತ್ ಮೃದುತ್ವವು ಬಹುಶಃ ಮಮತಾ ಬ್ಯಾನರ್ಜಿ ಮತ್ತು ಟಿಎಂಸಿ ಸರ್ಕಾರವು ಎದುರಿಸುತ್ತಿರುವ ಗಂಭೀರ ಇಕ್ಕಟ್ಟಿನಿಂದ ಹುಟ್ಟಿಕೊಂಡಿದೆ. ಪಾರ್ಥ ಚಟರ್ಜಿ ಪ್ರಕರಣವು ಸರ್ಕಾರದಲ್ಲಿನ ಹೊಲಸು ಭ್ರಷ್ಟಾಚಾರವನ್ನು ಬಯಲಿಗೆ ತಂದಿದೆ ಮತ್ತು ಸಾರ್ವಜನಿಕರಲ್ಲಿ ವ್ಯಾಪಕ ಅಸಮಾಧಾನ ಮತ್ತು ಕೋಪವನ್ನು ಉಂಟುಮಾಡಿದೆ. ಬಹುಕಾಲದಿಂದ ಇದ್ದ ಅನುಮಾನ ಅಥವಾ ಗೊತ್ತಿದ್ದದ್ದು ಈಗ ಜನರ ಮುಂದೆ ಕಣ್ಣಿಗೆ ಕಟ್ಟುವಂತೆ ಹೊರಬಂದಿದೆ. ಟಿಎಂಸಿ ಕಪಾಟಿನಿಂದ ಇನ್ನಷ್ಟು ಅಸ್ಥಿಪಂಜರಗಳು ಹೊರ ಉರುಳುತ್ತಿವೆ. ಕಲ್ಲಿದ್ದಲು ಗಣಿಗಾರಿಕೆ ಹಗರಣಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಇ.ಡಿ. ತನಿಖೆಗಳಿಂದ ಮಮತಾ ಬ್ಯಾನರ್ಜಿ ಆಘಾತಕ್ಕೊಳಗಾಗಿದ್ದಾರೆ, ಇದರಲ್ಲಿ ಅವರ ಸೋದರಳಿಯ ಮತ್ತು ರಾಜಕೀಯ ಉತ್ತರಾಧಿಕಾರಿ ಅಭಿಷೇಕ್ ಬ್ಯಾನರ್ಜಿ ಮತ್ತು ಅವರ ಕುಟುಂಬದ ಸದಸ್ಯರ ವಿಚಾರಣೆ ನಡೆಸಲಾಗುತ್ತಿದೆ.

ಆರೆಸ್ಸೆಸ್‌ನಲ್ಲಿ ಮತ್ತು ನರೇಂದ್ರ ಮೋದಿಯವರಲ್ಲಿ ಸದ್ಗುಣವನ್ನು ಕಂಡುಕೊಳ್ಳುವುದು ಟಿಎಂಸಿಯ ಭ್ರಷ್ಟ–ಅಪರಾಧ ಕೂಟವನ್ನು ಹೇಗಾದರೂ ರಕ್ಷಿಸಿಕೊಳ್ಳಬೇಕಾದ ಟಿಎಂಸಿ ಮುಖ್ಯಸ್ಥರ ಹತಾಶೆಯನ್ನು ಸೂಚಿಸುತ್ತದೆ. ಆದಾಗ್ಯೂ, ಸಂಘ–ಬಿಜೆಪಿ ಕೂಟದೊಂದಿಗೆ ಇಂತಹ ಮೃದು ಭಾವ ಕಂಡು ಆಶ್ಚರ್ಯಪಡಬೇಕಾಗಿಲ್ಲ. ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಕಮ್ಯುನಿಸ್ಟ್ ವಿರೋಧಿ ಶಕ್ತಿಯಾಗಿ ಬೆಳೆದದ್ದು, ವಾಜಪೇಯಿ ಸರ್ಕಾರದಲ್ಲಿ ಮಮತಾ ಬ್ಯಾನರ್ಜಿ ಸಂಪುಟದಲ್ಲಿ ಮಂತ್ರಿಯಾಗಿರುವುದು ಸೇರಿದಂತೆ ಬಿಜೆಪಿಯೊಂದಿಗಿನ ಮೈತ್ರಿಯ ನೆರಳಲ್ಲಿ ಎಂಬುದು ದಾಖಲಾಗಿರುವ ಸಂಗತಿ.

ಆರೆಸ್ಸೆಸ್ ಮತ್ತು ಪ್ರಧಾನ ಮಂತ್ರಿಯ ಬಗ್ಗೆ ಹಠಾತ್ ಮೃದುತ್ವವು ಬಹುಶಃ ಮಮತಾ ಬ್ಯಾನರ್ಜಿ ಮತ್ತು ಟಿಎಂಸಿ ಸರ್ಕಾರವು ಎದುರಿಸುತ್ತಿರುವ ಗಂಭೀರ ಇಕ್ಕಟ್ಟಿನಿಂದ ಹುಟ್ಟಿಕೊಂಡಿದೆ. ಆರೆಸ್ಸೆಸ್‌ನಲ್ಲಿ ಮತ್ತು ನರೇಂದ್ರ ಮೋದಿಯವರಲ್ಲಿ ಸದ್ಗುಣವನ್ನು ಕಂಡುಕೊಳ್ಳುವುದು ಟಿಎಂಸಿಯ ಭ್ರಷ್ಟ–ಅಪರಾಧ ಕೂಟವನ್ನು ಹೇಗಾದರೂ ರಕ್ಷಿಸಿಕೊಳ್ಳಬೇಕಾದ ಟಿಎಂಸಿ ಮುಖ್ಯಸ್ಥರ ಹತಾಶೆಯನ್ನು ಸೂಚಿಸುತ್ತದೆ. ಈ ಹೇಳಿಕೆಗಳು ಹಲವಾರು ಜನರಿಗೆ, ಅವರನ್ನು ಫ್ಯಾಸಿಸ್ಟ್ ವಿರೋಧಿ ಹೋರಾಟಗಾರ್ತಿ ಎಂದು ಕಂಡಿರುವ ಕೆಲವು ಎಡಪಂಥೀಯರಿಗೂ ಮುಜುಗರ ವನ್ನು ಉಂಟುಮಾಡಿರಬೇಕು. ಆದರೆ ಸಿಪಿಐ(ಎಂ) ಮತ್ತು ಎಡರಂಗಕ್ಕೆ ಅಂತಹ ಭ್ರಮೆಗಳೇನೂ ಇರಲಿಲ್ಲ.

ಮಮತಾ ಬ್ಯಾನರ್ಜಿಯವರ ಇತ್ತೀಚಿನ ಹೇಳಿಕೆಗಳು ಹಲವಾರು ಜನರಿಗೆ, ಅವರನ್ನು ಫ್ಯಾಸಿಸ್ಟ್ ವಿರೋಧಿ ಹೋರಾಟಗಾರ್ತಿ ಎಂದು ಕಂಡಿರುವ ಕೆಲವು ಎಡಪಂಥೀಯರಿಗೂ ಮುಜುಗರವನ್ನು ಉಂಟುಮಾಡಿರಬೇಕು. ಆದರೆ ಸಿಪಿಐ(ಎಂ) ಮತ್ತು ಎಡರಂಗಕ್ಕೆ ಅಂತಹ ಭ್ರಮೆಗಳೇನೂ ಇರಲಿಲ್ಲ. ಅವರು ಬೃಹತ್ ಭ್ರಷ್ಟಾಚಾರದ ತಪ್ಪಿತಸ್ಥರಿಗೆ ಶಿಕ್ಷೆ ಮತ್ತು ಕ್ರಿಮಿನಲ್–ಭ್ರಷ್ಟ ಕೂಟವನ್ನು ಕೊನೆಗೊಳಿಸಬೇಕೆಂದು ಒತ್ತಾಯಿಸಿ ಬೆಳೆಯುತ್ತಿರುವ ಬೃಹತ್ ಪ್ರತಿಭಟನೆಗಳಿಗೆ ನೇತೃತ್ವ ಕೊಡುತ್ತಿದ್ದಾರೆ.

('ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯ)



ರಾಜ್ಯಪಾಲರು ಕೇಂದ್ರ ಸರಕಾರದ ಏಜೆಂಟರಂತೆ ಕೆಲಸ ಮಾಡಬಾರದು–ಪಿಣರಾಯಿ ವಿಜಯನ್

ಕೇರಳದ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ರವರ ಕ್ರಮಗಳು ಎಲ್ಲಾ ಸಾಂವಿಧಾನಿಕ ಮಿತಿಗಳನ್ನು ಮೀರಿ ಹೋಗುತ್ತಿವೆ, ಅವು ರಾಜ್ಯಪಾಲರ ಹುದ್ದೆಯ ಘನತೆಗೆ ಸರಿಹೊಂದುವುದಿಲ್ಲ. ರಾಜ್ಯಪಾಲರುಗಳು ಕೇಂದ್ರ ಸರಕಾರದ ಏಜೆಂಟರಂತೆ ಕೆಲಸ ಮಾಡಬಾರದು ಎಂದು ರಾಜ್ಯದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಟೀಕಿಸಿದ್ದಾರೆ. ಸಪ್ಟೆಂಬರ್ 20 ರಂದು ರಾಜ್ಯಪಾಲರು ತಮ್ಮ ಅಧಿಕೃತ ನಿವಾಸವಾದ 'ರಾಜಭವನ'ದಲ್ಲೇ ಒಂದು ಪತ್ರಿಕಾಗೋಷ್ಠಿ ನಡೆಸಿ ರಾಜ್ಯ ಸರ್ಕಾರ ಮತ್ತು ಮುಖ್ಯಮಂತ್ರಿ ವಿರುದ್ಧ ಸರಣಿ ಆರೋಪಗಳನ್ನು ಮಾಡಿದ್ದರು. ಇದಕ್ಕೆ ತಕ್ಕ ಉತ್ತರ ನೀಡಲು ಮುಖ್ಯಮಂತ್ರಿಗಳು ಕರೆದ ಪತ್ರಿಕಾಗೋಷ್ಠಿಯಲ್ಲಿ ಅವರು ಈ ಟೀಕೆ ಮಾಡಿದರು

ಸಂವಿಧಾನದ ಪ್ರಕಾರ ರಾಜ್ಯಪಾಲರು ರಾಜ್ಯದ ಸಂವಿಧಾನಿಕ ಮುಖ್ಯಸ್ಥರಷ್ಟೇ, ಕಾರ್ಯಕಾರಿ ಅಧಿಕಾರ ಚುನಾಯಿತ ಸರಕಾರದ್ದು, ರಾಜ್ಯಪಾಲರು ರಾಜ್ಯ ಸಂಪುಟದ ನೆರವು ಮತ್ತು ಸಲಹೆಯಯಂತೆ ಕೆಲಸ ಮಾಡಬೇಕು ಎಂದು ಸಂವಿಧಾನ ವಿಧಿಸುತ್ತದೆ, ರಾಜ್ಯಪಾಲರಿಗೆ ಸಂಪುಟದ ನಿರ್ಧಾರವನ್ನು ತಿರಸ್ಕರಿಸುವ ಹಕ್ಕು ಇಲ್ಲ ಎಂದು ಸುಪ್ರಿಂ ಕೋರ್ಟ್ ಕೂಡ ಸ್ಪಷ್ಟವಾಗಿ ಹೇಳಿದೆ; ಅವರೇನೂ ಕೇಂದ್ರ ಸರಕಾರದ ನೌಕರನಲ್ಲ ಅಥವ ಏಜೆಂಟ್ ಅಲ್ಲ ಎಂದೂ ಅದು ಹೇಳಿದೆ ಎಂದು ಪಿಣರಾಯಿ ವಿಜಯನ್ ನೆನಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯಪಾಲರು ಆರ್‌ಎಸ್‌ಎಸ್ ಮೇಲೆ ಹೊಗಳಿಕೆಯ ಮಳೆಗರೆದರು, ಸಂವಿಧಾನಿಕ ಸ್ಥಾನದಲ್ಲಿರುವ ಅವರು ತಾನೊಬ್ಬ ಆರೆಸ್ಸೆಸ್ ಬೆಂಬಲಿಗ ಎಂದು ಹೇಳುವುದು ಸರಿಯೇ ಎಂದು ಅವರು ಮತ್ತು ಅವರ ಸಹಾಯಕರು ಸ್ಪಷ್ಟಪಡಿಸಬೇಕಾಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದರು. ತಾನು 1986ರಿಂದ ಅದರ ಜೊತೆಗಿದ್ದೇನೆ ಎಂದೂ ಅವರು ಹೇಳಿದರು. 1963ರಲ್ಲಿ ಆಗಿನ ಪ್ರಧಾನ ಮಂತ್ರಿ ನೆಹರೂರವರು ಗಣತಂತ್ರದಿನದ ಪರೇಡಿನಲ್ಲಿ ಭಾಗವಹಿಸಲು ಆರೆಸ್ಸೆಸ್‌ಗೆ ಆಹ್ವಾನ ನೀಡಿದ್ದರು ಎನ್ನುತ್ತ ಅದರೊಂದಿಗೆ ತನ್ನ ಸಂಪರ್ಕವನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದರು. ಇದು ನಿಜವೇ? ಆರೆಸ್ಸೆಸ್ ಹೀಗೆ ಗಣತಂತ್ರ ದಿನದ ಪರೇಡಿನಲ್ಲಿ ಭಾಗವಹಿಸಿದ ದಾಖಲೆಯೇನೂ ಇಲ್ಲ ಎಂದು 2018ರಲ್ಲಿ ಇಂಡಿಯಾ ಟುಡೇ ಪತ್ರಿಕೆಯ ಆರ್‌ಟಿಐ ಪ್ರಶ್ನೆಗೆ ಉತ್ತರಿಸುತ್ತ ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಗೃಹ ಮಂತ್ರಾಲಯವೇ ಹೇಳಿದೆ. ಬಹುಶಃ ಈ ಸುಳ್ಳು ಮಾಹಿತಿಯನ್ನು ಅವರು ಸಂಘ ಪರಿವಾದ ವಾಟ್ಸ್ ಆಪ್ ಗುಂಪುಗಳಿಂದ ಸಂಗ್ರಹಿಸಿರಬೇಕು ಎಂದು ವಿಜಯನ್ ವ್ಯಂಗ್ಯವಾಡಿದರು.


ಆರಿಫ್ ಮಹಮ್ಮದ್ ಖಾನ್ ಅವರು ಆಗ ವಿ.ಪಿ. ಸಿಂಗ್ ರವರ ಕೇಂದ್ರ ಸಂಪುಟದಲ್ಲಿ ಮಂತ್ರಿಗಳಾಗಿದ್ದರು. 1990ರಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಆ ಸರಕಾರವನ್ನು ಉರುಳಿಸಿದರು. ಆರೆಸ್ಸೆಸ್ ಮಂಡಲ ಆಯೋಗದ ಪ್ರಶ್ನೆಯನ್ನೆತ್ತಿ ಅವರಿದ್ದ ಸರಕಾರವನ್ನು ಪದಚ್ಯುತಗೊಳಿಸಿತ್ತು. ಅಂದರೆ ಅವರು ತಾನು ಮಂತ್ರಿಯಾಗಿದ್ದ ಸರಕಾರವನ್ನೇ ಉರುಳಿಸಿದವರೊಂದಿಗೆ ಸಂಪರ್ಕದಲ್ಲಿದ್ದರು ಎಂದು ಪ್ರಕಟಪಡಿಸುತ್ತಿದ್ದಾರೆಯೇ ಎಂದು ಮುಖ್ಯಮಂತ್ರಿಗಳು ಪ್ರಶ್ನಿಸಿದರು.

ಕೇರಳದ ಸಮಾಜ ಮತ್ತು ಎಡಪಂಥೀಯರಿಗೆ ಆರೆಸ್ಸೆಸ್ ಬಗ್ಗೆ ಒಂದು ಖಚಿತವಾದ ನಿಲುವಿದೆ. ಅದು ಕೋಮುವಾದ, ದ್ವೇಷ ಮತ್ತು ಸಂಕುಚಿತವಾದದ ಪ್ರತಿಪಾದಕ ಎಂದು ಪರಿಗಣಿಸುತ್ತಾರೆ. ಅದನ್ನು ಗಾಂಧೀಜಿಯ ಹತ್ಯೆಯಾದಾಗ ನಿಷೇಧಿಸಲಾಗಿತ್ತು. ಕೇರಳದ ರಾಜಕೀಯ ಕೊಲೆಗಳ ಬಗ್ಗೆ ಚಿಂತಿತರಾಗಿರುವ ರಾಜ್ಯಪಾಲರು ಈ ಕೊಲೆಗಳು, ಸಂಘರ್ಷಗಳಲ್ಲಿ ಸದಾ ಭಾಗಿಯಾಗಿದ್ದ ಆರೆಸ್ಸೆಸ್ಸನ್ನು ವೈಭವೀಕರಿಸುತ್ತಿದ್ದಾರೆ. ಪ್ರಜಾಪ್ರಭುತ್ವದ ಪ್ರಜ್ಞೆ ಮತ್ತು ಸಂವಿಧಾನವು ಎತ್ತಿಹಿಡಿದ ಮೂಲ ಮೌಲ್ಯಗಳಲ್ಲಿ ನಂಬಿಕೆ ಹೊಂದಿರುವ ಯಾರೂ ಇದನ್ನು ಒಪ್ಪಲು ಸಾಧ್ಯವಿಲ್ಲ ಎಂದು ವಿಜಯನ್ ಹೇಳಿದರು.

ಆರೆಸ್ಸೆಸ್‌ನ ಆರು ಒಟಿಸಿಗಳಲ್ಲಿ ತಾನು ಮುಖ್ಯ ಅತಿಥಿಯಾಗಿದ್ದೆ ಎಂದು ರಾಜ್ಯಪಾಲರು ತಮ್ಮ ಪತ್ರಿಕಾಗೋಷ್ಠಿಯಲ್ಲಿ ಬೆನ್ನು ತಟ್ಟಿಕೊಂಡರು. ಈ ಒಟಿಸಿ (ಆಫೀಸರ್ ಟ್ರೈನಿಂಗ್ ಕ್ಯಾಂಪ್)ಗಳು ಆರೆಸ್ಸೆಸ್‌ನ ಸಂಘಟನಾ ತರಬೇತಿ ಪ್ರಕ್ರಿಯೆಯಲ್ಲಿ ಬಹಳ ಮಹತ್ವ ಪಡೆದಿವೆ. ಇಂತಹ ಮೊದಲನೆ, ಎರಡನೇ ಮತ್ತು ಮೂರನೇ ಹಂತದ ಒಟಿಸಿಗಳನ್ನು ಪೂರ್ಣಗೊಳಿಸಿದ ವ್ಯಕ್ತಿಗಳು ಕೇರಳದ ಹಲವು ಕೊಲೆ ಪ್ರಕರಣಗಳಲ್ಲಿ ಶಿಕ್ಷೆಗೆ ಗುರಿಯಾಗಿದ್ದಾರೆ ಎಂದು ನೆನಪಿಸಿದ ಮುಖ್ಯಮಂತ್ರಿಗಳು ಈ ರಾಜ್ಯಪಾಲರು ಈಗ ಏನು ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂಬುದಕ್ಕೆ ಹೆಚ್ಚಿನ ಸಾಕ್ಷ್ಯ ಬೇಕೇ ಎಂದು ಖಾರವಾಗಿ ಪ್ರಶ್ನಿಸಿದರು.

ಮೂರು ವರ್ಷಗಳ ಹಿಂದೆ ಕಣ್ಣೂರಿನಲ್ಲಿ ನಡೆದ 'ಇತಿಹಾಸ ಮಹಾಧಿವೇಶನ'ದಲ್ಲಿ ನಡೆದ ಘಟನೆಯ ಬಗ್ಗೆ ರಾಜ್ಯಪಾಲರು ಭಾವುಕರಾಗಿ ಮಾತಾಡಿದ್ದಾರೆ. ಪೌರತ್ವವನ್ನು ಧರ್ಮಕ್ಕೆ ಜೋಡಿಸುವ ಸಿಎಎ ವಿರುದ್ಧ ಪ್ರತಿಭಟನೆಗಳು ನಡೆಯುತ್ತಿರುವಾಗಲೇ ಈ ಕಾರ್ಯಕ್ರಮ ನಡೆದಿತ್ತು. ಅದರಲ್ಲಿ ಭಾಗವಹಿಸಿದ್ದ ಪ್ರಸಿದ್ಧ ಇತಿಹಾಸಕಾರ ಪ್ರೊ.ಇರ್ಫಾನ್ ಹಬೀಬ್ ಹಿಂದುತ್ವದ ಅಜೆಂಡಾವನ್ನು ಬಯಲಿಗೆಳೆದರು. ರಾಜ್ಯಪಾಲರು ಅಲ್ಲಿ ಸಿಎಎ ಪರವಾಗಿ ಮಾತಾಡಿದಾಗ ಸಹಜವಾಗಿ ಅಧ್ಯಯನಶೀಲ ಸಭಿಕರಿಂದ ವಿರೋಧಗಳು ವ್ಯಕ್ತವಾದವು. ಅಂತರ್ರಾಷ್ಟ್ರೀಯ ಖ್ಯಾತಿಯ ಇತಿಹಾಸಕಾರರನ್ನು ಈ ರಾಜ್ಯಪಾಲ 'ಗೂಂಡಾ' ಎಂದು ಕರೆದಿದ್ದಾರೆ, 92 ವರ್ಷದ ಅವರು ತನ್ನ ಕೊಲೆಗೆ ಪ್ರಯತ್ನಿಸಿದವರು ಎಂಬ ಹಾಸ್ಯಾಸ್ಪದ ಆರೋಪ ಮಾಡಿದ್ದಾರೆ. ಅದೇ ರೀತಿಯಲ್ಲಿ ಇತಿಹಾಸವನ್ನು ತಿರುಚುವುದನ್ನು ವಿರೋಧಿಸುತ್ತ ಬಂದಿರುವ ಕಣ್ಣೂರು

ಪುಟ 15 ಕ್ಕೆ



ಯುರೋಪಿನ ಆರ್ಥಿಕ ಆತ್ಮಹತ್ಯೆ

ಉಕ್ರೇನ್ ಯುದ್ಧದಲ್ಲಿ ಅಮೆರಿಕಾಕ್ಕೆ ತನ್ನ ನಿಷ್ಠೆಯನ್ನು ಪ್ರದರ್ಶಿಸುವ ಭರದಲ್ಲಿ ಯೂರೋಪ್ ಆರ್ಥಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದೆ. ಆರ್ಥಿಕವಾಗಿ ಮಾತ್ರವಲ್ಲ; ಅದರ ರಾಜಕೀಯ ಪರಿಣಾಮಗಳೂ ವಿನಾಶಕಾರಿಯಾಗಿರುತ್ತವೆ: ಯೂರೋಪನ್ನು ಅದು ಬಲಪಂಥದತ್ತ ತಳ್ಳುವುದು ಮಾತ್ರವಲ್ಲದೆ, ಫ್ಯಾಸಿಸಂನ ಸನಿಹಕ್ಕೂ ತಳ್ಳುತ್ತದೆ. ಇಟೆಲಿಯಲ್ಲಿ ಆಗಲೇ ಇದು ಕಾಣ ಬಂದಿದೆ. ಮಾತುಕತೆಯ ಮೂಲಕ ಇತ್ಯರ್ಥಕ್ಕಾಗಿ ಅಮೆರಿಕಾದಿಂದ ಸ್ವತಂತ್ರವಾದ ಒಂದು ನಿಲುಮೆಯನ್ನು ತಳೆದು ಯುರೋಪ್ ಎಷ್ಟು ಬೇಗ ಕಾರ್ಯಪ್ರವೃತ್ತವಾಗುತ್ತದೆಯೋ, ಸಂಬಂಧಪಟ್ಟ ಎಲ್ಲರಿಗೂ ಅಷ್ಟು ಒಳ್ಳೆಯದು.

ಪ್ರೊ. ಪ್ರಭಾತ್ ಪಟ್ನಾಯಕ್ **ಅನು: ಕೆ.ಎಂ.ನಾಗರಾಜ್**

ಉಕ್ರೇನನ್ನು ಬೆಂಬಲಿಸುತ್ತಿರುವ ಪಾಶ್ಚಾತ್ಯ ದೇಶಗಳು ರಷ್ಯಾವನ್ನು ನಿರ್ಬಂಧಿಸಿವೆ. ಪ್ರತೀಕಾರವಾಗಿ ರಷ್ಯಾ, ಯುರೋಪಿಗೆ ನೈಸರ್ಗಿಕ ಅನಿಲದ ಪೂರೈಕೆಯನ್ನು ನಿಲ್ಲಿಸಿದೆ. ಚಳಿ ಅಂದರೆ ಯೂರೋಪಿನ ಚಳಿಯೇ. ಚಳಿಗಾಲದಲ್ಲಿ ಜನರನ್ನು ಗಡ ಗಡ ನಡುಗಿಸುತ್ತಿತ್ತು. ಈ ಅನಿಲದ ಕೊರತೆಯಿಂದಾಗಿ ಜನ ಈಗ ಇನ್ನೂ ಹೆಚ್ಚು ನಡುಗುವಂತಾಗಿದೆ. ಅತಿ ಕಡಿಮೆ ವೆಚ್ಚದಲ್ಲಿ ಯೂರೋಪಿನ ಜನರನ್ನು ಬೆಚ್ಚಗೆ ಇಟ್ಟಿದ್ದ ಈ ನೈಸರ್ಗಿಕ ಅನಿಲವು ರಷ್ಯಾದಿಂದ ಪೈಪ್ ಮೂಲಕ ಸರಬರಾಜಾಗುತ್ತಿತ್ತು. ಗೃಹ ಬಳಕೆಗೆ ಮಾತ್ರವಲ್ಲದೆ ವ್ಯಾಪಾರ, ವಾಣಿಜ್ಯ, ಮುಂತಾದ ಹಲವು ಹತ್ತು ಉದ್ದೇಶಗಳಿಗಾಗಿ ಬಳಕೆಯಾಗುತ್ತಿದ್ದ ಈ ಅನಿಲದ ಸರಬರಾಜನ್ನು ರಷ್ಯಾ ಬಂದ್ ಮಾಡಿದ್ದರಿಂದಾಗಿ ಅನೇಕಾನೇಕ ಉದ್ದಿಮೆಗಳು ಮುಚ್ಚುತ್ತವೆ. ವರಮಾನವನ್ನು ಕಳೆದುಕೊಂಡ ಕೆಲಸಗಾರರ ಜೀವನ ಮೂರಾಬಟ್ಟೆಯಾಗುತ್ತದೆ. ಬಡತನ ಹೆಚ್ಚುತ್ತದೆ.

ಅನಿಲದ ಸರಬರಾಜನ್ನು ಬಂದ್ ಮಾಡಿದ್ದರಿಂದಾಗಿ ಯೂರೋಪಿನ ಮೇಲೆ ಬೀಳುವ ಪರಿಣಾಮಗಳು ಕೇವಲ ತತ್‌ಕ್ಷಣದವು ಎನ್ನುವಂತಿಲ್ಲ. ಈ ಪ್ರತಿಕೂಲ ಪರಿಣಾಮಗಳು ತೀವ್ರಗೊಳ್ಳುವ ಅಪಾಯವಿದೆ. ಯುರೋಪಿನಿಂದ ಈಗಾಗಲೇ ಬಂಡವಾಳವು ಅಮೆರಿಕಾದೆಡೆಗೆ ಸ್ಥಳಾಂತರಗೊಳ್ಳುತ್ತಿದೆ. ವೇಗ ಪಡೆಯುತ್ತಿರುವ ಬಂಡವಾಳದ ಈ ಸ್ಥಳಾಂತರವು ಯೂರೋಪಿನ ದೀರ್ಘಕಾಲೀನ ಬೆಳವಣಿಗೆ ಮತ್ತು ಉದ್ಯೋಗಾವಕಾಶಗಳ ಮೇಲೆ ಪರಿಣಾಮ ಬೀರುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ತಾನೇ ಸೃಷ್ಟಿಸಿಕೊಂಡ ಆರ್ಥಿಕ ಸಂಕಷ್ಟಗಳ ಕಾಲವನ್ನು ಯೂರೋಪ್ ಪ್ರವೇಶಿಸುತ್ತಿದೆ. ಉಕ್ರೇನ್ ಯುದ್ಧದಲ್ಲಿ ಅಮೆರಿಕಾದೊಂದಿಗಿನ ನಿಷ್ಠೆಯನ್ನು ಎತ್ತಿ ತೋರಿಸುವ ಭರದಲ್ಲಿ ಯೂರೋಪ್ ಆರ್ಥಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದೆ. ಜರ್ಮನಿಯ ಸೋಷಿಯಲ್ ಡೆಮೊಕ್ರಾಟಿಕ್ ಪಕ್ಷದ ಮಾಜಿ ಸಚಿವ ಮತ್ತು 'ಡಿ ಲಿಂಕೆ' ಎಂಬ ಎಡ ಪಕ್ಷದ ಸ್ಥಾಪಕ ಮತ್ತು ಈಗ ಸಕ್ರಿಯ ರಾಜಕೀಯದಿಂದ ನಿವೃತ್ತರಾಗಿರುವ ಆಸ್ಕರ್ ಲಾಫೋಂಟೈನ್, ಜರ್ಮನಿಯನ್ನು "ಉಕ್ರೇನ್ ಯುದ್ಧದಲ್ಲಿ ಅಮೆರಿಕದ ಅಡಿಯಾಳು" ಎಂದು ಕರೆದಿದ್ದಾರೆ (ದಿ ಡೆಲ್ಲಿ ಇನಿಶಿಯೇಟಿವ್, ಸೆಪ್ಟೆಂಬರ್ 17, 2022). ಅವರ ಈ ಅಭಿಪ್ರಾಯವು ಖಂಡಿತವಾಗಿಯೂ ಸರಿ.

ನಿರ್ಬಂಧ ಮತ್ತು ಪ್ರತೀಕಾರ

ಯುರೋಪಿನ ಜನರ ಸಂಕಷ್ಟಗಳಿಗೆ ವ್ಲಾದಿಮಿರ್ ಪುಟಿನ್ ಅವರೇ ಮೂಲ ಕಾರಣ ಎಂಬ ಅಭಿಪ್ರಾಯವನ್ನು ಯೂರೋಪಿನ ಜನರ ಮನಸ್ಸಿನಲ್ಲಿ ಬಿತ್ತಲಾಗಿದೆ. ಆದರೆ, ರಷ್ಯಾದ ಅನಿಲವನ್ನು ಯೂರೋಪಿಗೆ ಕೊಂಡೊಯ್ಯುವ ನಾರ್ಡ್ ಸ್ಟ್ರೀಮ್-1 ಕೊಳವೆ ಮಾರ್ಗವನ್ನು ಮುಚ್ಚಲು ಪುಟಿನ್ ನಿರ್ಧರಿಸುವ ಮೊದಲೇ ಯುರೋಪಿನ ನಾಯಕಮಣಿಗಳು ರಷ್ಯಾದ ಅನಿಲವನ್ನು ಬಹಿಷ್ಕರಿಸುವ ಮಾತುಗಳನ್ನು ಪ್ರತಿದಿನವೂ ಆಡುತ್ತಲೇ ಇದ್ದರು. ಹಾಗಾಗಿ, ಯುರೋಪಿನ ನಾಯಕಮಣಿಗಳ ಈ ಬಯಕೆಯನ್ನೇ ಪುಟಿನ್ ಈಡೇರಿಸಿದ್ದಾರೆ ಎನ್ನಬಹುದು. ಜೊತೆಗೆ, ಪಾಶ್ಚಾತ್ಯ ದೇಶಗಳು ಹೇರಿದ ನಿರ್ಬಂಧಗಳ ಪರಿಣಾಮವಾಗಿ ಸ್ವತಃ ರಷ್ಯಾವೇ ಒದ್ದಾಡುತ್ತಿರುವಾಗ, ಈ ದೇಶಗಳಿಗೆ ಅಗತ್ಯವಿರುವ ಕಾರಣದಿಂದಾಗಿ (ಈ ಕಾರಣದಿಂದಾಗಿ ಅನಿಲವನ್ನು ಮೂಲತಃ ನಿರ್ಬಂಧಗಳ ವ್ಯಾಪ್ತಿಯಿಂದ ಹೊರಗಿಡಲಾಗಿತ್ತು) ಅನಿಲದ ಪೂರೈಕೆಯನ್ನು ರಷ್ಯಾ ಮುಂದುವರಿಸಬೇಕೆಂಬ ಅವರ ನಿರೀಕ್ಷೆಯು, ಒಂದು ಕೆನ್ನೆಗೆ ಹೊಡೆದ ನಂತರ ತನ್ನ ಮತ್ತೊಂದು ಕೆನ್ನೆಯನ್ನು ರಷ್ಯಾ ಒಡ್ಡುತ್ತದೆ ಎನ್ನುವ ರೀತಿಯ ಒಂದು ಅಸಂಬದ್ಧ ಬಯಕೆಯಾಗುತ್ತದೆ. ನಿರ್ಬಂಧಗಳ ಪರಿಣಾಮಗಳನ್ನು ಅನುಭವಿಸುತ್ತಿರುವ ದೇಶವು ಪ್ರತೀಕಾರದ ಕ್ರಮಗಳನ್ನು ಕೈಗೊಳ್ಳುವ ಹಕ್ಕನ್ನೂ ಹೊಂದಿರುತ್ತದೆ. ಆದ್ದರಿಂದ, ಏಕಪಕ್ಷೀಯವಾಗಿ ಇತರರ ಮೇಲೆ ನಿರ್ಬಂಧಗಳನ್ನು ಹೇರುವವರು ಪ್ರತೀಕಾರದ ಕ್ರಮಗಳಿಗೂ ತಯಾರಾಗಿರಬೇಕಾಗುತ್ತದೆ.

ಪುಟಿನ್ ಅವರ ಅಪರಾಧವು ಹೆಚ್ಚಿನ ಮೂಲಭೂತ ಮಟ್ಟದು, ಏಕೆಂದರೆ ಆತ ನ್ಯಾಟೋಗೆ ಸೇರುವುದನ್ನು ನಿರ್ಧರಿಸುವ ಉಕ್ರೇನಿನ ಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪ ಮಾಡಿದರು ಎಂದು ವಾದಿಸಬಹುದು.



"ಅವರಿಗೆ ಯುದ್ಧಕ್ಕೆ ಹಣ ಸಿಕ್ಕಿತು–ಆದರೆ ಬಡವರಿಗೆ ಉಣಿಸಲು ಹಣ ಸಿಕ್ಕಿಲ್ಲ"
– ಜರ್ಮನಿಯಲ್ಲಿ ಒಂದು ಪ್ರತಿಭಟನೆಯಲ್ಲಿ

(ರಷ್ಯಾದ ಅನಿಲ–ಪೂರೈಕೆಯನ್ನು ನಿಂತಿರುವುದು ಯುರೋಪಿನ ಜನಗಳು ನಡುಗುವಂತೆ ಮಾಡಿದೆ, ಆದರೆ ತಮ್ಮ ಲಾಭದ–ಅಂತರವನ್ನು ಹೆಚ್ಚಿಸಿಕೊಂಡಿರುವ ತೈಲ ಕಂಪನಿಗಳು ಭಾರಿ ಲಾಭ ಮಾಡುತ್ತಿವೆ. ಅದೇ ರೀತಿಯಲ್ಲಿ, ಉಕ್ರೇನ್‌ಗೆ ಶಸ್ತ್ರಾಸ್ತ್ರಗಳನ್ನು ಪೂರೈಸುವ ಶಸ್ತ್ರಾಸ್ತ್ರ ತಯಾರಕರು ಭಾರೀ ಲಾಭ ಗಳಿಸುತ್ತಿದ್ದಾರೆ. ಅದಕ್ಕಾಗಿ ತೆರಿಗೆಯ ಭಾರವನ್ನು ಯುರೋಪಿನ–ಅಮೆರಿಕಾದ ಜನಗಳು ಹೊರುತ್ತಿದ್ದಾರೆ.)

ಯಾವುದೇ ಒಂದು ದೇಶವು ಯಾವುದೇ ಒಂದು ಮಿಲಿಟರಿ ಕೂಟವನ್ನು ಸೇರುವ ಸ್ವಾತಂತ್ರ್ಯವನ್ನು ಹೊಂದಿರಬೇಕು ಮತ್ತು ಅದನ್ನು ತಡೆಯುವ ಹಕ್ಕನ್ನು ಮತ್ತೊಂದು ದೇಶವು ಹೊಂದಿಲ್ಲ ಎಂದೂ ವಾದಿಸಬಹುದು. ಆದರೆ, ನ್ಯಾಟೋ ಕೂಟವನ್ನು ಪೂರ್ವಕ್ಕೆ ಒಂದು ಇಂಚಿನಷ್ಟೂ ವಿಸ್ತರಿಸುವುದಿಲ್ಲ ಎಂಬುದಾಗಿ ಪಾಶ್ಚಾತ್ಯ ದೇಶಗಳು ಸೋವಿಯತ್ ಒಕ್ಕೂಟದ ಕೊನೆಯ ನಾಯಕ ಮಿಖಾಯಿಲ್ ಗೋರ್ಬಚೇವ್ ಅವರಿಗೆ ಕೊಟ್ಟ ಆಶ್ವಾಸನೆಗಳನ್ನು ನಾವು ಮರೆತು ಬಿಟ್ಟರೂ ಸಹ; 2014 ರಲ್ಲಿ ಜನರಿಂದ ಆಯ್ಕೆಯಾಗಿದ್ದ ಮತ್ತು ರಷ್ಯಾದೊಂದಿಗೆ ಸ್ನೇಹ ಸಂಬಂಧ ಬಯಸಿದ್ದ ಉಕ್ರೇನಿನ ಸರ್ಕಾರವನ್ನು ಅಮೆರಿಕದ ಪ್ರಾಯೋಜನೆಯೊಂದಿಗೆ ಪದಚ್ಯುತಿಗೊಳಿಸಿದ್ದನ್ನು ನಾವು ಮರೆತು ಬಿಟ್ಟರೂ ಸಹ; ತದನಂತರದಲ್ಲಿ ಅಮೆರಿಕದ ನವ-ಸಂಪ್ರದಾಯಶರಣ (ಓಜಂ–ಅಂಟಿ) ಕೂಟ ಕೈಯಾರೆ ಆರಿಸಿ ಉಕ್ರೇನ್‌ನಲ್ಲಿ ಪ್ರತಿಷ್ಠಾಪಿಸಿದ ಹೊಸ ಸರ್ಕಾರವು ರಷ್ಯಾದ ಮಿಲಿಟರಿ ಹಸ್ತಕ್ಷೇಪದ ಮೊದಲು ಕೆಲವು ವರ್ಷಗಳಲ್ಲಿ ರಷ್ಯನ್-ಬಹುಸಂಖ್ಯಾತ ಡಾನ್ಬಾಸ್ ಪ್ರದೇಶದಲ್ಲಿ ಯುದ್ಧ ಹೂಡಿ 14,000 ಜನರನ್ನು ಬಲಿ ತೆಗೆದುಕೊಂಡ ಅಂಶವನ್ನು ನಾವು ಮರೆತು ಬಿಟ್ಟರೂ ಸಹ; ತನ್ನ ಪ್ರಾಬಲ್ಯವನ್ನು ಶಾಶ್ವತಗೊಳಿಸುವ ಏಕೈಕ ಉದ್ದೇಶದೊಂದಿಗೆ ವಿಶ್ವಾದ್ಯಂತ 80 ದೇಶಗಳಲ್ಲಿ 800 ಮಿಲಿಟರಿ ನೆಲೆಗಳನ್ನು ಅಮೆರಿಕ ಹೊಂದಿದೆ ಎಂಬ ಅಂಶವನ್ನು ನಾವು ಮರೆತು ಬಿಟ್ಟರೂ ಸಹ; ಮತ್ತು, ಯಾವುದೇ ಒಂದು ಮಿಲಿಟರಿ ಕೂಟವನ್ನು ಸೇರುವ ಮತ್ತು ತನ್ನದೇ ನೆಲದಲ್ಲಿ ಯಾವುದೇ ಶಸ್ತ್ರಾಗಾರವನ್ನು ಸ್ಥಾಪಿಕೊಳ್ಳಲು ಒಂದು ದೇಶವು ಹೊಂದಿರುವ ಸ್ವಾತಂತ್ರ್ಯದ ವಿಷಯದ ಬಗ್ಗೆ ಹಾಗೇ ಸುಮ್ಮನೆ ವಿಚಾರ ಮಾಡಿದರೆ – ಮಿಲಿಟರಿ ಕೂಟವನ್ನು ಸೇರುವ ಮತ್ತು ಮಿಲಿಟರಿ ನೆಲೆ-ಶಸ್ತ್ರಾಗಾರವನ್ನು ಸ್ಥಾಪಿಸಿಕೊಳ್ಳುವ ಸ್ವಾತಂತ್ರ್ಯದ ಅಂಶವನ್ನು ಅಮೆರಿಕ ನೇತೃತ್ವದ ಪಾಶ್ಚಾತ್ಯ ದೇಶಗಳು ಒತ್ತಿ ಒತ್ತಿ ಹೇಳುತ್ತಿರುವ ಈ ಸಂದರ್ಭದಲ್ಲಿ – ಒಂದು ಪ್ರಶ್ನೆ ಏಳುತ್ತದೆ: ಹಾಗಾದರೆ, ಇದೇ ಸ್ವಾತಂತ್ರ್ಯವನ್ನು ಕ್ಯೂಬಾಗೆ 1962ರ ಕ್ಷಿಪಣಿ ಬಿಕ್ಕಟ್ಟಿನ ಸಂದರ್ಭದಲ್ಲಿ ನಿರಾಕರಿಸಿದ ಅಮೆರಿಕಾ ಜಗತ್ತನ್ನು ಪರಮಾಣು ಯುದ್ಧದ ಅಂಚಿಗೆ ತಳ್ಳಿದ್ದಾದರೂ ಏಕೆ?

ಯುರೋಪಿನ ಯುದ್ಧೋನ್ಮಾದ

ಅಮೆರಿಕದ ಮಾರ್ಗದರ್ಶನವನ್ನು ಅನುಸರಿಸಿ, ರಷ್ಯಾದ ವಿರುದ್ಧವಾಗಿ ಯೂರೋಪಿನ ದೇಶಗಳ ಯುದ್ಧೋನ್ಮಾದದ ಪರಿಣಾಮಗಳು ಆರ್ಥಿಕವಾಗಿ ಹಾನಿಕಾರಕವಾಗಿರುತ್ತವೆ ಮಾತ್ರವಲ್ಲ; ಅದರ ರಾಜಕೀಯ ಪರಿಣಾಮಗಳೂ ವಿನಾಶಕಾರಿಯಾಗಿರುತ್ತವೆ: ಯೂರೋಪನ್ನು ಅದು ಬಲಪಂಥದತ್ತ ತಳ್ಳುವುದು ಮಾತ್ರವಲ್ಲದೆ, ಫ್ಯಾಸಿಸಂನ ಸನಿಹಕ್ಕೂ ತಳ್ಳುತ್ತದೆ. ದುಡಿಯುವ ವರ್ಗದ ಮೇಲೆ ಅದು ಹೇರುವ ಅಗಾಧ ಹೊರೆಯನ್ನು ಮತ್ತು ಈ ಹೊರೆಯ ವಿರುದ್ಧವಾಗಿ ಕಾರ್ಮಿಕ ವರ್ಗವು ಹೋರಾಟಕ್ಕಿಳಿಯುತ್ತದೆ ಎಂಬುದನ್ನೂ ಸಹ ಎಲ್ಲರೂ ಗುರುತಿಸುತ್ತಾರೆ. ಆದರೆ, "ಉದಾರವಾದಿ" ನಿಲುವಿನ ರಾಜಕೀಯ ಗುಂಪುಗಳು ಈ ಬಗ್ಗೆ ಕಾಳಜಿ ವಹಿಸುವುದಿಲ್ಲ. ಈ ಉನ್ಮಾದದ ಇನ್ನೊಂದು ಹೊಡೆತವೆಂದರೆ, ರಷ್ಯಾದ ಅನಿಲ-ಪೂರೈಕೆಯು ನಿಂತ ಪರಿಸ್ಥಿತಿಯನ್ನು ಬಳಸಿಕೊಂಡು ತಮ್ಮ ಲಾಭದ-ಅಂತರವನ್ನು ಹೆಚ್ಚಿಸಿಕೊಂಡಿರುವ ತೈಲ ಕಂಪನಿಗಳು ಭಾರಿ ಲಾಭ ಮಾಡುತ್ತಿವೆ (ಅದೇ ರೀತಿಯಲ್ಲಿ, ಯುದ್ಧವನ್ನು ಮುಂದುವರಿಸಲು ಉಕ್ರೇನ್‌ಗೆ ಶಸ್ತ್ರಾಸ್ತ್ರಗಳ ಪೂರೈಕೆಗೆ ಬೇಕಾಗುವ ಹಣ ಒದಗಿಸಿಕೊಳ್ಳಲು ಅಮೆರಿಕದ ಜನರ ಮೇಲೆ ವಿಧಿಸಲಾಗುತ್ತಿರುವ ತೆರಿಗೆಗಳ ಇನ್ನೊಂದು ಮುಖವೆಂದರೆ ಶಸ್ತ್ರಾಸ್ತ್ರ ತಯಾರಕರು ಗಳಿಸುವ ಭಾರಿ ಲಾಭ). ದುರದೃಷ್ಟಕರ ಸಂಗತಿಯೆಂದರೆ, ಯುರೋಪಿನ ಎಡಪಂಥೀಯ ಗುಂಪುಗಳೂ ಸಹ ತಮ್ಮ ಸರ್ಕಾರಗಳ ಈ ಯುದ್ಧೋನ್ಮಾದದ ಕ್ರಮಗಳನ್ನು ಅನುಮೋದಿಸಲು ಸಿದ್ಧವಾಗಿವೆ.

ಎದುರಾಗುತ್ತಿರುವ ಈ ವಿಪತ್ತಿನ ಬಗ್ಗೆ ಹಲವಾರು ಫ್ಯಾಸಿಸ್ಟ್ ಗುಂಪುಗಳು ಬೊಬ್ಬೆ ಹೊಡೆಯುತ್ತಿವೆ. ಅವರ ಈ ಬೊಬ್ಬೆಯನ್ನು ಅನೇಕ ಎಡಪಂಥೀಯ ಗುಂಪುಗಳು ತಮ್ಮ ನಿಷ್ಕ್ರಿಯೆಗೆ ಸಮರ್ಥನೆಯಾಗಿ ಬಳಸಿಕೊಳ್ಳುತ್ತಿವೆ. ಕಾರ್ಮಿಕ ವರ್ಗವನ್ನು ನೋಯಿಸುವ ಈ ಕ್ರಮಗಳ ವಿರುದ್ಧ ಸ್ವಪ್ರೇರಣೆಯಿಂದ ಪ್ರತಿಭಟಿಸದಿರುವುದಕ್ಕೆ ಸಮರ್ಥನೆಯಾಗಿ ಈ ಬೊಬ್ಬೆಯನ್ನು ಬಳಸಿಕೊಳ್ಳುತ್ತಿವೆ (ಅಂದರೆ, ತಾವು ಪ್ರತಿಭಟನೆಯಲ್ಲಿ ತೊಡಗಿದರೆ ಫ್ಯಾಸಿಸ್ಟರೊಂದಿಗೆ ಗುರುತಿಸಿಕೊಂಡಂತಾಗುತ್ತದೆ ಎಂಬ ಅನಿಸಿಕೆಯಲ್ಲಿ). ಉದಾಹರಣೆಗೆ, ಜರ್ಮನಿಯಲ್ಲಿ ಸರ್ಕಾರದ ಕ್ರಮಗಳ ವಿರುದ್ಧ ಪ್ರತಿಭಟಿಸುತ್ತಿರುವುದು ಎಎಫ್‌ಡಿ (ಂಜೀಆ–ಜರ್ಮನಿಗಾಗಿ ಪರ್ಯಾಯ) ಎಂಬ ಒಂದು ಫ್ಯಾಸಿಸ್ಟ್ ಗುಂಪು. ಈ ಗುಂಪುಗಳ ನಿರ್ದಯ ಅವಕಾಶವಾದಿತನವನ್ನು ಗಮನಿಸಿದರೆ, ಅವರು ಈಗ ಹೊಡೆಯುತ್ತಿರುವ ಬೊಬ್ಬೆಗೆ ಯಾವ ಅರ್ಥವೂ ಇಲ್ಲ. ಅಧಿಕಾರಕ್ಕೆ ಬಂದ ಕೂಡಲೇ ಅವರು ಉಲ್ಟಾ ಹೊಡೆಯುತ್ತಾರೆ ಮತ್ತು ತಮ್ಮದೇ ಹಳೆಯ ಘೋಷಣೆಗಳನ್ನು ಕೂಗುವ ತಮ್ಮ ಸ್ವಂತ ಬೆಂಬಲಿಗರ ವಿರುದ್ಧವೇ ಶಿಸ್ತು ಕ್ರಮ ಜರುಗಿಸುತ್ತಾರೆ. ಈ ಘೋಷಣೆಗಳ ಮೂಲಕ ಅವರು ಅಧಿಕಾರಕ್ಕೆ ಬರುವುದೇ ನಿಖರ ಅಪಾಯ. ಸೆಪ್ಟೆಂಬರ್ 25 ರಂದು ನಡೆಯಲಿರುವ ಚುನಾವಣೆಗಳಲ್ಲಿ ಇಟಲಿಯು ಮರಿ–ಮುಸೊಲಿನಿಗಳಿಂದ ಕೂಡಿದ ಉಗ್ರ-ಬಲಪಂಥೀಯ ಸರ್ಕಾರವನ್ನು ಆಯ್ಕೆ ಮಾಡುವ ನಿರೀಕ್ಷೆಯಿದೆ (ಈ ಲೇಖನ ಬರೆದ ಮೇಲೆ ಬ್ರದರ್ಸ್ ಆಫ್ ಇಟಲಿ ಎಂಬ ಉಗ್ರ ಬಲ–ಪಂಥೀಯ ಪಕ್ಷದ ಜಾರ್ಜಿಯಾ ಮೆಲೊನಿ ಪ್ರಧಾನಿಯಾಗಿ ಆಯ್ಕೆಯಾಗಿರುವ ಸುದ್ದಿ ಬಂದಿದೆ–ಅನು). ಜರ್ಮನಿಯೂ ಸೇರಿದಂತೆ ಯೂರೋಪಿನ ಹಲವು ದೇಶಗಳಲ್ಲಿ ಹೆಚ್ಚಲಿರುವ ಫ್ಯಾಸಿಸಂನ ಪ್ರಾಬಲ್ಯದ ಅಂಶವು ಒಂದು ಭಯಾನಕ ಮುನ್ಸೂಚನೆಯಾಗಿದೆ.

ಇಂತಹ ಒಂದು ಅಪಾಯವನ್ನು ಮನಗಂಡಿದ್ದ ಜರ್ಮನಿಯ 'ಡಿ ಲಿಂಕೆ' ಎಡ ಪಕ್ಷದ ನಾಯಕಿಯಾಗಿದ್ದ ಮತ್ತು ಆ ಪಕ್ಷದ ಮಾಜಿ ಸಹ-ಅಧ್ಯಕ್ಷೆಯೂ ಆಗಿದ್ದ ಸಹ್ರಾ ವಾಗೆನ್‌ಕ್ನೆಕ್ಟ್ ಅವರು, ಸರ್ಕಾರದ ವಿರುದ್ಧ ಬಲ–ಪಂಥೀಯರು ಪ್ರತಿಭಟನೆ ನೆಡೆಸುತ್ತಿದ್ದ ಸಮಯದಲ್ಲೇ, ತಮ್ಮ ಪಕ್ಷವೂ ಸಹ ಸಾಮಾಜಿಕ ಪ್ರತಿಭಟನೆಗಳನ್ನು ಸಂಘಟಿಸುವಂತೆ ತಮ್ಮ ಪಕ್ಷವನ್ನು ಕೇಳಿದ್ದರು. ಅವರು ಹೇಳಿದಂತೆ, "ಯೋಗ್ಯ ಮತ್ತು ಜನಾನುಕೂಲದ ನಿಲುಮೆಗಳಲ್ಲಿ ಕೆಲವನ್ನು ಎಎಫ್‌ಡಿಯೂ ಪ್ರತಿನಿಧಿಸುತ್ತದೆ ಎಂಬ ಕಾರಣದ ಮೇಲೆ ತಮ್ಮ ನಿಲುಮೆಯನ್ನು ತ್ಯಜಿಸುವವರು ಹೋರಾಟ ಪ್ರಾರಂಭವಾಗುವ ಮೊದಲೇ ಸೋಲನ್ನು ಒಪ್ಪಿಕೊಂಡಿರುತ್ತಾರೆ" (ಎಂಆರ್ ಆನ್‌ಲೈನ್, ಸೆಪ್ಟೆಂಬರ್ 18, 2022).

ಯುರೋಪನ್ನು, ಅದರಲ್ಲೂ ವಿಶೇಷವಾಗಿ ಜರ್ಮನಿಯನ್ನು, ರಷ್ಯಾದಿಂದ ದೂರವಿಡುವುದೇ ಬ್ರಿಟನ್–ಅಮೆರಿಕ ದೇಶಗಳ ಸದಾ

ಪುಟ 15 ಕ್ಕೆ







ಕೆರೆ ನುಂಗಿದರು! ಬೆಂಗಳೂರು ಮುಳುಗಿಸಿದರು!!

ಗುರುರಾಜ ದೇಸಾಯಿ

ಅಗೆದಷ್ಟು ಅಗಲ–ಬಗೆದಷ್ಟು ಆಳ ಎನ್ನುವ ಹಾಗೇ, ಕೆರೆ ಒತ್ತುವರಿ ಕರ್ಮಕಾಂಡ ಬಯಲಾಗುತ್ತಲೇ ಇದೆ. ಎಲ್ಲವೂ ಹಿಂದಿನ ಸರ್ಕಾರ ಮಾಡಿದ್ದು ಅಂತ ಈಗಿನ ಸರ್ಕಾರ ಕೇವಲ ಕೆಲವು ಕಡೆ ರಾಜಕಾಲುವೆ ಒತ್ತುವರಿ ತೆರವು ಮಾಡೋ ಕಳ್ಳಾಟ ಮಾಡುತ್ತಿದೆ. ಕೆರೆಗಳನ್ನ ನುಂಗಿಹಾಕಿ ಸಾವಿರಾರು ನಿವೇಶನಗಳನ್ನು ನಿರ್ಮಿಸಿರುವ ಬಿಡಿಎದ ಕೆರೆ ಒತ್ತುವರಿ ಕರ್ಮಕಾಂಡ ಅಷ್ಟಿಷ್ಟಲ್ಲ. ಅಸಲಿಗೆ ಬೆಂಗಳೂರಲ್ಲಿ ಬಿಡಿಎ ಮತ್ತು ಬಿಬಿಎಂಪಿ ನುಂಗಿ ನೀರು ಕುಡಿದಿರುವ ಕೆರೆಗಳ ಸಂಖ್ಯೆ ಹಾಗೂ ಅದರಲ್ಲಿ ನಿರ್ಮಾಣವಾದ ಸೈಟ್ ಗಳ ಸಂಖ್ಯೆ ಎಷ್ಟು ಅಂತಾ ಕೇಳಿದರೆ ಎದೆ ಝಲ್ ಎನ್ನುತ್ತದೆ.

ಹೌದು, ಬಿಬಿಎಂಪಿ ದಾಖಲೆಯಲ್ಲಿರುವ 201 ಕೆರೆಗಳಲ್ಲಿ 851 ಎಕರೆಗೂ ಹೆಚ್ಚು ಒತ್ತುವರಿಯಾಗಿದೆ. ಇದರಲ್ಲಿ ಬಿಡಿಎ, ನೈಸ್, ಸ್ಲಂ ಬೋರ್ಡ್, ಶಾಲೆ, ಉದ್ಯಾನವನ, ಸ್ಮಶಾನ, ಕೆಎಚ್‌ಬಿ ಕ್ವಾರ್ಟರ್ಸ್, ಮಿಲಿಟರಿ, ರೈಲ್ವೆ ಇಲಾಖೆ, ಕೆಐಎಡಿಬಿ, ಬಿಡಬ್ಲ್ಯುಎಸ್‌ಎಸ್‌ಬಿ, ಬಿಎಂಟಿಸಿ, ಪೊಲೀಸ್ ಠಾಣೆ, ತಹಶೀಲ್ದಾರ್ ಕಚೇರಿಗಳೂ ಸೇರಿವೆ. ಬೆಂಗಳೂರಿನಲ್ಲಿ 10 ವರ್ಷಗಳಿಂದೀಚೆಗೆ ಅಭಿವೃದ್ಧಿಗೊಂಡಿರುವ ಕೆರೆಗಳಲ್ಲೂ ಒತ್ತುವರಿ ಇದೆ. ಗೋವು ಆಶ್ರಮ, ಕೃಷಿ, ಸೈಕಲ್ ಶಾಪ್, ಪೆಟ್ರೋಲ್ ಬಂಕ್, ರಸ್ತೆ ಹೀಗೆ ಹಲವು ರೀತಿ ಹಾಗೂ ಖಾಸಗಿ ವ್ಯಕ್ತಿಗಳ ಹೆಸರಿನಲ್ಲೂ ಒತ್ತುವರಿಯ ಪ್ರಮಾಣವನ್ನು ಬಿಬಿಎಂಪಿ ದಾಖಲು ಮಾಡಿದೆ. ಒಟ್ಟಾರೆ ಒತ್ತುವರಿಯಾದ ಕೆರೆಗಳು ಯಾವುವು ಎಂಬುದನ್ನು ಈ ಕೆಳಗಿನಂತೆ ನೋಡಬಹುದು.

ಮಳೆಯ ಅನಾಹುತ ಬಳಿಕ ಒಂದೊಂದು ಆತಂಕಕಾರಿ ವಿಚಾರ ಬೆಳಕಿಗೆ ಬರುತ್ತಿದ್ದು, ಸ್ವತಃ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವೇ ಹಲವು ಕೆರೆಗಳನ್ನು ನುಂಗಿರುವ ಮಾಹಿತಿ ಹೊರಬಿದ್ದಿದೆ. ಬೆಂಗಳೂರನ್ನು ಅಭಿವೃದ್ಧಿ ಮಾಡಬೇಕಿದ್ದ ಬಿಬಿಎಂಪಿ ಮತ್ತು ಬಿಡಿಎ ಕೆರೆಗಳನ್ನೆ ನುಂಗಿ ನೀರು ಕುಡಿದಿದೆ. ಈ ನುಗಣ್ಣರ ಹಿಂದೆ ಮೂರು ಪಕ್ಷಗಳ ನಾಯಕರ ಪಾಲು ದೊಡ್ಡದಿದೆ.

ಕದಿರೇನಹಳ್ಳಿ ಕೆರೆಯ ಭಾಗದಲ್ಲಿ ಬನಶಂಕರಿ ಎರಡನೇ ಹಂತ. ಸಾರಕ್ಕಿ ಅಗ್ರಹಾರ ಕೆರೆಯು ಈಗಿನ ಜೆ.ಪಿ.ನಗರ ನಾಲ್ಕನೇ ಫೇಸ್. ಚಿನ್ನಗಾರ ಕೆರೆ ಹೋಗಿ ಈಗಿನ ಈಜಿಪುರ, ಚಲ್ಲಘಟ್ಟ ಕೆರೆಯ ಭಾಗದಲ್ಲಿ ಈಗ ಕರ್ನಾಟಕ ಗಾಲ್ಫ್ ಅಸೋಶಿಯೇಶನ್ ಇದೆ. ದೊಮ್ಮಲೂರು ಕೆರೆ ಇದ್ದ ಜಾಗದಲ್ಲಿ ಈಗ ದೊಮ್ಮಲೂರು ಎರಡನೇ ಸ್ಟೇಜ್ ಇದೆ.

ಧರ್ಮಾಂಬುದಿ ಕೆರೆಯ ಜಾಗದಲ್ಲಿ ಈಗಿನ ಕೆಂಪೇಗೌಡ ಬಸ್ ನಿಲ್ದಾಣ, ರಾಮಶೆಟ್ಟಿ ಪಾಳ್ಯ ಕೆರೆಯ ಜಾಗದಲ್ಲಿ ಮಿಲ್ಕ್ ಕಾಲೋನಿಯಿದೆ, ಅಗಸನ ಕೆರೆಯ ಭಾಗದಲ್ಲಿ ಗಾಯತ್ರಿದೇವಿ ಪಾರ್ಕ್ ಇದೆ. ಈಗಿನ ರಾಜಾಜಿನಗರ ಹಿಂದಿನ ಕೇತಮಾರನಹಳ್ಳಿ ಕೆರೆ. ಕಂಠೀರವ ಸ್ಟೇಡಿಯಂ ಜಾಗದಲ್ಲಿ ಸಂಪಿಗೆ ಕೆರೆಯಿತ್ತು. ಕೋರಮಂಗಲ ಕೆರೆಯ ಜಾಗದಲ್ಲಿ ನ್ಯಾಶನಲ್ ಡೈರಿ ರಿಸರ್ಚ್ ಇನ್ಸ್ಟಿಟ್ಯೂಟ್ ಇದೆ.

ಹಾಳನಾಯಕನಹಳ್ಳಿ ಕೆರೆಯ ಭಾಗದಲ್ಲಿ ರೈನ್ ಬೋ ಲೇಔಟ್ ಸೊನ್ನೇನಹಳ್ಳಿ ಕೆರೆಯು ಆಸ್ಟಿನ್ ಟೌನ್ ಆಗಿದೆ, ಈಗಿನ ನಾಗಾವರ ಹಿಂದಿನ ಹೆಣ್ಣೂರು ಕೆರೆ. ರಾಜರಾಜೇಶ್ವರಿ ಲೇಔಟ್ ಹಿಂದಿನ ಕೊಟ್ಟೂರು ಕೆರೆ. ಪರಂಗಿಪಾಳ್ಯ ಕೆರೆ ಈಗಿನ ಎಚ್ ಎಸ್ ಆರ್ ಲೇಔಟ್, ಬಸವೇಶ್ವರನಗರ ಹಿಂದಿನ ಕುರುಬರಹಳ್ಳಿ ಕೆರೆಯಾಗಿತ್ತು, ಮಹದೇವಪುರ ವ್ಯಾಪ್ತಿಯ ಮುನೇನಕೊಳಲು ಕೆರೆ, ಬೆಳತ್ತೂರು ಕೆರೆ, ನಲ್ಲೂರಹಳ್ಳಿ ಕೆರೆ, ಗರುಡಾಚಾರ್ ಪಾಳ್ಯ ಕೆರೆ, ಯಮಲೂರು ಕೋಡಿ ಕೆರೆಯನ್ನೂ ಒತ್ತುವರಿ ಮಾಡಲಾಗಿದೆ.

23 ಕೆರೆಗಳನ್ನ ನೆಲಸಮ ಮಾಡಿ ಬಿಡಿಎ ಲೇಔಟ್ ನಿರ್ಮಾಣ ಮಾಡಲಾಗಿದೆ ಎಂದು ಬಿಬಿಎಂಪಿ ದಾಖಲೆಗಳು ಹೇಳುತ್ತಿವೆ. ಕೆರೆ ಮೇಲೆ ನಿರ್ಮಾಣ ಮಾಡಿರುವ ಲೇಔಟ್ ಗಳಲ್ಲಿ 3 ಪಕ್ಷದ ನಾಯಕರಿಗೆ ಜಿ ಕೆಟಗರಿ ನಿವೇಶನ ಹಂಚಲಾಗಿದೆ. ಬಿಜೆಪಿ, ಕಾಂಗ್ರೆಸ್ ಪಕ್ಷದ ಶಾಸಕರಿಗೆ, ಸಚಿವರಿಗೆ, ಹಾಲಿ, ಮಾಜಿ ಶಾಸಕರಿಗೆ ನಿವೇಶನ ನೀಡಲಾಗಿದೆ ಎಂಬ ಮಾಹಿತಿಯನ್ನು ಬಿಬಿಎಂಪಿ ಹೊರಹಾಕಿದೆ. ಇನ್ನೂ ಈ ಕೆರೆ ಒತ್ತುವರಿ ಯಾರೆಲ್ಲ ಮಾಡಿದ್ದಾರೆ ಅನ್ನೋದನ್ನ ನೋಡುವುದಾದರೆ,

- ❒ ಗೋವಿಂದ್ ಕಾರಜೋಳ, ಶಾಸಕ ಕೋಟಾದಲ್ಲಿ 50×80 ವಿಸ್ತೀರ್ಣದ ನಿವೇಶನ ಹೊಂದಿದ್ದಾರೆ. ನಿವೇಶನ ಸಂಖ್ಯೆ 105, ಆರ್ ಎಂವಿ 2 ನೇ ಹಂತ 1998 ರಲ್ಲಿ ಹಂಚಿಕೆ ಮಾಡಲಾಗಿದೆ. ಆರ್ ಎಂವಿ 2 ನೇ ಹಂತ ಗೆದ್ದಲ್ಲಹಳ್ಳಿ ಕೆರೆ ಹಾಗೂ ಚಿಕ್ಕಮಾರನಹಳ್ಳಿ ಕೆರೆ ಮೇಲೆ ನಿರ್ಮಿಸಿರುವ ಲೇಔಟ್ ಇದಾಗಿದೆ. ಇವರು ಬಿಜೆಪಿ ಪಕ್ಷದ ಶಾಸಕರಾಗಿದ್ದಾರೆ.
- ❒ ಡಿಕೆ ಶಿವಕುಮಾರ್, ಶಾಸಕರ ಕೋಟಾದಲ್ಲಿ 50×80ವಿಸ್ತೀರ್ಣ, ನಿವೇಶನ ಸಂಖ್ಯೆ 105, ಆರ್ ಎಂವಿ 2 ನೇ ಹಂತ 2 ನೇ ಬ್ಲಾಕ್ 1992 ರಲ್ಲಿ ನಿವೇಶನ ಹಂಚಿಕೆ. ಇವರು ಕಾಂಗ್ರೆಸ್ ಶಾಸಕರಾಗಿದ್ದಾರೆ.
- ❒ ಡಿ.ಸುಧಾಕರ್, ಸಚಿವರ ಕೋಟಾದಡಿ 50×80 ವಿಸ್ತೀರ್ಣದ ನಿವೇಶನ ಸಂ.286/c ಆರ್ ಎಂವಿ 2 ಸ್ಟೇಜ್ ರಲ್ಲಿ ನಿವೇಶನ ಹಂಚಿಕೆ. ಆರ್ ಎಂವಿ 2 ನೇ ಹಂತ ಗೆದ್ದಲ್ಲಹಳ್ಳಿ ಕೆರೆ ಹಾಗೂ ಚಿಕ್ಕಮಾರನಹಳ್ಳಿ ಕೆರೆ ಮೇಲೆ ನಿರ್ಮಿಸಿರುವ ಲೇಔಟ್. ಇವರು ಆಗ ಬಿಜೆಪಿ ಶಾಸಕರಾಗಿದ್ದರು, ನಂತರದಲ್ಲಿ ಕಾಂಗ್ರೆಸ್ ಸೇರ್ಪಡೆಯಾಗಿದ್ದಾರೆ.
- ❒ ಆರ್ ಅಶೋಕ್, ಸಚಿವರ ಕೋಟಾದಡಿ 50×80 ವಿಸ್ತೀರ್ಣದ ನಿವೇಶನ ಹೊಂದಿದ್ದಾರೆ. ನಿವೇಶನ ಸಂಖ್ಯೆ 195/L HBR1 stage, 5 ಬ್ಲಾಕ್, 2007 ರಲ್ಲಿ ಹಂಚಿಕೆ ಮಾಡಲಾಗಿದೆ. ಇವರು ಬಿಜೆಪಿ ಶಾಸಕರಾಗಿದ್ದಾರೆ.
- ❒ ಬಿ.ವೈ. ರಾಘವೇಂದ್ರ, ಎಂಪಿ ಕೋಟಾದಲ್ಲಿ 50×80 ವಿಸ್ತೀರ್ಣದ ನಿವೇಶನ ಹೊಂದಿದ್ದಾರೆ. ನಿವೇಶನ ಸಂಖ್ಯೆ 1, ಆರ್ ಎಂವಿ 2 ಸ್ಟೇಜ್, ನಾಗಶೆಟ್ಟಿಹಳ್ಳಿ 2009 ಇವರು ಬಿಜೆಪಿ ಶಾಸಕರಾಗಿದ್ದರು.
- ❒ ಬಿ.ಕೆ. ಸಂಗಮೇಶ್, ಶಾಸಕರ ಕೋಟಾ 50×80 ವಿಸ್ತೀರ್ಣದ ನಿವೇಶನ ಹೊಂದಿದ್ದಾರೆ. ನಿವೇಶನ ಸಂ.31 ಆರ್ ಎಂವಿ 2 ಸ್ಟೇಜ್ 2009 ರಲ್ಲಿ ತೆಗೆದುಕೊಂಡಿದ್ದಾರೆ. ಇವರು ಕಾಂಗ್ರೆಸ್ ಶಾಸಕರಾಗಿದ್ದಾರೆ.
- ❒ ವೀರಣ್ಣ ಚರಂತಿಮಠ, ಶಾಸಕರ ಕೋಟಾದಡಿ 50×80 ವಿಸ್ತೀರ್ಣದ ನಿವೇಶನ ಹೊಂದಿದ್ದಾರೆ, ನಿವೇಶನ ಸಂಖ್ಯೆ 3, ಆರ್ ಎಂವಿ 2 ಸ್ಟೇಜ್4 ಬ್ಲಾಕ್, ನಾಗಶೆಟ್ಟಿಹಳ್ಳಿ 2006 ರಲ್ಲಿ ಹಂಚಿಕೆ ಮಾಡಲಾಗಿದೆ. ಇವರು ಬಿಜೆಪಿ ಶಾಸಕರು.
- ❒ ಎಸ್ ಸುರೇಶ್ ಕುಮಾರ್, ಸಚಿವರ ಕೋಟಾದಡಿ 50×80 ವಿಸ್ತೀರ್ಣದ ನಿವೇಶನ ಹೊಂದಿದ್ದಾರೆ. ನಿವೇಶನ ಸಂಖ್ಯೆ 2, ಆರ್ ಎಂವಿ 2 ಸ್ಟೇಜ್ 4 ಬ್ಲಾಕ್, 2009 ರಲ್ಲಿ ಹಂಚಿಕೆ. ಇವರು ಬಿಜೆಪಿ ಶಾಸಕರು.
- ❒ ನಜೀರ್ ಅಹ್ಮದ್, ಶಾಸಕರ ಕೋಟಾದಡಿ 50×80 ವೀಸ್ತೀರ್ಣದ ನಿವೇಶನ ಹೊಂದಿದ್ದಾರೆ. ನಿವೇಶನ ಸಂಖ್ಯೆ 391 ಆರ್ ಎಂವಿ 2 ನೇ ಹಂತ 2 ನೇ ಬ್ಲಾಕ್ 1992 ರಲ್ಲಿ ನಿವೇಶನ ಹಂಚಿಕೆ ಮಾಡಲಾಗಿದೆ. ಇವರು ಕಾಂಗ್ರೆಸ್ ಶಾಸಕರಾಗಿದ್ದಾರೆ.
- ❒ ಆರ್.ವಿ. ದೇವರಾಜ್, ಶಾಸಕರ ಕೋಟಾದಲ್ಲಿ 50×80 ವಿಸ್ತೀರ್ಣದ ನಿವೇಶನ ಹೊಂದಿದ್ದಾರೆ. ನಿವೇಶನ ಸಂಖ್ಯೆ 108/ಎ ಆರ್ ಎಂವಿ 2 ನೇ ಸ್ಟೇಜ್ 2 ಬ್ಲಾಕ್ 1992 ರಲ್ಲಿ ಹಂಚಿಕೆಮಾಡಲಾಗಿದೆ. ಇವರು ಕಾಂಗ್ರೆಸ್ ಶಾಸಕರು.
- ❒ ಗೂಳಿಹಟ್ಟಿ ಶೇಖರ್, ಸಚಿವರ ಕೋಟಾ 2009 ರಲ್ಲಿ ಆರ್ ಎಂವಿ 2 ನೇ ಹಂತದಲ್ಲಿ ನಿವೇಶನ. ಇವರು ಪಕ್ಷೇತರರಾಗಿ ಗೆದ್ದು, ಬಿಜೆಪಿಯ ಜೊತೆ ಸಖ್ಯವನ್ನು ಹೊಂಡಿದ್ದರು.
- ❒ ಈ. ಕೃಷ್ಣ ಪಾಲೇಮಾರ್, ಸಚಿವರ ಕೋಟಾದಡಿ 50×80 ವಿಸ್ತೀರ್ಣದ ನಿವೇಶನ ಹೊಂದಿದ್ದಾರೆ. ನಿವೇಶನ ಸಂ.12 ಆರ್ ಎಂವಿ 2 ಸ್ಟೇಜ್ ರಲ್ಲಿ ನಿವೇಶನ ಹಂಚಿಕೆ. ಇವರು ಬಿಜೆಪಿ ನಾಯಕರು.
- ❒ ಶಿವರಾಜ್ ತಂಗಡಗಿ, ಸಚಿವರ ಕೋಟಾದಡಿ 50×80 ವಿಸ್ತೀರ್ಣದ ನಿವೇಶನ ಹೊಂದಿದ್ದಾರೆ. ನಿವೇಶನ ಸಂ.31 ಆರ್ ಎಂವಿ 2 ಸ್ಟೇಜ್ ರಲ್ಲಿ ನಿವೇಶನ ಹಂಚಿಕೆ. ಇವರು ಪಕ್ಷೇತರ ಶಾಸಕರಾಗಿ ಗೆದ್ದು, ಬಿಜೆಪಿ ಜೊತೆ ಸಖ್ಯ ಹೊಂದಿದ್ದರು. ನಂತರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.
- ❒ ಫಕೀರಪ್ಪ ಎಂಪಿ ಕೋಟಾದಡಿ 50×80 ವಿಸ್ತೀರ್ಣದ ಹೊಂದಿದ್ದಾರೆ. ನಿವೇಶನ. ಸಂ.71 ಆರ್ ಎಂವಿ 2 ಸ್ಟೇಜ್ ಭೂಪಸಂಧ್ರ ರಲ್ಲಿ ನಿವೇಶನ ಹಂಚಿಕೆ. ಆರ್ ಎಂವಿ 2 ನೇ ಹಂತ ಗೆದ್ದಲ್ಲಹಳ್ಳಿ ಕೆರೆ ಹಾಗೂ ಚಿಕ್ಕಮಾರನಹಳ್ಳಿ ಕೆರೆ ಮೇಲೆ ನಿರ್ಮಿಸಿರುವ ಲೇಔಟ್ ಗಳು. ಇವರು ಬಿಜೆಪಿಯಿಂದ ಸಂಸದರಾಗಿದ್ದರು.
- ❒ ಕೆ.ಜೆ. ಜಾರ್ಜ್ ಎಂಎಲ್ಎ ಕೋಟಾದಡಿ 76×60 ವಿಸ್ತೀರ್ಣದ ನಿವೇಶನ ಹೊಂದಿದ್ದಾರೆ. ನಿವೇಶನ. ಸಂಖ್ಯೆ 4033, ಹೆಚ್ ಎಎಲ್ 2 ಸ್ಟೇಜ್, 1992 ರಲ್ಲಿ ಹಂಚಿಕೆ. (ತಿಪ್ಪಸಂದ್ರ ಕೆರೆ ಮೇಲೆ ನಿರ್ಮಾಣ ಆಗಿರುವ ಲೇಔಟ್) ಇವರು ಕಾಂಗ್ರೆಸ್ ಶಾಸಕರಾಗಿದ್ದರೆ.
- ❒ ಸಿ.ಟಿ. ರವಿ, ಶಾಸಕರ ಕೋಟಾದಲ್ಲಿ ನಿವೇಶನ ಹೊಂದಿದ್ದಾರೆ. ನಿವೇಶನ ಸಂಖ್ಯೆ 195 ಕೆ, ಹೆಚ್ ಬಿಆರ್ 1 ಸ್ಟೇಜ್, 5 ಬ್ಲಾಕ್ ನಲ್ಲಿ 4060 ನಿವೇಶನ ಹಂಚಿಕೆ(ಹೆಣ್ಣೂರು ಕೆರೆ ಮೇಲೆ ನಿರ್ಮಾಣ ಆಗಿರುವ ಲೇಔಟ್) ಇವರು ಬಿಜೆಪಿ ಶಾಸಕರು
- ❒ ಎಸ್ ಆರ್ ಪಾಟೀಲ,ಗೆ ಎಂಎಲ್ ಸಿ ಕೋಟಾದಡಿ ಹಾಗೂ ಆರ್ ಎಸ್ ಪಾಟೀಲ್ ಎಂಪಿ ಕೋಟಾದಲ್ಲಿ ನಿವೇಶನ ಹೊಂದಿದ್ದಾರೆ. ನಿವೇಶನ ಸಂಖ್ಯೆ 564,5 ಹಂಚಿಕೆ ಇವರು ಕಾಂಗ್ರೆಸ್ ನಾಯಕರು.
- ❒ ಹಂಪನಗೌಡ ಬಾದರ್ಲಿ, ಶಾಸಕರ ಕೋಟಾದಲ್ಲಿ ನಿವೇಶನ ಹಂಚಿಕೆ. ನಿವೇಶನ ಸಂಖ್ಯೆ 87 ಆರ್ ಎಂವಿ ಲೇಔಟ್ 1998 ರಲ್ಲಿ ನಿವೇಶನ ಹಂಚಿಕೆ. ಕಾಂಗ್ರೆಸ್ ಶಾಸಕರು.
- ❒ ಸಿಸಿ ಪಾಟೀಲ್ ಎಂಎಲ್ ಎ ಕೋಟಾದಡಿ 40×60 ವಿಸ್ತೀರ್ಣದ ನಿವೇಶನ ಹಂಚಿಕೆ. ನಿವೇಶನ ಸಂಖ್ಯೆ 3CC-907 HRBR1 ಬ್ಲಾಕ್ ನಲ್ಲಿ 2005 ರಲ್ಲಿ ಹಂಚಿಕೆ. ಇವರು ಬಿಜೆಪಿ ಶಾಸಕರು
- ❒ ಬಿ.ಸಿ. ಪಾಟೀಲ್, ಎಂಎಲ್ ಎ ಕೋಟಾದಡಿ 50×80 ವಿಸ್ತೀರ್ಣದ ನಿವೇಶನ ಹೊಂದಿದ್ದಾರೆ. ನಿವೇಶನ ಸಂಖ್ಯೆ 4M–407 HRBR3 ಬ್ಲಾಕ್ ಡಾಲರ್ಸ್ ಕಾಲೋನಿಯಲ್ಲಿ 2006 ರಲ್ಲಿ ಹಂಚಿಕೆ. ಇವರು ಬಿಜೆಪಿ ಶಾಸಕರು.
- ❒ ಪರಮೇಶ್ವರ್ ನಾಯ್ಕ್ ಎಂಎಲ್ಎ ಕೋಟಾದಡಿ 40×60 ವಿಸ್ತೀರ್ಣದ ನಿವೇಶನ ಹೊಂದಿದ್ದಾರೆ. ನಿವೇಶನ ಸಂಖ್ಯೆ 4M–415 HRBR ಲೇಔಟ್ ನ 3 ಬ್ಲಾಕ್ ನಲ್ಲಿ 2001 ರಲ್ಲಿ ಹಂಚಿಕೆ. ಕಾಂಗ್ರೆಸ್ ಶಾಸಕರು.
- ❒ ಪ್ರಕಾಶ್ ಖಂಡ್ರೆ ಎಂಎಲ್ ಎ ಕೋಟಾದಡಿ 50×80 ವಿಸ್ತೀರ್ಣದ ನಿವೇಶನ ಹೊಂದಿದ್ದಾರೆ. ನಿವೇಶನ ಸಂಖ್ಯೆ 5C-319 HRBR1 ಬ್ಲಾಕ್ ನಲ್ಲಿ 2005 ರಲ್ಲಿ ಹಂಚಿಕೆ. ಹೆಚ್ ಆರ್ ಬಿಆರ್ 1 ನೇ ಹಂತ, ಬಾಣಸವಾಡಿ ಚಿನ್ನಸಂದ್ರ ಕೆರೆ ಮೇಲೆ ನಿರ್ಮಾಣ ಆಗಿರುವ ಲೇಔಟ್. ಇವರು ಇವರು ಬಿಜೆಪಿ ಶಾಸಕರಾಗಿದ್ದಾರೆ.

ಪತ್ರಕರ್ತ ಲಿಂಗರಾಜ ಮಳವಳ್ಳಿ ಈ ಕುರಿತು ಪ್ರತಿಕ್ರಿಯೆ ನೀಡಿದ್ದು, ಈ ಕೆರೆ ಒತ್ತುವರಿಯನ್ನು ಮಾಡಿಕೊಂಡಿದ್ದರಿಂದ ಬೆಂಗಳೂರು ಅನೇಕ ಸಂಕಷ್ಟಗಳನ್ನು ಎದುರಿಸಿದೆ. ಸರಕಾರ ಒಂದು ಶಾಶ್ವತ ಪರಿಹಾರವನ್ನು ಮಾಡೋದಕ್ಕೆ ಹಿಂದೇಟು ಹಾಕುತ್ತಿದೆ. ಪ್ರತಿ ಬಾರಿ ಮಳೆ ಬಂದಾಗ ಈ ಚರ್ಚೆ ನಡೆಸಿ ನೆಪ ಮಾತ್ರಕ್ಕೆ ಒತ್ತುವರಿ ತೆರವು ಮಾಡಲಾಗುತ್ತಿದೆ. ಐಟಿ–ಬಿಟಿ ಕಂಪನಿಗಳೇ ಹೆಚ್ಚಿರುವ ಪೂರ್ವಭಾಗದ ಬೆಳ್ಳಂದೂರು,

ಯುರೋಪಿನ ಆರ್ಥಿಕ ಆತ್ಮಹತ್ಯೆ...... ಪುಟ 13 ರಿಂದ

ಕಾಲದ ನೀತಿ. ಹಿಂದೆ ಅಧಿಕಾರದಲ್ಲಿದ್ದ ಯುರೋಪಿನ ಅನೇಕ ರಾಜಕಾರಣಿಗಳಿಗಿಂತ ಭಿನ್ನವಾಗಿ, ಇಂದಿನ ಯುರೋಪಿನ ರಾಜಕಾರಣಿಗಳು ಈ ನೀತಿಯನ್ನು ಪೂರ್ಣವಾಗಿ ಒಪ್ಪಿಕೊಂಡಿದ್ದಾರೆ. ಉದಾಹರಣೆಗೆ, ಫ್ರೆಂಚ್ ನೆಲದಲ್ಲಿ ನ್ಯಾಟೋ ನೆಲೆಯನ್ನು ಸ್ಥಾಪಿಸುವ ಅವಕಾಶವನ್ನು ಚಾರ್ಲ್ಸ್ ಡಿ ಗಾಲ್ ನೀಡಲಿಲ್ಲ. ಏಕೆಂದರೆ, ಯುದ್ಧವನ್ನು ಪ್ರಾರಂಭಿಸಬೇಕೇ ಅಥವಾ ಬೇಡವೇ ಎಂಬ ನಿರ್ಧಾರವನ್ನು ಫ್ರೆಂಚರಿಂದ ಕಸಿದುಕೊಂಡಂತಾಗುತ್ತದೆ ಎಂದು ಅವರು ಭಾವಿಸಿದ್ದರು. ಅಮೆರಿಕನ್ನರಿಂದ ಭಿನ್ನವಾಗಿ ಸ್ವತಂತ್ರವಾದ ನಿಲುಮೆಯನ್ನು ಹೊಂದುವ ಮತ್ತು ಯೂರೋಪಿನಲ್ಲಿ ಶಾಂತಿಯನ್ನು ಉತ್ತೇಜಿಸುವ ಬಯಕೆಯು ಜರ್ಮನ್ ಚಾನ್ಸಲರ್ ಆಗಿದ್ದ ವಿಲ್ಲಿ ಬ್ರಾಂಟ್ ಅವರನ್ನು ಪೂರ್ವ ಯುರೋಪಿನ ಅಂದಿನ ಕಮ್ಯೂನಿಸ್ಟ್ ದೇಶಗಳಿಗೆ ಸಂಬಂಧಿಸಿದ ಓಸ್ಟ್ ಪಾಲಿಟಿಕ್(ಪೂರ್ವದ ರಾಜಕೀಯ) ಎಂದು ಕರೆಯಲ್ಪಡುವ ವಿದೇಶ ನೀತಿಯ ಮೂಲಕ ಪೂರ್ವ ಯುರೋಪಿಗೆ ತೆರೆದುಕೊಳ್ಳುವಂತೆ ಮಾಡುವಲ್ಲಿ ಪ್ರೇರೇಪಿಸಿತ್ತು.

ಏಕಧ್ರುವೀಯತೆಯನ್ನು ಉಳಿಸಿಕೊಳ್ಳುವ ಬಯಕೆ

ಇಂದಿನ ಪೀಳಿಗೆಯ ಯೂರೋಪಿನ ನಾಯಕಮಣಿಗಳ ಸ್ವಾತಂತ್ರ್ಯದ ಕೊರತೆಯನ್ನು ವಿವಿಧ ರೀತಿಯಲ್ಲಿ ವಿವರಿಸಲಾಗಿದೆ. ಈ ನಾಯಕಮಣಿಗಳ ಮಟ್ಟವೇ ಸಾಧಾರಣವಾಗಿರುವುದು ಇದಕ್ಕೆ ಕಾರಣವೆಂದು ಕೆಲವರು ಹೇಳಿದರೆ, ಇನ್ನೂ ಕೆಲವರು ಈ ನಾಯಕಮಣಿಗಳಿಗೂ ಮತ್ತು ಯುದ್ಧದಿಂದ ನೇರವಾಗಿ ಲಾಭ ಪಡೆಯುವ ಅಮೆರಿಕನ್ ಕಾರ್ಪೊರೇಟ್‌ಗಳೂ ಸೇರಿದಂತೆ ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ತೊಡಗಿರುವ ಕಾರ್ಪೊರೇಟ್‌ಗಳ ನಡುವೆ ಇರುವ ನಿಕಟ ಸಂಬಂಧದ ಕಾರಣವನ್ನು ಕೊಡುತ್ತಾರೆ. (ಉದಾಹರಣೆಗೆ, ಜರ್ಮನಿಯಲ್ಲಿ ಇಂದು ಅತಿ ದೊಡ್ಡ ವಿರೋಧ ಪಕ್ಷವಾಗಿರುವ ಮತ್ತು ಮಾಜಿ ಚಾನ್ಸಲರ್ ಏಂಜೆಲಾ ಮರ್ಕೆಲ್ ಅವರ ಪಕ್ಷವಾದ ಸಿಡಿಯುನ –ಕ್ರಿಶ್ಚಿಯನ್ ಡೆಮೊಕ್ರಾಟಿಕ್ ಯೂನಿಯನ್‌ನ–ನಾಯಕ ಫ್ರೆಡರಿಕ್ ಮೆರ್ಜ್ ಅವರು ಅಮೆರಿಕದ ಹಣಕಾಸು ದೈತ್ಯ 'ಬ್ಲಾಕ್ ರಾಕ್' ಸಂಸ್ಥೆಯ ಮಾಜಿ ಉದ್ಯೋಗಿ). ಕಾರಣ ಏನೇ ಇರಲಿ, ಮೊದಲನೆಯ ಮಹಾಯುದ್ಧದ ಮೊದಲು ಯೂರೋಪಿನಲ್ಲಿದ್ದ ಪರಿಸ್ಥಿತಿಯನ್ನು ನೆನಪಿಸುವ ಒಂದು ಸನ್ನಿವೇಶವು ಈಗ ನಮ್ಮ ಮುಂದಿದೆ: ಸಾಮಾನ್ಯ ಜನರಿಂದ ಸಂಪೂರ್ಣವಾಗಿ ಬೇರ್ಪಟ್ಟ ಸರ್ಕಾರಗಳು, ಈಗಿನಂತೆ ಆಗಲೂ, ಜನರನ್ನು ತ್ಯಾಗ–ಬಲಿದಾಗಳಿಗೆ ಮುಂದಾಗುವಂತೆ ಕೇಳಿದ್ದವು, ತರ್ಕ ರಹಿತವಾಗಿ.

ಜಗತ್ತನ್ನು ಏಕಧ್ರುವೀಯವಾಗಿ ಉಳಿಸಿಕೊಳ್ಳುವ ಬಯಕೆಯೇ, ನವ–ಸಂಪ್ರದಾಯಶರಣತೆಯಿಂದ ಪ್ರೇರಿತವಾದ ಪಾಶ್ಚ್ಯಾತ್ಯದೇಶಗಳು ರಷ್ಯಾದೊಂದಿಗೆ ಮುಖಾಮುಖಿಗೆ ಏಕೆ ಇಳಿದಿವೆ ಹಾಗೂ ಉಕ್ರೇನಿನೊಂದಿಗೆ ರಷ್ಯಾದ ತಿಕ್ಕಾಟಕ್ಕೆ ಒಂದು ಮಾತುಕತೆಯ ಮೂಲಕದ ಪರಿಹಾರವನ್ನು ಏಕೆ ತಡೆಯಲಾಗುತ್ತಿದೆ ಎಂಬುದನ್ನು ವಿವರಿಸುತ್ತದೆ. ಮಿನ್ಸ್ಕ ಒಪ್ಪಂದವು (ಕದನ ವಿರಾಮ, ಯುದ್ಧ ಕೈದಿಗಳ ಬಿಡುಗಡೆ, ಡಾನ್‌ಬಾಸ್‌ನ ಕೆಲವು ಪ್ರದೇಶದಲ್ಲಿ ಸ್ವಯಮಾಡಳಿತವನ್ನು ಕೊಡುವ ಸಂವಿಧಾನಿಕ ಸುಧಾರಣೆ ಮತ್ತು ಗಡಿ ನಿಯಂತ್ರಣವನ್ನು ಉಕ್ರೇನ್ ಸರ್ಕಾರಕ್ಕೆ ಒಪ್ಪಿಸುವ ಕ್ರಮಗಳನ್ನು ಇದು ಒಳಗೊಂಡಿತ್ತು–ಅನು) ಈ ಸಂಘರ್ಷದ ಪರಿಹಾರಕ್ಕೆ ಒಂದು ಆಧಾರವನ್ನು ಒದಗಿಸಿತ್ತು. ಇದನ್ನು ಫ್ರಾನ್ಸ್ ಮತ್ತು ಜರ್ಮನಿ ಬೆಂಬಲಿಸಿದ್ದವು. ಅದನ್ನು ಬ್ರಿಟನ್ ಮತ್ತು ಅಮೆರಿಕಾ ಬುಡ ಮೇಲು ಮಾಡಿದವು. ಜರ್ಮನಿಯ ರಾಜಕೀಯ ನೇತಾರ ಆಸ್ಕರ್ ಲಾಫಾಂಟೈನ್ ಸೇರಿದಂತೆ ಅನೇಕರು, ಮಿನ್ಸ್ಕ ಒಪ್ಪಂದವು ಸಂಧಾನದ ಮೂಲಕ ಬರುವ ಒಪ್ಪಂದಕ್ಕೆ ಆಧಾರವಾಗಬಹುದು ಎಂದು ನಂಬುತ್ತಾರೆ. ಮಾತುಕತೆಗಳ ನಂತರ ಏರ್ಪಡುವ ಕದನ ವಿರಾಮವು ವಿಪತ್ತನ್ನು ತಪ್ಪಿಸಬಲ್ಲದು. ಆದರೆ, ರಷ್ಯಾದಲ್ಲಿ ಆಳ್ವಿಕೆ ಬದಲಾವಣೆಯ ಕನಸು ಕಾಣುವುದನ್ನು ಅಮೆರಿಕ ಇನ್ನೂ ನಿಲ್ಲಿಸಿಲ್ಲ: ಯುದ್ಧ ಮುಂದುವರಿದರೆ, ಪುಟಿನ್ ವಿರುದ್ಧ ಅವರ ಆಂತರಿಕ ವಲಯದಿಂದಲೇ ದಂಗೆ ಏಳುತ್ತದೆ ("ಹೊರಗಿನ" ಒಂದಿಷ್ಟು ಪ್ರಚೋದನೆಯೊಂದಿಗೆ) ಎಂದು ಅದು ಆಶಿಸುತ್ತದೆ. ಮಾತುಕತೆಯ ಮೂಲಕ ಇತ್ಯರ್ಥಕ್ಕಾಗಿ ಅಮೆರಿಕಾದಿಂದ ಸ್ವತಂತ್ರವಾದ ಒಂದು ನಿಲುಮೆಯನ್ನು ತಳೆದು ಯುರೋಪ್ ಎಷ್ಟು ಬೇಗ ಕಾರ್ಯಪ್ರವೃತ್ತವಾಗುತ್ತದೆಯೋ, ಸಂಬಂಧಪಟ್ಟ ಎಲ್ಲರಿಗೂ ಅಷ್ಟು ಒಳ್ಳೆಯದು.

ಕಾಡಬಿಸನಹಳ್ಳಿ, ವೈಟ್ ಫೀಲ್ಡ್, ರಿಂಗ್ ರಸ್ತೆ ಪೂರ್ತಿಯಾಗಿ ಮುಳುಗಡೆ ಆಗಿದ್ದವು. ಇಲ್ಲಿನ ಶಾಸಕ ಅರವಿಂದ ಲಿಂಬಾವಳಿ 'ಹೆಚ್ಚಿಗೆ ಮಳೆ ಬಂದ್ರೆ ನಾನೇನು ಮಾಡೋಕೆ ಆಗುತ್ತೆ' ಎಂದು ಬೇಜವಾಬ್ದಾರಿ ಉತ್ತರ ಕೊಟ್ಟರು. ಜನ ಪ್ರವಾಹದಲ್ಲಿ ಮುಳುಗಿರುವಾಗ ಮಸಾಲೆ ದೋಸೆ ಸವಿಯಲು ಎಳಸು ಸಂಸದ ತೇಜಸ್ವಿಸೂರ್ಯ ಕರೆಕೊಟ್ಟಿದ್ದು ವೈರಲ್ ಆಗಿತ್ತು. ಬೆಂಗಳೂರಿನ ಉಸ್ತುವಾರಿಗಿರಿಗೆ ಕಚ್ಚಾಡಿಕೊಂಡು ಸದಾ ಸುದ್ದಿಯಲ್ಲಿರುತ್ತಿದ್ದ ಪ್ರಭಾವಿ ಮಂತ್ರಿಗಳಿಬ್ಬರು ದಿವ್ಯ ಮೌನಕ್ಕೆ ಶರಣಾಗಿದ್ದರು ಎಂದು ಆರೋಪಿಸಿದ್ದಾರೆ.

ಬೆಂಗಳೂರು ನಗರದ ನೈಸರ್ಗಿಕ ರಚನೆ, ಬೆಂಗಳೂರು ನಗರ ಸಮುದ್ರಮಟ್ಟದಿಂದ ಮೂರು ಸಾವಿರ ಅಡಿ ಎತ್ತರದಲ್ಲಿರುವ ನಗರ. ಇದರ ರಕ್ಷಣೆಗೆ ಬನ್ನೇರುಘಟ್ಟ ದಟ್ಟ ಅರಣ್ಯವೂ ಇದೆ. ಪ್ರವಾಹಕ್ಕೆ ಸಿಲುಕಲು ಅಕ್ಕಪಕ್ಕದಲ್ಲಿ ಯಾವ ನದಿಯೂ ಇಲ್ಲ. ಹೀಗಿದ್ದೂ ಬೆಂಗಳೂರು ಪ್ರವಾಹಕ್ಕೆ ಸಿಲುಕಿದ್ದು ಯಾಕೆ? ಎನ್ನುವ ಪ್ರಶ್ನೆಗೆ ದಂಡಿ ಉತ್ತರ ಇವೆಯಾದರೂ, ಕಾರ್ಯಗತಗೊಳಿಸಲು ಯಾರಿಗೂ ಇಚ್ಛಾಸಕ್ತಿ ಇಲ್ಲ. ಕೆರೆಗಳ ನಗರ ಬೆಂಗಳೂರಿನಲ್ಲೀಗ ಕೆಲವೇ ಕೆಲವು ಕೆರೆ ಉಳಿದಿವೆ. ಕೆರೆಗಳು ಲೇಔಟ್, ಐಷಾರಾಮಿ ವಿಲ್ಲಾಗಳು, ಗಗನಚುಂಬಿ ಕಟ್ಟಡಗಳು ತಲೆ ಎತ್ತಿ ನಿಂತಿವೆ. ಕೆರೆ ಕಬಳಿಸಿದ್ದು ಸಾಕಾಗದೇ ರಾಜಕಾಲುವೆಗಳನ್ನು ಒತ್ತುವರಿ ಮಾಡಲಾಗಿದೆ; ಕೆಲವೆಡೆ ಪೂರ್ತಿಯಾಗಿ ಮುಚ್ಚಲಾಗಿದೆ. ಮತ್ತೆ ಕೆಲವೆಡೆ ಗ್ರ್ಯಾವಿಟಿಗೆ ವಿರುದ್ಧವಾಗಿ ಕಾಲುವೆಯ ದಿಕ್ಕನ್ನೇ ಬದಲಾಗಿಸಲಾಗಿದೆ. ಮಳೆನೀರು ಕಾಲುವೆ ಎಂದು ದಾಖಲೆಗಳಲ್ಲಿದೆ. ಆದರೆ ಇವು ಎಲ್ಲಿಯೂ ಕಾಣುವುದಿಲ್ಲ! ಕೆರೆ, ರಾಜಕಾಲುವೆ ಮತ್ತು ಇವುಗಳ ಭಫೋರ್ ಜೋನ್ (ಸುರಕ್ಷಿತ ವಲಯ), ರಸ್ತೆ, ಗೋಮಾಳ ಹೀಗೆ ಎಲ್ಲವನ್ನೂ ಒಂದಿಂಚೂ ಬಿಡದೇ ನುಂಗಿದ ಮೇಲೆ ಮಳೆ ನೀರು ಹರಿದು ಹೋಗುವುದಾದರೂ ಎಲ್ಲಿಗೆ? ಎಂದು ಪ್ರಶ್ನಿಸಿದ್ದಾರೆ.

ನಗರದ ಬಹುತೇಕ ಐತಿಹಾಸಿಕ ಕೆರೆಗಳು ಈಗ ಲೇಔಟ್‌ಗಳಾಗಿವೆ. ಅಕ್ರಮವಾಗಿ ಬಿಲ್ಡಿಂಗ್ ನಿರ್ಮಿಸುವವರು ಮೊದಲಿಗೆ ಕೆರೆ ಜಾಗವನ್ನು ಒತ್ತುವರಿ ಮಾಡಿಕೊಂಡು, ಕೆರೆಯನ್ನು ಕುಗ್ಗಿಸುತ್ತಾರೆ. ಬಳಿಕ ಅದನ್ನು ಪೂರ್ತಿ ಮುಚ್ಚಿ, ಅದರ ಮೇಲೆ ಲೇಔಟ್‌ಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಇವುಗಳಲ್ಲಿ ಹಲವು ಪ್ರತಿಷ್ಠಿತ ಲೇಔಟ್‌ಗಳು ಪ್ರಮುಖ ಕೆರೆಗಳ ಮೇಲೆ ನಿರ್ಮಾಣವಾಗಿರುವುದು ಆಘಾತಕಾರಿ ವಿಚಾರ. ಕೇವಲ 42 ಕೆರೆಗಳು ಒತ್ತುವರಿಯಾಗಿವೆ ಎನ್ನುವುದು ಒಂದು ಸಣ್ಣ ಸಂಖ್ಯೆ ಅಷ್ಟೆ. ಐಟಿ ಕಂಪನಿಗಳು, ಡೆವಲಪರ್‌ಗಳು, ಶಾಲೆ, ಕಾಲೇಜು, ಆಸ್ಪತ್ರೆಯವರು ಭಾಗಿಯಾಗಿದ್ದಾರೆ. ಖಾಸಗಿ ವ್ಯಕ್ತಿಗಳು ಸೇರಿ ಸರ್ಕಾರದ ಬಹುತೇಕ ಎಲ್ಲ ಇಲಾಖೆಗಳೂ ಕೆರೆ ಒತ್ತುವರಿ ಮಾಡಿಕೊಂಡಿವೆ. ಇದನ್ನು ಪಕ್ಷತೀತವಾಗಿ ತನಿಖೆ ನಡೆಸುವುದಾಗಿ ಸರಕಾರ ಹೇಳಿದೆ. ಆದರೆ ಡಸ್ಟಬೀನ್ ಸೇರದೆ ಇರಲಿ. ಕೆರೆ ನುಂಗಿದವರಿಂದ ನೀರು ಕಕ್ಕಿಸುವ ಕೆಲಸವನ್ನು ಸರಕಾರ ಮಾಡುವಂತಾಗಲಿ.

ಅಮಿತ್ ಶಾ ತೆಲಂಗಾಣದಲ್ಲಿ ಹೇಳಿದ್ದರಲ್ಲಿ

ಪುಟ 11 ರಿಂದ

ಮಹತ್ವದ ಐತಿಹಾಸಿಕ ಪುರಾವೆ ಇದೆ. ಮಹಾರಾಜರು ಹಿಂದೂ ರಾಜ್ಯವನ್ನು ಸ್ಥಾಪಿಸುವುದಾದರೆ ಭಾರತದಿಂದ ಸ್ವಾತಂತ್ರ್ಯವನ್ನು ಘೋಷಿಸುವ ಹಕ್ಕಿಗೆ ಅದರ ವಿರೋಧ ಇರಲಿಲ್ಲ. ಜೂನ್ 1947 ರಲ್ಲಿ, ತಿರುವಾಂಕೂರಿನ ಮಹಾರಾಜ ಶ್ರೀ ಚಿಥಿರ ತಿರುನಾಳ್ ತನ್ನ ದಿವಾನ ಸಿ ಪಿ ರಾಮಸ್ವಾಮಿ ಅಯ್ಯರ್ ಮೂಲಕ ಭಾರತದಿಂದ ಸ್ವತಂತ್ರವಾದ ರಾಜ್ಯವನ್ನು ಸ್ಥಾಪಿಸುವ ಉದ್ದೇಶವನ್ನು ಘೋಷಿಸಿದರು. "ರೇರ್ ಅರ್ಥ್ಸ್: ಕೋಲ್ಡ್ ವಾರ್ಸ್ ಇನ್ ದಿ ಆನಲ್ಸ್ ಆಫ್ ಟ್ರಾವಂಕೂರ್" (ಅಪರೂಪದ ಮಣ್ಣುಗಳು: ತಿರುವಾಂಕೂರಿನ ಇತಿಹಾಸದ ಪುಟಗಳಲ್ಲಿ ಶೀತಲ ಸಮರಗಳು) ಎಂಬ ಪ್ರಬಂಧದಲ್ಲಿ, ಪ್ರೊಫೆಸರ್ ಇಟ್ಟಿ ಅಬ್ರಹಾಂ ಈ ಆತ್ಮವಿಶ್ವಾಸಕ್ಕೆ ಕಾರಣ ಅಲ್ಲಿದ್ದ ಅಪರೂಪದ ಮಣ್ಣುಗಳು ಮತ್ತು ಥೋರಿಯಂ ನಿಕ್ಷೇಪಗಳು ಎಂದು ಹೇಳುತ್ತಾರೆ. ಅವರ ಪ್ರಕಾರ, ತಿರುವಾಂಕೂರು ಬ್ರಿಟಿಷ್ ಹಿತಾಸಕ್ತಿಗಳೊಂದಿಗೆ ರಹಸ್ಯ ಮಾತುಕತೆಗಳನ್ನು ನಡೆಸಿತ್ತು. ಜೂನ್ 11, 1947 ರಂದು ಅಯ್ಯರ್ ತಿರುವಾಂಕೂರಿನ ಸ್ವಾತಂತ್ರ್ಯವನ್ನು ಘೋಷಿಸಿದರು. ಅವರು ಖಾನ್ ಬಹದ್ದೂರ್ ಅಬ್ದುಲ್ ಕರೀಮ್ ಅವರನ್ನು ಪಾಕಿಸ್ತಾನಕ್ಕೆ ತಿರುವಾಂಕೂರಿನ ಪ್ರತಿನಿಧಿ ಎಂದು ಘೋಷಿಸಿದರು! ಇದು ನಿಜಾಮ ಮಾಡಿದ್ದಕ್ಕಿಂತಲೂ ಹೆಚ್ಚು! ಕಮ್ಯುನಿಸ್ಟರು ಮತ್ತು ಕಾಂಗ್ರೆಸ್ ನೇತೃತ್ವದಲ್ಲಿ ತಿರುವಾಂಕೂರಿನ ಜನರು ಇದರ ವಿರುದ್ಧ ಸಜ್ಜುಗೊಂಡಾಗ, ಮಹಾರಾಜರು ಹಿಂದೂ ಮಹಾ ಸಭೆಯಿಂದ ಬೆಂಬಲವನ್ನು ಪಡೆದರು. ಇಂದಿನ ಆಡಳಿತಗಾರರ ಪೂಜ್ಯಮೂರ್ತಿಯಾಗಿರುವ ವಿ.ಡಿ. ಸಾವರ್ಕರರು ಅಯ್ಯರ್‌ಗೆ ಒಂದು ವಾರದೊಳಗೆ ಟೆಲಿಗ್ರಾಮ್ ಕಳುಹಿಸಿದರು. ಅದರ ಪಠ್ಯವು ಅಬ್ರಹಾಂ ರವರ ಪ್ರಬಂಧದಲ್ಲಿ ಲಭ್ಯವಿದೆ. ಅದು ಹೀಗಿದೆ: "ಹೈದರಾಬಾದಿನ ಮುಸ್ಲಿಂ ಆಳರಸ ನಿಜಾಮ, ಈಗಾಗಲೇ ತನ್ನ ಸ್ವಾತಂತ್ರ್ಯವನ್ನು ಘೋಷಿಸಿದ್ದಾರೆ ಮತ್ತು ಇತರ ಮುಸ್ಲಿಂ ಸಂಸ್ಥಾನಗಳು ಹಾಗೆ ಮಾಡುವ ಸಾಧ್ಯತೆಯಿದೆ. ಹಿಂದೂ ಸಂಸ್ಥಾನಗಳು ತಮಗೂ ಅದೇ ಹಕ್ಕುಗಳಿವೆ ಎಂದು ಪ್ರತಿಪಾದಿಸುವ ಧೈರ್ಯ ತೋರುತ್ತಿವೆ ...ನಾನು ಮಹಾರಾಜರನ್ನು ಮತ್ತು ನಮ್ಮ ಹಿಂದೂ ರಾಜ್ಯವಾದ ತಿರುವಾಂಕೂರ್‌ನ ಸ್ವಾತಂತ್ರ್ಯವನ್ನು ಘೋಷಿಸುವ ದೂರದೃಷ್ಟಿಯ ಮತ್ತು ಧೈರ್ಯದ ಸಂಕಲ್ಪವನ್ನು ಬೆಂಬಲಿಸುತ್ತಿದ್ದೇನೆ". ಇದೀಗ ಹಿಂದೂ ಮಹಾಸಭಾದ ನೇತಾರನ ಬಾಯಿಂದಲೇ ಹೊರಬಂದಿರುವ ಅದರ ನಿಜವಾದ ಪಾತ್ರ ಎನ್ನಬಹುದು. ನಿಜಾಮನ ವಿರುದ್ಧ ಹೋರಾಡುವ ಬದಲು, ಅವರು ಆತನ ಸ್ವಾತಂತ್ರ್ಯವನ್ನು ಅನಿವಾರ್ಯವೆಂದು ಸ್ವೀಕರಿಸಿದರು ಮತ್ತು ಅದನ್ನು ಇನ್ನೊಂದು ಸಂಸ್ಥಾನ– ಒಂದು ಹಿಂದೂ ಸಂಸ್ಥಾನ – ಭಾರತಕ್ಕೆ ಸೇರಿಕೊಳ್ಳದಿರಲು ಕಾರಣವಾಗಿ ಬಳಸಿಕೊಂಡರು.

ಸುಳ್ಳು 'ಕ್ರೊನೋಲೊಜಿ'

ಮಹಾರಾಜರುಗಳು ಮತ್ತು ಪಾಳೆಯಗಾರರ ಧಾರ್ಮಿಕ ಗುರುತು ಚರಿತ್ರೆಯನ್ನು ಹುಸಿಯಾಗಿಸುವುದಕ್ಕೆ ಅನುಗುಣವಾಗಿರುವ ವರೆಗೆ ಅವರ ಬಗ್ಗೆ ಮೃದು ಭಾವನೆ ಹಿಂದುತ್ವ ಬಲಪಂಥಕ್ಕೆ ರಕ್ತಗತವಾಗಿರುವ ಸಂಗತಿ. ಅವರ ದಬ್ಬಾಳಿಕೆಗೆ ಅವರದೇ ಧಾರ್ಮಿಕ ಪಂಥದ ರೈತರು ಮತ್ತು ಬಡವರು ಗುರಿಯಾಗಿದ್ದರು ಎಂಬುದು ಅವರಿಗೆ ಬೇಕಾಗಿಲ್ಲ, ಏಕೆಂದರೆ ಅವರಿಗೆ ಧರ್ಮ ಎಂಬುದು ರಾಜಕೀಯಕ್ಕೆ ಸಂಬಂಧಿಸಿದ್ದು, ನಂಬಿಕೆಗೆ ಸಂಬಂಧಿಸಿದ್ದಲ್ಲ. ನಿಜಾಮ ಆಳ್ವಿಕೆಯನ್ನು ಮುಸ್ಲಿಮ್ ವರ್ಸಸ್ ಹಿಂದೂ ಎಂದು ತಪ್ಪಾಗಿ ವರ್ಣಿಸುತ್ತಾರೆ, ತಿರುವಾಂಕೂರು ಮಹಾರಾಜ ಮತ್ತು ಜಮ್ಮು ಮತ್ತು ಕಾಶ್ಮೀರದ ಮಹಾರಾಜ ಹರಿ ಸಿಂಗ್ ಅವರಂತಹ ಇತರ ಆಳರಸರು ಭಾರತದ ಏಕತೆಗೆ ವಿರುದ್ಧವಾಗಿ ಮಾಡಿದ ಉಲ್ಲಂಘನೆಯ ಅಪರಾಧಗಳನ್ನು ಕ್ಷಮಿಸುತ್ತಾರೆ. ಹೀಗಾಗಿ ಜಮ್ಮು ಮತ್ತು ಕಾಶ್ಮೀರದಲ್ಲಿ ಮಹಾರಾಜ ಹರಿಸಿಂಗ್ ಅವರ ಜನ್ಮದಿನವನ್ನು ರಜಾದಿನವಾಗಿ ಆಚರಿಸಲಾಗುವುದು ಎಂದು ಕೇಂದ್ರ ಸರ್ಕಾರದ ನಾಚಿಕೆಗೇಡಿನ ಘೋಷಣೆಯು ಇತಿಹಾಸವನ್ನುಸುಳ್ಳು'ಕ್ರೊನೋಲೊಜಿ'(ಘಟನಾಕ್ರಮ) ಯಾಗಿ ಬದಲಾಯಿಸುವ ಪ್ರಯತ್ನವಾಗಿದೆ. ಹರಿ ಸಿಂಗ್ ಅವರು ಮೊದಲು ಪಾಕಿಸ್ತಾನದೊಂದಿಗೆ "ಸ್ಟಾಂಡ್ ಸ್ಟಿಲ್"(ನಿಲುಗಡೆ) ಒಪ್ಪಂದಕ್ಕೆ ಸಹಿ ಹಾಕುವ ಇಚ್ಛೆಯನ್ನು ಘೋಷಿಸಿದರು. ತದನಂತರ ಭಾರತ ಮತ್ತು ಪಾಕಿಸ್ತಾನ ಎರಡರಿಂದಲೂ ಸ್ವತಂತ್ರವಾಗಿ ಉಳಿಯುವ ಉದ್ದೇಶವನ್ನು ಘೋಷಿಸಿದರು. ಭಾರತಕ್ಕೆ ಸೇರ್ಪಡೆಯಾಗಬೇಕು ಎಂಬ ಶೇಖ್ ಅಬ್ದುಲ್ಲಾ ಮತ್ತು ನ್ಯಾಶನಲ್ ಕಾನ್ಫರೆನ್ಸ್ ನೇತೃತ್ವದಲ್ಲಿ ಮುಸ್ಲಿಂ ರೈತರ ಬೃಹತ್ ಜನಾಂದೋಲನಗಳು ಮತ್ತು ಊಳಿಗಮಾನ್ಯ ವಿರೋಧಿ ಹೋರಾಟಗಳ ಒತ್ತಡದ ಅಡಿಯಲ್ಲಿ ಅವರು ಅಂತಿಮವಾಗಿ ಭಾರತಕ್ಕೆ ಸೇರ್ಪಡೆಯ ಪತ್ರಕ್ಕೆ ಸಹಿ ಹಾಕಬೇಕಾಯಿತು. ಇಂದು, ಹರಿ ಸಿಂಗ್ ಅವರನ್ನು ವೈಭವೀಕರಿಸಲಾಗಿದೆ ಮತ್ತು ಕಾಶ್ಮೀರವು ಭಾರತದೊಂದಿಗೆ ಉಳಿಯಲು ಹೋರಾಡಿದವರನ್ನು ಧಾರ್ಮಿಕ ಗುರುತಿನ ಸಂಕುಚಿತ ಮಸೂರದ ಮೂಲಕ ನಿಂದಿಸಲಾಗುತ್ತಿದೆ

ಸಂಗತಿಗಳಿಂದ ಸತ್ಯವನ್ನು ಹೆಕ್ಕಬೇಕಂತೆ. ಜವಾಬ್ದಾರಿಯುತ ಸ್ಥಾನಗಳಲ್ಲಿರುವವರು ಅನುಸರಿಸ ಬಯಸಬಹುದಾದ ಒಂದು ಜಾಣ ಗಾದೆಯಿದು.

ರಾಜ್ಯಪಾಲರು ಕೇಂದ್ರ ಸರಕಾರದ ಏಜೆಂಟರಂತೆ

ಪುಟ 12 ರಿಂದ

ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಗೋಪೀನಾಥ ರವೀಂದ್ರನ್ ಅವರನ್ನು 'ಕ್ರಿಮಿನಲ್' ಎಂದು ಕರೆದಿದ್ದಾರೆ. ಇವರಿಬ್ಬರೂ ಆರೆಸ್ಸೆಸ್‌ನ ದ್ವೇಷ ಪಟ್ಟಿಯಲ್ಲಿರುವವರು. ಅವರ ದ್ವೇಷವನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಒಂದು ರಾಜ್ಯದ ಸಂವಿಧಾನಿಕ ಹುದ್ದೆಯಲ್ಲಿರುವ ವ್ಯಕ್ತಿ ಆ ದಾಳಿಯ ಅಸ್ತ್ರವಾಗುವದು ಹೇಗೆ ಸಾಧ್ಯ ಎಂದು ಪಿಣರಾಯಿ ವಿಜಯನ್ ತಮ್ಮ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನಿಸಿದರು. ಡಾ.ಗೋಪಿನಾಥ್ ರವೀಂದ್ರನ್ ಅವರನ್ನು ಆರ್‌ಎಸ್‌ಎಸ್‌ನ ಉಪಕುಲಪತಿಯಾಗಿ ಮರುನೇಮಕ ಮಾಡುವ ನಿರ್ಧಾರವನ್ನು ಅವರು ಸಮರ್ಥಿಸಿಕೊಂಡರು.

ಈ ಸಂದರ್ಭದಲ್ಲಿ, ದೇಶಾದ್ಯಂತ ರಾಜ್ಯಪಾಲರು ಮತ್ತು ರಾಜ್ಯ ಸರ್ಕಾರಗಳ ನಡುವೆ ನಡೆಯುತ್ತಿರುವ ವಿವಾದದಲ್ಲಿ ಪ್ರಮುಖ ಅಂಶವೆಂದರೆ ವಿಶ್ವವಿದ್ಯಾನಿಲಯಗಳಲ್ಲಿ ಉಪಕುಲಪತಿಗಳ ನೇಮಕ ಎಂಬ ಸಂಗತಿಯತ್ತ ಅವರು ಗಮನ ಸೆಳೆದರು. ಉನ್ನತ ಶಿಕ್ಷಣ ಕ್ಷೇತ್ರದ ಮೇಲೆ ಹಿಡಿತ ಸಾಧಿಸಿ ಆ ಮೂಲಕ ಭಾರತದಲ್ಲಿ ತಮಗೆ ಬೇಕಾದ ಇತಿಹಾಸವನ್ನು ತಮ್ಮದೇ ಆದ ರೀತಿಯಲ್ಲಿ ಸೃಷ್ಟಿಸುವುದು ಸಂಘಪರಿವಾರದ ಅಜೆಂಡಾ. ಅವರಿಗೆ ವಿಶ್ವವಿದ್ಯಾನಿಲಯಗಳು ಅವರ ರಾಜಕೀಯ ಪ್ರಯೋಗಶಾಲೆಗಳು. ರಾಜಸ್ಥಾನ, ತಮಿಳುನಾಡು ಮತ್ತು ಬಂಗಾಳದಲ್ಲಿ ಎಲ್ಲಾ ರಾಜ್ಯಪಾಲರು ರಾಜ್ಯ ಸರಕಾರದ ಹಣದಿಂದ ನಡೆಯುತ್ತಿರುವ ವಿಶ್ವವಿದ್ಯಾನಿಲಯಗಳಲ್ಲಿಯೂ ಸಂಘ ಪರಿವಾರದ ಸಂಪರ್ಕ ಹೊಂದಿರುವ ಉಪಕುಲಪತಿಗಳನ್ನು ನೇಮಿಸಲು, ಅವರ ಮೂಲಕ ಅವುಗಳಲ್ಲಿ ಸಂಘ ಪರಿವಾರದವರನ್ನು ತುಂಬಿಸಲು ಪ್ರಯತ್ನಿಸುತ್ತಿದ್ದಾರೆ. ಕೇರಳದಲ್ಲಿ ಹಾಗೆ ಮಾಡುವ ಯಾವುದೇ ಪ್ರಯತ್ನವನ್ನು ಬಲವಾಗಿ ವಿರೋಧಿಸಲಾಗುವುದು ಎಂದು ಮುಖ್ಯಮಂತ್ರಿಗಳು ಹೇಳಿದರು.

ಸರಕಾರದ ಕಾಳಜಿ ಇರುವುದು ಜನತೆ ಮತ್ತು ಈ ದೇಶದ ಬಗ್ಗೆ. ರಾಜ್ಯಪಾಲರೊಡನೆ ಸಂಘರ್ಷದ ನಿಲುವು ತಮ್ಮ ಸರಕಾರದ್ದಲ್ಲ. ಭಿನ್ನಾಭಿಪ್ರಾಯಗಳು ಇರಬಹುದು. ಅವನ್ನು ವ್ಯಕ್ತಪಡಿಸುವ ವಿಧಾನಗಳನ್ನು ಸಂವಿಧಾನ, ನಿಯಮಾವಳಿಗಳು ನಮೂದಿಸಿವೆ. ಇವನ್ನು ಅನುಸರಿಸುವ ಬದಲು ರಾಜಭವನದಲ್ಲಿ ಪತ್ರಿಕಾಗೋಷ್ಠಿ ಕರೆದಿರುವುದು ಕೇರಳದಲ್ಲಿ ಮಾತ್ರವಲ್ಲದೆ ದೇಶದಲ್ಲೇ ಅಸಾಮಾನ್ಯ ಘಟನೆಯಾಗಿದೆ. ಆದ್ದರಿಂದಲೇ ಈ ಪತ್ರಿಕಾಗೋಷ್ಠಿಯನ್ನು ಕರೆಯಲಾಯಿತು ಎಂದು ಮುಖ್ಯಮಂತ್ರಿಗಳು ಹೇಳಿದರು.

NEW No. MAG(3)/NPP/205/2021-2022
JANASHAKTHI KANNADA VARA PATRIKE OCTOBER 3-9, 2022 Price: Rs. 10/- Date of Publication: 30 September 2022 RNI No. KARKAN /2006/17926 Posted on 03-10-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2



ಕಾಲದ ಕುಲುಮೆಯಲ್ಲಿ ಪುಟಿದೆದ್ದ ಕೆಂಪು ತಾರೆ,

ಕ್ರಾಂತಿಕಾರಿ ಹಿರಿಯ ಮಾರ್ಕ್ಸ್‌ವಾದಿ ನಾಯಕ ಕಾಮ್ರೇಡ್ ಕೋಡಿಯೇರಿ ಬಾಲಕೃಷ್ಣನ್ ಇನ್ನಿಲ್ಲ

ಸಿಪಿಐ(ಎಂ) ನ ಹಿರಿಯ ನಾಯಕ, ಪೊಲಿಟ್ ಬ್ಯೂರೋ ಸದಸ್ಯರಾಗಿದ್ದ ಕಾಮ್ರೆಡ್ ಕೋಡಿಗೇರಿ ಬಾಲಕೃಷ್ಣನ್ ರವರು ಅನಾರೋಗ್ಯದಿಂದ ಇದೇ 2022 ಅಕ್ಟೋಬರ್ 1ರಂದು ಚೆನ್ನೈನ ಅಪೊಲೋ ಆಸ್ಪತ್ರೆಯಲ್ಲಿ ನಿಧನರಾದರು. ಕ್ಯಾನ್ಸರ್ ಖಾಯಿಲೆಯಿಂದ ಬಳಲುತ್ತಿದ್ದ ಅವರಿಗೆ 69 ವರ್ಷ ವಯಸ್ಸಾಗಿತ್ತು. ಕೇರಳದ ಸಿಪಿಐಎಂ ರಾಜ್ಯ ಕಾರ್ಯದರ್ಶಿಗಳಾಗಿ, ಸಚಿವರಾಗಿಯೂ ಕಾರ್ಯ ನಿರ್ವಹಿಸಿದ್ದರು.ಕೊಡಿಯೇರಿ ಬಾಲಕೃಷ್ಣನ್ ಅವರು 16 ನವೆಂಬರ್ 1953 ರಂದು ಕಣ್ಣೂರು ಜಿಲ್ಲೆಯ ತಲಶ್ಶೇರಿಯ ಕೊಡಿಯೇರಿಯಲ್ಲಿ ಜನಿಸಿದರು. ಕೋಡಿಯೇರಿಯವರ ತಂದೆ ಶಾಲಾ ಶಿಕ್ಷಕರಾಗಿದ್ದ ಕುಂಜುನ್ನಿ ಕುರುಪ್ ಮತ್ತು ತಾಯಿ ನಾರಾಯಣಿ ಅಮ್ಮ.

ಅವರು, 1970ರಲ್ಲಿ ಹದಿಹರೆಯದಲ್ಲಿದ್ದಾಗಲೇ ಸಿಪಿಐ(ಎಂ) ಸೇರಿದ್ದರು. ಅವರು ಓನಿಯನ್ ಸರಕಾರಿ ಪ್ರೌಢಶಾಲೆ ಯ ವಿದ್ಯಾರ್ಥಿಯಾಗಿದ್ದಾಗ ಕೇರಳ ಸ್ಟೂಡೆಂಟ್ಸ್ ಫೆಡರೇಶನ್ ಘಟಕ ಆರಂಭಿಸಿ ಅದರ ಕಾರ್ಯದರ್ಶಿಯಾಗಿದ್ದರು. ಆಗ ಅವರು ಹತ್ತನೆಯ ತರಗತಿ ವಿದ್ಯಾರ್ಥಿ. ಅದು ಮುಂದೆ ಸ್ಟೂಡೆಂಟ್ಸ್ ಫೆಡರೇಶನ್ ಆಫ್ ಇಂಡಿಯಾ ಆಗಿ ಮಾರ್ಪಾಡಾಯಿತು. 1970 ರ ಡಿಸೆಂಬರ್ ನಲ್ಲಿ ತಿರುವನಂತಪುರಂನಲ್ಲಿ ಭಾರತ ವಿದ್ಯಾರ್ಥಿ ಫೆಡರೇಶನ್ ಸಂಸ್ಥಾಪನಾ ಸಮ್ಮೇಳನ ಜರುಗಿದಾಗ ವಿದ್ಯಾರ್ಥಿ ನಾಯಕರಾಗಿ ಭಾಗವಹಿಸಿದ್ದರು.

ಡೆಮಾಕ್ರಟಿಕ್ ಯೂತ್ ಫೆಡರೇಶನ್ ಆಫ್ ಇಂಡಿಯಾ ಸೇರಿದಂತೆ ವಿದ್ಯಾರ್ಥಿ ಮತ್ತು ಯುವಜನ ಚಳುವಳಿಯಲ್ಲಿ ಪಕ್ಷದ ವಿವಿಧ ಮುಂಚೂಣಿ ಸಂಘಟನೆಗಳಲ್ಲಿ ನಾಯಕತ್ವದ ಪಾತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಕೊಡಿಯೇರಿ ಅವರು 1980 ರಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವ ಫೆಡರೇಶನ್ (ಡಿವೈಎಫ್ಐ) ಕಣ್ಣೂರು ಜಿಲ್ಲಾ ಅಧ್ಯಕ್ಷರಾಗಿ ಯುವಜನ ಹೋರಾಟಕ್ಕೆ ನೇತೃತ್ವ ನೀಡಿದ್ದರು. ಕೋಡಿಯೇರಿಯವರು ತಮ್ಮ 20ನೇ ವಯಸ್ಸಿನಲ್ಲಿದ್ದಾಗ 1975–77ರ ತುರ್ತು ಪರಿಸ್ಥಿತಿಯಲ್ಲಿ, 16 ತಿಂಗಳುಗಳ ಕಾಲ ಜೈಲಿನಲ್ಲಿದ್ದರು.

1970 ರಲ್ಲಿ ಸಿಪಿಐ(ಎಂ) ಪಕ್ಷದ ಸದಸ್ಯರಾದ ಅವರು , ಯೆಂಗಾಯಿಲ್ ಪೀಡಿಕಾ ಶಾಖೆಯ ಕಾರ್ಯದರ್ಶಿಯಾದರು. ನಂತರ ಕಣ್ಣೂರು ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಅವರು ಐದು ಬಾರಿ–1982, 1987, 2001, 2006 ಮತ್ತು 2011 ರಲ್ಲಿ ತಲಶ್ಶೇರಿಯಿಂದ ಶಾಸಕರಾಗಿ ಆಯ್ಕೆಯಾದರು.

2001 ರಿಂದ 2006 ರವರೆಗೆ, ಹಾಗೂ 2011 ರಿಂದ 2016 ರವರೆಗೆ ಕೇರಳ ವಿಧಾನಸಭೆಯಲ್ಲಿ ವಿರೋಧ ಪಕ್ಷದ ಉಪನಾಯಕರಾಗಿದ್ದರು. 2006 ರಿಂದ 2011 ರವರೆಗೆ ಎಡ ಪ್ರಜಾಸತ್ತಾತ್ಮಕ ರಂಗದ ಸರಕಾರದ ಅವಧಿಯಲ್ಲಿ ಗೃಹ ಸಚಿವರಾಗಿಯೂ ಕಾರ್ಯ ನಿರ್ವಹಿಸಿದ್ದರು. ಪ್ರವಾಸೋದ್ಯಮ ಖಾತೆಯನ್ನೂ ನಿರ್ವಹಿಸಿದ್ದಾರೆ.

ಅಗಲಿದ ಸಂಗಾತಿಗೆ ನಮನಗಳು.

ಕಮ್ಯೂನಿಸ್ಟ್ ಚಳವಳಿಯ ಆರಂಭಿಕ ಹೆಜ್ಜೆಗಳು–ಕೃತಿ ಬಿಡುಗಡೆ

ವಿಮೋಚನಾ ಚಳವಳಿಯಿಂದ ಆರಂಭವಾದ ಕಮ್ಯೂನಿಸ್ಟರ ಕ್ರಾಂತಿಕಾರಿ ಹೆಜ್ಜೆಗಳು ಈಗಲೂ ದೇಶದೆಲ್ಲೆಡೆ ಜೀವಂತವಾಗಿವೆ. ಶೋಷಿತ ಜನಚಳವಳಿಯ ಜತೆ ಕಮ್ಯೂನಿಸ್ಟರು ಅವಿನಾಭಾವ ಸಂಬಂಧ ಹೊಂದಿರುವುದೇ ಇದಕ್ಕೆ ಪ್ರಮುಖ ಕಾರಣ ಎಂದು ಸಿಐಟಿಯು ಸಂದೇಶ ಮಾಸ ಪತ್ರಿಕೆಯ ಸಂಪಾದಕ ಕೆ.ಮಹಾಂತೇಶ್ ಅಭಿಪ್ರಾಯಪಟ್ಟರು.



ಬಿಡುಗಡೆ ಮಾಡಿ ಮಾತನಾಡುತ್ತಿರುವ ಕೆ. ಮಹಾಂತೇಶ್

ಚಿಂತಕ ಡಾ.ಕೃಷ್ಣಪ್ಪ ಕೊಂಚಾಡಿ ಅನುವಾದಿತ ಮುಝಫರ್ ಅಹ್ಮದ್‌ರ 'ಕಮ್ಯುನಿಸ್ಟ್ ಚಳವಳಿಯ ಆರಂಭಿಕ ಹೆಜ್ಜೆಗಳು' ಎಂಬ ಕೃತಿಯನ್ನು ಮಂಗಳೂರಿನಲ್ಲಿ ಸಪ್ಟೆಂಬರ್ 25 ರಂದು ಬಿಡಿಗಡೆಗೊಳಿಸಿ ಮಾತನಾಡಿದ್ದರು.

ದೇಶದಲ್ಲಿ ಕಮ್ಯುನಿಸ್ಟ ಚಳುವಳಿಯನ್ನು ಕಟ್ಟಿದ ಪ್ರತಿಯೊಬ್ಬರು ಹೆಜ್ಜೆ ಗುರುತುಗಳನ್ನು ಬಿಟ್ಟುಹೋಗಿದ್ದಾರೆ. ಇಂತಹ ಭಿನ್ನ ನೆಲೆಯ ಹೆಜ್ಜೆಗಳಿಂದಲೇ ನೂರು ವರ್ಷಗಳ ಬಳಿಕವೂ ಈ ಚಳವಳಿ ಸಕ್ರಿಯವಾಗಿದೆ. ಜನ ಸಮುದಾಯದ ಜೊತೆಗೆ ಅವಿನಾಭಾವ ಸಂಬಂಧ ಉಳಿಸಿಕೊಂಡು ಮತ್ತಷ್ಟು ಬೆಳೆಸಬೇಕಾಗಿದೆ ಎಂದರು.

ಭಾರತೀಯ ಸ್ವಾತಂತ್ರ್ಯ ಚಳವಳಿಯು ಕಮ್ಯೂನಿಸ್ಟ್ ಪಕ್ಷದ ಸ್ಥಾಪನೆಯ ಬಳಿಕವಷ್ಟೇ ಒಂದು ಕ್ರಾಂತಿಕಾರಿ ಪಥದತ್ತ ಸಾಗಲು



ಸಾಧ್ಯವಾಗಿತ್ತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಪೂರ್ಣ ಸ್ವರಾಜ್ಯ ಬೇಡಿಕೆಯನ್ನು ಮೊದಲು ಕಮ್ಯುನಿಸ್ಟರೇ ಮಂಡಿಸಿದ್ದನ್ನು ಕೆ.ಮಹಾಂತೇಶ್ ನೆನಪಿಸಿದರು.

ಪುಸ್ತಕ ಪರಿಚಯಿಸಿದ ನಿವೃತ್ತ ಪ್ರಾಧ್ಯಾಪಕ ಡಾ.ರಾಜೇಂದ್ರ ಉಡುಪ ಮಾತನಾಡಿ, ಕಮ್ಯುನಿಸ್ಟ್ ಪಕ್ಷದ ಹುಟ್ಟೇ ಒಂದು ಸಾಹಸವಾಗಿದೆ. 1920ರ ಕಾಲಘಟ್ಟದಲ್ಲಿ ಜನ್ಮ ತಾಳಿದ ಭಾರತದ ಕಮ್ಯುನಿಸ್ಟ್ ಪಕ್ಷವನ್ನು ಮೊಳಕೆಯಲ್ಲೇ ಚಿವುಟಿ ಹಾಕಲು ಬ್ರಿಟಿಷರು ಹೆಣೆದ ತಂತ್ರಗಳು ಅಗಾಧವಾದದ್ದು. ಅವುಗಳನ್ನೆಲ್ಲಾ ಮೆಟ್ಟಿ ನಿಂತು ಅನುಭವಿಸಿದ ಯಾತನಾಮಯ ಬದುಕಿನ ಎಳೆಎಳೆಯನ್ನು ಮುಝಫರ್ ಅಹ್ಮದ್‌ರವರು ಬಿಚ್ಚಿಟ್ಟ ರೀತಿ ರೋಮಾಂಚನಕಾರಿಯಾಗಿದೆ ಎಂದರು. "ಹಿಂದುತ್ವದ ಹೆಸರಿನಲ್ಲಿ ಅಧಿಕಾರಕ್ಕೆ ಬಂದವರು 'ಸರ್ವೇಜನಾ: ಸುಖಿನೋ ಭವಂತು' ಎಂಬ ವೈದಿಕ ನುಡಿಗಟ್ಟನ್ನೇ ಮರೆತು 'ಅದಾನಿ ಜನೋ ಸುಖಿನೋ ಭವಂತು' ಮಂತ್ರ ಜಪಿಸುತ್ತಿದ್ದಾರೆ ಎಂದು ಹೇಳಿದರು.

ಅನುವಾದಕ ಡಾ. ಕೃಷ್ಣಪ್ಪ ಕೊಂಚಾಡಿ ಮಾತನಾಡಿ, 'ಸದ್ಯದ ಸ್ಥಿತಿಯಲ್ಲಿ ಸಾರಾಸಗಟಾಗಿ ಅವಹೇಳನಕ್ಕೆ ಒಳಗಾಗುತ್ತಿರುವ ಹಾಗೂ ಕ್ಷಣ ಕ್ಷಣಕ್ಕೂ ದೇಶಪ್ರೇಮವನ್ನು ಸಾಬೀತುಪಡಿಸುವ ಸ್ಥಿತಿಯನ್ನು ಎದುರಿಸುತ್ತಿರುವ ಮುಸ್ಲಿಂ ಸಮುದಾಯ ದೇಶಕ್ಕಾಗಿ ಮಾಡಿದ ತ್ಯಾಗ ಬಲಿದಾನವನ್ನು ಇಂದಿನವರಿಗೆ ಪರಿಚಯಿಸಲು ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದೇನೆ. ಈ ಕೃತಿಯ ಅನೇಕ ಹೊಸದೃಷ್ಟಿಕೋನಗಳ ಹೂರಣ' ಎಂದರು.

ಅತಿಥಿಗಳಾಗಿ ಭಾಗವಹಿಸಿದ ನಿವೃತ್ತ ಪ್ರಾಂಶುಪಾಲ ಎನ್. ಇಸ್ಮಾಯಿಲ್ ಮಾತನಾಡಿ, 'ಸಮಾಮಾಜವು ಮತ್ತೆ ಹಿಂದಿನ ಸೌಹಾರ್ದದ ಸ್ಥಿತಿಗೆ ಮರಳಲು ಸಾಧ್ಯವಾಗದು ಎಂಬಷ್ಟರಮಟ್ಟಿಗೆ ಸಮಾಜವನ್ನು ಕೋಮುವಾದಿ ಶಕ್ತಿಗಳು ಆವರಿಸಿವೆ. ಏನನ್ನು ಉಣಬೇಕು. ಯಾವ ಬಟ್ಟೆ ತೊಡಬೇಕು, ಏನನ್ನು ಮಾತನಾಡಬೇಕು ಎಂಬುದನ್ನೂ ಅಮಿತ್ ಶಾ, ಬೊಮ್ಮಾಯಿಯಂತವರು ನಿರ್ಧರಿಸುವ ಸ್ಥಿತಿ ಇದೆ' ಎಂದು ಕಳವಳ ವ್ಯಕ್ತಪಡಿಸಿದರು.

ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ಕೆ. ಯಾದವಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ವಿಚಾರವಾದಿ ಸಂಘಟನೆಯ ಡಾ.ನರೇಂದ್ರ ನಾಯಕ್, ಸಮುದಾಯ ಸಂಘಟನೆಯ ವಾಸುದೇವ ಉಚ್ಚಿಲ್, ಕೃತಿಯ ಮುಖಪುಟ ವಿನ್ಯಾಸಗಾರ ನಾಗೇಶ್ ಕಲ್ಲೂರು, ಪುಸ್ತಕ ಅನುವಾದಕ ಡಾ.ಕೃಷ್ಣಪ್ಪ ಕೊಂಚಾಡಿ ಉಪಸ್ಥಿತರಿದ್ದರು. ಸುನಿಲ್ ಕುಮಾರ್ ಬಜಾಲ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಯೋಗೀಶ್ ಜಪ್ಪಿನಮೊಗರು ಸ್ವಾಗತಿಸಿದರು. ಬಿ.ಕೆ.ಇಮ್ತಿಯಾಜ್ ವಂದಿಸಿದರು. ಮನೋಜ್ ವಾಮಂಜೂರು ಕಾರ್ಯಕ್ರಮ ನಿರೂಪಿಸಿದರು.

ಮೂಲ:	ಮುಝಫರ್ ಅಹ್ಮದ್
ಅನುವಾದ:	ಡಾ.ಕೃಷ್ಣಪ್ಪ ಕೊಂಚಾಡಿ
ಕೃತಿ:	ಭಾರತದ ಕಮ್ಯುನಿಸ್ಟ್ ಚಳವಳಿಯ ಪ್ರಾರಂಭದ ಹೆಜ್ಜೆ ಗುರುತುಗಳು
ಪ್ರಕಾಶನ:	ಜನ ಸಮುದಾಯ, ಮಂಗಳೂರು
ಬೆಲೆ:	650 ರೂ.

ವರದಿ: ವಾ.ಉ.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**